MYSORE LEGISLATIVE ASSEMBLY

Saturday, 18th March 1967

The House met in the Assembly Chamber, Vidhana Soudha, Bangalore at Thirty Minutes past Eight of the Clock.

MR. SPEAKER [SRI B. VAIKUNTA BALIGA, B.A., B.L.] in the Chair.

MOTION OF THANKS TO THE GOVERNOR'S ADDRESS

Debate Continued

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಮೂರನೆಯ ದಿನ, ನಾವು ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯ ನಿರ್ಣಯವನ್ನು ಚರ್ಚಿಸುತ್ತಾ ಇದ್ದೇವೆ. ಈ ನಿರ್ಣಯದಲ್ಲಿ ನಾನು ಒಂದು ತಿದ್ದುಪಡಿಯನ್ನೂ ಸಹ ಈ ಮಹಾ ಸಭೆಯ ಗಮನಕ್ಕೆ ತರಲು ಮಂಡಿಸಿದ್ದೆ; ತಾವು ಅದನ್ನು ಅಂಗೀಕರಿಸಿದ್ದೀರಿ ಅದಕ್ಕೆ ನಾನು ತಮಗೆ ಮೊದಲನೆಯದಾಗಿ ಕೃತಜ್ಞನಾಗಿದ್ದೇನೆ. ಮೈಸೂರು ರಾಜ್ಯದಲ್ಲಿ ಇರತಕ್ಕಂತಹ ಎರಡು ಕೋಟಿ ಜನಗಳಲ್ಲಿ ಐದನೇ ಒಂದು ಭಾಗದಷ್ಟು ಅಂದರೆ, ಸುಮಾರು ನಲವತ್ತು ಲಕ್ಷ ಜನ ಹರಿಜನ ಗಿರಿಜನರು ಇದ್ದಾರೆ. ಅವರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಧವಾದ ಧ್ಯೇಯ ಧೋರಣೆಯನ್ನಾಗಲೀ, ಸರ್ಕಾರದ ನೀತಿಯನ್ನಾಗಲೀ ಪ್ರಗತಿಯ ವಿಷಯವನ್ನಾಗಲೀ, ಸೂಚನೆ ಮಾಡಿಲ್ಲ. ರಾಜ್ಯಾಂಗಬದ್ಧವಾಗಿ ಹರಿಜನ ಗಿರಿಜನರಿಗೆ ಎಷ್ಟುಮಟ್ಟಿನ ಸೌಲತ್ತುಗಳನ್ನು ಕೊಡಬೇಕು? ಇರತಕ್ಕಂತಹ ಕಾನೂನುಗಳನ್ನು ಎಷ್ಟುಮಟ್ಟಿಗೆ ಜಾರಿಗೆ ತರಬೇಕಾಗಿತ್ತು, ಅದರ ಪ್ರಗತಿ ಏನು? ಧೋರಣೆ ಏನು? ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಎಲ್ಲಾ ವಿಧದಲ್ಲೂ ಖರ್ಚು ಮಾಡಿರತಕ್ಕ ಹಣದಲ್ಲಿ ಹರಿಜನ ಗಿರಿಜನರಿಗೆ ಎಷ್ಟು ಖರ್ಚು ಮಾಡಿದ್ದಾರೆ? ಮುಂದೆ ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಅವರ ಗುರಿ ಏನು ಎಂಬತಕ್ಕ ಅಂಶ ಒಂದೂ ಸಹ ಇಲ್ಲವೆಂದು ಅತ್ಯಂತ ದುಃಖದಿಂದ ಹೇಳಬೇಕಾಗಿದೆ, ಷೆಡ್ಯೂಲ್ಡ್ ಕ್ಯಾಸ್ಟ್ಸ್, ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಇತರೇ ಹಿಂದುಳಿದ ಪಂಗಡ ಅನ್ನುವುದು ರಾಷ್ಟ್ರಾಧ್ಯಕ್ಷರ ಆರ್ಡರ್ ಪ್ರಕಾರ ಒಂದು ಗೊತ್ತಾದ ಜನಾಂಗವಾಗಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯವರು 'other backward classes' ಎಂದು ಒಂದು ಹೆಡ್ಡಿಂಗ್ ಮಾತ್ರ ಹಾಕಿ ಈ ಎರಡು ಪಂಗಡಗಳ ಕುರುಹೇ ಇಲ್ಲದಂತೆ ಮಾಡಿದ್ದಾರೆ. ಕಳೆದ ಆರು ವರ್ಷ ಗಳಿಂದ ಹರಿಜನ ಗಿರಿಜನರ ಕಲ್ಯಾಣಕ್ಕೆ ಜಾರಿಯಲ್ಲಿದ್ದ ಯೋಜನೆಗಳು ಸಂಪೂರ್ಣವಾಗಿ ನಿಂತು ಹೋಗಿವೆ. ನಮ್ಮ ಮುಖ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡಾಗ ಅತ್ಯಂತ ಹೆಚ್ಚಿನ ಸೇವೆಯನ್ನು ಕಲ್ಪಿಸುತ್ತೇವೆ ಎಂದು ಅವರು ಹೇಳಿದ್ದರು. ಮೊನ್ನೆ ಅವರು ಮುಖ್ಯ ಮಂತ್ರಿಗಳಾಗಿ ಪುನಃ ಚುನಾಯಿತರಾದಾಗ ನಾನು ಜನ ಸೇವಕ, ನಾನು ಬಡವರ ಸೇವಕ ಎಂದು ಪ್ರಮಾಣವಚನ ತೆಗೆದುಕೊಂಡ ಸಂದರ್ಭದಲ್ಲಿ ಹೇಳಿದರು. ಆದರೆ ಹರಿಜನ ಗಿರಿಜನರ ಬಗ್ಗೆ ಅವರು ಎಷ್ಟುಮಟ್ಟಿಗೆ ಕಾರ್ಯ ಸಾಧನೆ ಮಾಡಿದ್ದಾರೆ. ಅವರ ಬಗ್ಗೆ ಎಷ್ಟುಮಟ್ಟಿಗೆ ಕಾಂಗ್ರೆಸ್ ಸರ್ಕಾರ ಮಾಡಿದಂತಹ ಸರ್ಕಾರದ ಆರ್ಡರ್‌ಗಳನ್ನು ಜಾರಿಗೆ ತಂದಿದ್ದಾರೆ ಎಂಬ ಕೆಲವು ಅಂಶಗಳನ್ನು ಹೇಳುತ್ತೇನೆ. 1961ನೇ ಇಸವಿಯಲ್ಲಿ ಹೌಸಿಂಗ್ ಸ್ಕೀಂ ಬದಲಾವಣೆಯಾಯಿತು. 1913ನೇ ಸಾಲಿನಲ್ಲಿ ಹರಿಜನ ಗಿರಿಜನರ ಪ್ರಗತಿಗಾಗಿ ಮುಮ್ಮಡಿ ಕೃಷ್ಣರಾಜರ ಕಾಲದಿಂದಲೂ ರಾಜ್ಯದಲ್ಲಿ ಒಂದು ಗೊತ್ತಾದ ನೀತಿ ಅನುಸರಿಸಿ, ಹರಿಜನಸೇವೆ ನಡೆದುಕೊಂಡು ಬಂದಿತು. 1940ರಲ್ಲಿ ಶ್ರೀ ಓ. ಪುಟ್ಟಣ್ಣರೆಡ್ಡಿ ಯವರು ದಿವಾನರಾಗಿದ್ದಾಗ 5 ಲಕ್ಷ ರೂಪಾಯಿನ ಒಂದು ಯೋಜನೆಯನ್ನು ಹರಿಜನರಿಗಾಗಿ ಸ್ಥಾಪನೆ ಮಾಡಿದರು. ಹರಿಜನರು ನೆಲೆಸುವುದಕ್ಕೆ ಯೋಗ್ಯವಾದ ಮನೆಕಟ್ಟಲು ಮನೆ ಒಂದಕ್ಕೆ 400 ರೂಪಾಯಿನ ಗ್ರ್ಯಾಂಟು ಕೊಡುತ್ತಾ ಇದ್ದರು. ಅದರಲ್ಲಿ ಅವರು ಮನೆಗಳನ್ನು ಕಟ್ಟಿ ಕೊಳ್ಳುತ್ತಾ ಇದ್ದರು, ಹಂದಿಗಳು, ನಾಯಿಗಳು, ಬೆಕ್ಕುಗಳಂತೆ ಜೀವನ ನಡೆಸುತ್ತಾ ಇದ್ದ ಇವರಿಗೆ

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ಮನೆ ಸಿಗುತ್ತಿದ್ದವು. ಆ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ರದ್ದು ಮಾಡಿತು. ಹಾಗಾದರೆ ಈಗ ಏನು ಮಾಡಿದ್ದಾರೆ? ಕೋ ಅಪರೇಟೀವ್ ಸೊಸೈಟಿಗಳನ್ನು ಮಾಡಿಕೊಂಡು ಅವುಗಳ ಮೂಲಕ ಹಣವನ್ನು ತೆಗೆದುಕೊಂಡು ಅವರು ಮನೆಯನ್ನು ಕಟ್ಟಿಕೊಳ್ಳಬೇಕೆಂದು 1961 ರಲ್ಲಿ ತಂದ ಒಂದು ಸರ್ಕಾರದ ಆರ್ಡರನ್ನು ಇದುವರೆಗೂ ಸರಿಯಾಗಿ ಜಾರಿಗೆ ತಂದಿಲ್ಲ. ಎಲ್.ಐ.ಸಿ. ಅವರು ಕೊಟ್ಟಿರುವ ಮೂರೂವರೆ ಕೋಟಿ ರೂಪಾಯಿಗಳಲ್ಲಿ ಇದುವರೆಗೂ ಒಂದು ಕೋಟಿ ಸಹ ಖರ್ಚಾಗಿಲ್ಲ. ಇದಕ್ಕಾಗಿ ಒಂದು ಕಾರ್ಪೋರೇಷನ್ ಮಾಡಿದ್ದಾರೆ. ಆ ಕಾರ್ಪೋರೇಷನ್‌ಗೆ ಒಬ್ಬ ಸರ್ಕಾರಿ ಅಧಿಕಾರಿಗಳನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಜನತಾ ಬಜಾರ್ ಮಾಡಿ ಒಂದೂವರೆ ಸಾವಿರ ರೂಪಾಯಿ ಸಂಬಳ ಕೊಟ್ಟು ಅದಕ್ಕೆ ಒಬ್ಬ ಅಧ್ಯಕ್ಷರನ್ನು ನೇಮಿಸಿರತಕ್ಕ ಈ ಕಾಂಗ್ರೆಸ್ ಸರ್ಕಾರ ಹರಿಜನ ಗಿರಿಜನರ ಪುರೋಭಿವೃದ್ಧಿಗಾಗಿ ಮಾಡಿರತಕ್ಕ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಕಾರ್ಪೋರೇಷನ್‌ಗೆ ಒಬ್ಬ ಖಾಸಗಿ ಅಧ್ಯಕ್ಷರನ್ನು ನೇಮಿಸತಕ್ಕಂಥ ಮನಸ್ಸು ಇವರಲ್ಲಿ ಇಲ್ಲವಲ್ಲಾ ಎಂದು ವಿಷಾದದಿಂದ ತಿಳಿಸಬೇಕಾಗಿದೆ. ಎಲ್.ಐ.ಸಿ. ಅವರು ಕೊಟ್ಟ ಮೂರೂವರೆ ಕೋಟಿ ರೂಪಾಯಿನಲ್ಲಿ 2 ಕೋಟಿಗಿಂತ ಹೆಚ್ಚು ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ವಿಲೇವಾರಿಗೆ ಸರಿಯಾದ ವ್ಯವಸ್ಥೆ ಇಲ್ಲ, ಬಂದಂಥ ಎಲ್ಲಾ ರೆಕಾರ್ಡ್‌ಗಳೂ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಕೊಳೆಯುತ್ತಿವೆ. ಈಗ ಕೇವಲ 80 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಗೊತ್ತಾಗಿದೆ. ಇನ್ನು ಉಳಿದೆಲ್ಲಾ ಹಣವು ಹಾಗೆಯೇ ಬ್ಯಾಂಕಿನಲ್ಲಿ ಇದೆ. ನಾನಾವಿಧವಾದ ಕಂಡೀಷನ್‌ಗಳನ್ನು ಮನೆ ಕಟ್ಟುವ ನೀತಿಯಲ್ಲಿ ಹಾಕಿದ್ದಾರೆ. ಸೈಟ್ ಹೀಗಿರಬೇಕು, ಪ್ಲಾನ್ ಹಾಗಿರಬೇಕು, ಮನೆ ಹೀಗಿರಬೇಕು, ಎನ್ನತಕ್ಕ ಅನೇಕ ವಿಧವಾದ ತೊಡಕುಗಳನ್ನು ಹಾಕಿದ್ದಾರೆ. ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಅನೇಕ ತೊಂದರೆಗಳನ್ನು ಉಂಟುಮಾಡಿ ಅವರಿಗೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಹಳ್ಳಿಯಲ್ಲಿರತಕ್ಕ ಒಬ್ಬ ಹರಿಜನ ಕೂಲಿಗಾರ ಅವನ ಅನುಕೂಲಕ್ಕನುಗುಣವಾಗಿ ಒಂದು ಮನೆಯನ್ನು ಕಟ್ಟಿಕೊಳ್ಳುತ್ತಾನೆ, ಅದರಲ್ಲಿ ಅವನು ಹಸು ಕಟ್ಟಿಕೊಳ್ಳಬೇಕು, ದನ ಕಟ್ಟಿಕೊಳ್ಳಬೇಕು, ಕುರಿ ಕಟ್ಟಿಕೊಳ್ಳಬೇಕು, ಕೋಳಿ ಕಟ್ಟಿಕೊಳ್ಳಬೇಕು, ಅಡಿಗೆ ಮಾಡಿಕೊಳ್ಳಬೇಕು. ಅಂತಹ ಒಂದು ಫಾರಂ ಹೌಸನ್ನು ಅವನು ಸ್ಥಳಕ್ಕೆ ಅನುಗುಣವಾಗಿ ಕಟ್ಟಿಕೊಳ್ಳುತ್ತಾ, ಇದನ್ನು ಕಾರ್ಪೋರೇಶನವರು ಈಗ ಮಾಡಿರತಕ್ಕ ಪ್ಲಾನ್ ಸರಿಯಿಲ್ಲ. ಅವನ ಜೀವನ ಮಟ್ಟಕ್ಕೆ ತಕ್ಕಂತೆ ಮತ್ತು ಅವರ ಅನುಕೂಲಕ್ಕೆ ಅನುಗುಣವಾಗಿ ಆ ಪ್ಲಾನ್ ಇಲ್ಲ. ಆದ್ದರಿಂದ ಅವನಿಗೆ ಅನೇಕ ತೊಡಕುಗಳು ಎಂದು ಈ ಗೃಹ ನಿರ್ಮಾಣ ಯೋಜನೆ ಕಾರ್ಯಗತವಾಗಿಲ್ಲ. ಅನುಕೂಲಕ್ಕೆ ಬದಲಾಗಿ ಅನಾನುಕೂಲ ಉಂಟಾಗಿದೆ. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಧವಾದ ಒಂದು ಸೂಚನೆಯೂ ಇಲ್ಲ. ಸರ್ಕಾರದವರು ಈ ಹರಿಜನರು ದೇಶದ ಬೆನ್ನು ಎಲುಬು ಎಂಬುದನ್ನು ತಿಳಿದಿದ್ದಾರೆ. ಕೂಲಿಗಾರರು, ಬಡವರು ಮತ್ತು ರೈತರ ರಕ್ಷಣೆಗಾಗಿ ಸಮತಾವಾದ ತತ್ವದ ಮೇಲೆ ಸಮಾಜವನ್ನು ರಚಿಸುತ್ತೇವೆ ಎಂದು ಹೇಳಿಕೊಂಡಿರತಕ್ಕ ಈ ಕಾಂಗ್ರೆಸ್‌ನವರು ಮತ್ತು ಕಾಂಗ್ರೆಸ್ ಸರ್ಕಾರ ತಮ್ಮ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳನ್ನು ಈ ದಿವಸ ಜಾರಿಗೆ ತರಲಿಲ್ಲವಲ್ಲಾ ಎಂದು ವಿಷಾದದಿಂದ ತಿಳಿಸಬೇಕಾಗಿದೆ. ಅವರು ಜನತೆಯ ಮುಂದೆ ಯಾವ ಒಂದು ಆದೇಶವನ್ನು ಇಟ್ಟರೋ ಅದನ್ನು ಕಾರ್ಯಗತ ಮಾಡಲಿಲ್ಲವಲ್ಲಾ ಎನ್ನತಕ್ಕ ಅಂಶವನ್ನು ಈ ಮಹಾ ಸಭೆಯ ಮುಂದೆ ನಾನು ಈಗ ವ್ಯಕ್ತಪಡಿಸಬೇಕಾಗಿದೆ.

ನೋಡಿ ಸ್ವಾಮಿ. ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮನೆಗಳನ್ನು ಕಟ್ಟಲು 33 ಸಾವಿರ ಮನೆಗಳನ್ನು ಕಟ್ಟುವ ಅಂದಾಜು ಇತ್ತು. 83.34 ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿದ್ದಾರೆ. ಅದರಲ್ಲಿ 26,261 ಮನೆಗಳನ್ನು ಕಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿ ನಿಜಲಿಂಗಪ್ಪನವರು ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿಕೊಂಡ ಮೇಲೆ ಎಷ್ಟು ಮನೆಗಳನ್ನು ಕಟ್ಟಿಸಿದ್ದಾರೆ ಎಂಬುದನ್ನು ಅವರೇ ಹೇಳಬೇಕು. ನನ್ನ ದೃಷ್ಟಿಯಲ್ಲಿ ಇದುವರೆಗೂ ಒಂದು ಮನೆಯೂ ಸಹ ಕಾರ್ಪೋರೇಷನ್‌ನಿಂದ ಪೂರೈಸಿಲ್ಲ. ಹರಿಜನರು ಸಾಲ ವಾಪಸ್ಸು ಕಟ್ಟಲು ಶಕ್ತರಲ್ಲ. ಆದ್ದರಿಂದ ಸೊಸೈಟಿ ಮೂಲಕ ಕಟ್ಟತಕ್ಕ ನೀತಿಯನ್ನು ಮೊದಲು ರದ್ದುಮಾಡಿ ಮೊದಲು ಯಾವ ರೀತಿ 'ಗ್ರ್ಯಾಂಟ್ ಇನ್‌ಏಡ್ ಸ್ಕೀಂ', ಇತ್ತೋ ಅದನ್ನೇ ಜಾರಿಗೆ ತಂದರೆ ಅವರ ಪ್ರಗತಿಯಾದೀತು ಎಂಬ ಅಂಶವನ್ನು ಈ ಮೂಲಕ ಸೂಚಿಸುತ್ತೇನೆ. ಇದನ್ನು ಸರ್ಕಾರ ಪರಿಶೀಲಿಸಬೇಕು.

ಕುಡಿಯುವ ನೀರಿನ ಬಾವಿಗಳನ್ನು ಹರಿಜನ ಗಿರಿಜನರಿಗೆ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಕೊಡಿಸುತ್ತಾ ಇದ್ದರು. ಅದನ್ನು ಪೂರ್ತಿಯಾಗಿ ರದ್ದು ಮಾಡಿದ್ದಾರೆ. ಅಂದರೆ ಈ ದಿವಸ ದೇಶದಲ್ಲಿ ಅಸ್ಪೃಶ್ಯತೆಯು ಸಂಪೂರ್ಣವಾಗಿ ತೊಲಗಿದೆ ಎಂದು ಭಾವನೆಯೇ? ಇನ್ನು ಮುಂದೆ

ಹರಿಜನರು ಎಲ್ಲರಂತೆ ಒಂದೇ ಬಾವಿಯಿಂದ ಕುಡಿಯುವ ನೀರನ್ನು ಬಳಸಬಹುದು ಎನ್ನುವುದೇ ಇವರ ಅಭಿಪ್ರಾಯವೇ ? ಈ ಅಭಿಪ್ರಾಯ ನಮ್ಮ ಮುಖ್ಯ ಮಂತ್ರಿಗಳಲ್ಲಿ ಇರಬಹುದು. ಆದರೆ ಈ ಕುಡಿಯುವ ನೀರಿನ ವಿಚಾರದಲ್ಲಿ ಈ ಅಸ್ಪೃಶ್ಯರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದಿನಿಂದಲೂ ಇದ್ದ ಪರಿಸ್ಥಿತಿಯೇ ಈಗಲೂ ಇರುತ್ತದೆ. ಈಗಲೂ ಸಹಾ ಹಳ್ಳಿಗಳಲ್ಲಿ ಸವರ್ಣೀಗಳು ಕುಡಿಯುವ ನೀರಿನ ಬಾವಿ ಪ್ರತ್ಯೇಕವಾಗಿವೆ, ಅವುಗಳಲ್ಲಿ ಈ ಅಸ್ಪೃಶ್ಯರು ನೀರನ್ನು ಬಳಸುವುದಕ್ಕೆ ಅವಕಾಶವಿಲ್ಲ. ಹೀಗೆ ಹರಿಜನರು ಮತ್ತು ಇತರೇ ಎಲ್ಲಾ ಜನರೂ ಒಂದೇ ಬಾವಿಯಲ್ಲಿ ಕುಡಿಯುವ ನೀರನ್ನು ಬಳಸುವ ಪದ್ಧತಿ ಕಾನೂನಿನಲ್ಲಿ ಇದ್ದರೂ ವ್ಯವಹಾರದಲ್ಲಿ ಬಳಕೆಯಲ್ಲಿ ಬಂದಿಲ್ಲ. ಆದುದರಿಂದ ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಬಗ್ಗೆ ಇದ್ದ ಸರ್ಕಾರಿ ಆಜ್ಞೆಯನ್ನು ಮೈಸೂರು ಸರ್ಕಾರ ರದ್ದು ಮಾಡಿದ್ದಾರೆ ಅದನ್ನು ಪುನಃ ಜಾರಿಗೆ ತಂದು ಇವರಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಹರಿಜನ ಗಿರಿಜನರಿಗೆ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಎಕನಾಮಿಕ್ ಏಡ್‌ಟು ಅಗ್ರಿಕಲ್‌ಚರ್ (Economic Aid to Agriculture), ಎಕನಾಮಿಕ್ ಏಡ್‌ಟು ಕ್ರಾಫ್ಟ್ಸ್ ವಗೈರೆ ಆರ್ಥಿಕ ಸಹಾಯದ ಸ್ಕೀಮುಗಳು ಇದ್ದವು. ಇವು ಒಂದನೆಯ ಪಂಚವಾರ್ಷಿಕ ಯೋಜನೆಯಲ್ಲೂ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೂ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲೂ ಜಾರಿಯಲ್ಲಿದ್ದವು. ಆದರೆ ಈಗಿರತಕ್ಕ ನಮ್ಮ ಮುಖ್ಯ ಮಂತ್ರಿಗಳು ಸರ್ಕಾರ ವಹಿಸಿಕೊಂಡನಂತರ ಇದನ್ನು ಪೂರ್ಣವಾಗಿ ರದ್ದುಮಾಡಿದ್ದಾರೆ. ಹರಿಜನ ಗಿರಿಜನರ ಅಭಿವೃದ್ಧಿಗಾಗಿ ನಡೆಸುತ್ತಿರುವ ಸಮಾಜಕಲ್ಯಾಣ ಇಲಾಖೆಯ ಆಡಳಿತವನ್ನು ಹಿಂದೆ ಶ್ರೀಮತಿ ಯಶೋದರಮ್ಮನವರು ನೋಡಿಕೊಳ್ಳುತ್ತಿದ್ದರು. ಅವರು ಕೇವಲ ಒಬ್ಬ ಆದರ್ಶ ಸಮಾಜಸೇವಕಿ ಯಾಗಬಲ್ಲರೇ ವಿನಾ ಒಬ್ಬ ರಾಜಕಾರಿಣಿಯಾಗಿ ಮಂತ್ರಿಯಾಗಿ ಕೆಲಸಮಾಡತಕ್ಕ ಶಕ್ತಿ ಅವರಿಗಿರಲಿಲ್ಲ. ಆದುದರಿಂದರೇ ಅವರ ಕಾಲದಲ್ಲಿ ಹರಿಜನಗಿರಿಜನರ ಅಭಿವೃದ್ಧಿಕಾರ್ಯಗಳೇನೂ ನಡೆಯಲಿಲ್ಲ. ಅವರ ಕಾಲದಲ್ಲೇ ಈ ಒಂದು ಆರ್ಥಿಕ ಸಹಾಯದ ಸ್ಕೀಮನ್ನೂ ರದ್ದುಮಾಡಿಬಿಟ್ಟರು. ಹೀಗಾಗಿ ಇಲ್ಲಿಯವರೆಗೂ ಇವರ ಅಭಿವೃದ್ಧಿ ಏನೇನೂ ಆಗಿಲ್ಲ. ಈ ರಾಜ್ಯದಲ್ಲಿ ಇಂದಿನ ಈ ಶಾಸನ ಸಭೆಯಲ್ಲಿ ಕೇವಲ 20 ಜನರು ಮಾತ್ರ ನಿಮ್ಮ ಪಂಗಡ ಮತ್ತು ನಿಮ್ಮವರ್ಗದವರಿದ್ದಾರೆ. ಈ 20 ಪ್ರತಿನಿಧಿಗಳ ಬೆಂಬಲದಿಂದ ನೀವು ಈ ದಿವಸ ಸರ್ಕಾರವನ್ನು ರಚನೆಮಾಡಿದ್ದೀರಿ. ಆ 20 ಜನರು ನಿಮ್ಮ ಪಕ್ಷವನ್ನು ಬಿಟ್ಟರೆ ನಿಮ್ಮಗತಿ ಏನು ? ಈ ದಿವಸ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ರಚನೆಮಾಡಿರತಕ್ಕ ಕಾಂಗ್ರೆಸ್ ಪಕ್ಷವೇ 4ನೇ ಮಹಾಚುನಾವಣೆಯಲ್ಲಿ ಶೇಕಡ 37.85 ಓಟುಗಳನ್ನುಗಳಿಸಿದ್ದಾರೆ, ಇತ್ತಕಡೆ ಇರತಕ್ಕ ನಮ್ಮ ವಿರೋಧಪಕ್ಷಗಳು ಸೇಕಡ 62.15ರಷ್ಟು ಓಟುಗಳನ್ನು 4ನೇ ಮಹಾ ಚುನಾವಣೆಯಲ್ಲಿ ರಾಷ್ಟ್ರಾದ್ಯಂತಗಳಿಸಿ ಇಲ್ಲಿ ಪ್ರತಿನಿಧಿಸಿದ್ದಾರೆ. ನೀವು ದೇಶದಲ್ಲಿರತಕ್ಕ ಸಾಮಾನ್ಯ ಜನರ ಕೂಲಿಗಾರರ ಹಾಗೂ ರೈತವರ್ಗದವರ ಹಿತವನ್ನು ಸಾಧಿಸದಿದ್ದರೆ ಈ ಅಧಿಕಾರ ಕ್ಷಣ ಮಾತ್ರವೂ ನಿಮ್ಮ ಕೈಲಿ ಉಳಿಯಲಾರದು. ನಿಮ್ಮ ಈ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಇಲ್ಲಿಯವರೆಗೂ ಯಾರಿಗೆ ಹೆಚ್ಚಿನ ಅನುಕೂಲ ದೊರೆತಿದೆ ಎಂದರೆ, ಅದು ಕೇವಲ ಕಾಂಗ್ರೆಸ್ ಪುಢಾರಿಗಳಿಗೆ ಮಾತ್ರ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ 25 ಸಾವಿರ ಕಾಂಗ್ರೆಸ್ ಪುಢಾರಿಗಳಿಗೆ ನೀವು ಬಾರ್ ಲೈಸೆನ್ಸ್‌ಗಳನ್ನೂ, ಬಸ್ ಪರ್ಮಿಟ್ ಗಳನ್ನೂ ಕೊಟ್ಟಿದ್ದೀರಿ ; ಲೈಸೆನ್ಸ್‌ಗಳನ್ನು ಕಂಟ್ರಾಕ್ಟ್‌ಗಳನ್ನು ಇತರ ಲೈಸೆನ್ಸ್ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಪಡೆದು ನೂರಕ್ಕೆ 30ರಷ್ಟು ಜನ ಪಂಚವಾರ್ಷಿಕ ಯೋಜನೆಯಿಂದ ಅನುಕೂಲಗಳನ್ನು ಪಡೆದಿದ್ದಾರೆ. ದೇಶದಲ್ಲಿ ಇನ್ನುಳಿದ ಶೇಕಡ 70ರಷ್ಟು ಬಡ ಜನರು ಯೋಜನೆಗಳಿಂದ ಯಾವ ಅನುಕೂಲಗಳನ್ನೂ ಪಡೆದಿಲ್ಲ. ಹೀಗಾಗಿ ದೇಶದಲ್ಲಿ ಇಲ್ಲಿಯತನಕ ನಡೆದಿರತಕ್ಕ ಯೋಜನೆಗಳ ಫಲವು ಕೆಲವು ಪುಢಾರಿಗಳ ಪಾಲಾಗಿದೆ. ಬಡವರಿಗೆ ಹರಿಜನರಿಗೆ ಇದರಿಂದ ಪ್ರಯೋಜನವಾಗಿಲ್ಲ. ಪಂಚವಾರ್ಷಿಕಯೋಜನೆಯ ಅರಿವೇ ಇಲ್ಲ.

ಇನ್ನು ಸರ್ಕಾರದವರು ಹರಿಜನರ ಹಿತ ಸಾಧಿಸಲು ಮಾಡಿರತಕ್ಕ ಕೆಲವು ಆಜ್ಞೆಗಳಿವೆ. ಅವುಗಳನ್ನು ಇಲ್ಲಿಯವರೆಗೂ ಸರ್ಕಾರ ಸರಿಯಾಗಿ ಜಾರಿಗೆ ಕೊಡದಿರುವುದಕ್ಕೆ ಕಾರಣಗಳೇನೆಂಬು ದನ್ನು ತಿಳಿಯತಕ್ಕ ಬಗ್ಗೆ ನಾನೀಗ ಅವುಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

MR. SPEAKER.—The whip must assess the time required by each member. What is the time allotted ? Of course let the hon'member take more time. This is his maiden speech.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ನಾನು ರೆವಲ್ಯೂಷನರಿ ಸ್ಪೀಚನ್ನು ಬೇಕಾದರೆ ಇಲ್ಲಿ ಮಾಡುತ್ತೇನೆ, ಸ್ವಾಮಿ.

ಅಧ್ಯಕ್ಷರು.—ನಾನು ಮೈಡನ್ ಸ್ಪೀಚ್ (maiden speech) ಮಾಡುತ್ತಿದ್ದಾರೆಂದು ಹೇಳಿದ್ದು ತಪ್ಪಾಯಿತ್ತೇನೊ !

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಇಲ್ಲಾ ಸ್ವಾಮಿ, ಅದು ನನಗೆ ಒಂದು ರೀತಿಯ ಅಭಿನಂದನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಹರಿಜನರ ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಳ್ಳೋಣ. 1937ರಲ್ಲಿ ಪ್ರಾಥಮಿಕ ಶಾಲೆಯಲ್ಲಿ, ಮಾಧ್ಯಮಿಕ ಶಾಲೆಯಲ್ಲಿ, ಪ್ರೌಢಶಾಲೆಗಳಲ್ಲಿ, ಕಾಲೇಜುಗಳಲ್ಲಿ ವ್ಯಾಸಂಗಮಾಡತಕ್ಕ ಹರಿಜನಗಿರಿಜನ ವಿದ್ಯಾರ್ಥಿಗಳಿಗೆ, ಕ್ರಮವಾಗಿ ಮಾಹೆಯಾನ ರೂಪಾಯಿ 3, ರೂಪಾಯಿ 7.50 ಮತ್ತು ರೂಪಾಯಿ 18.75 ಇತ್ತು. ವಿದ್ಯಾರ್ಥಿ ವೇತನದ ಎಲ್ಲ ದರ್ಜೆಯಲ್ಲಿಯೂ ಕೊಡಲಾಗುತ್ತಿತ್ತು. ಆದರೆ ಅದೇ ಮಟ್ಟ ಈಗಲೂ ಇದೆ. ಇದರಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಸರ್ಕಾರ ಈವರೆಗೂ ಹೆಚ್ಚಿಸಿಲ್ಲ. ಈ ಕಾಂಗ್ರೆಸ್ ಸರ್ಕಾರದವರು ಮೇಲಿಂದ ಮೇಲೆ ವಿದೇಶಗಳಿಂದ ಸಾಲಮಾಡಿ ನಮ್ಮನ್ನು ಇಂದು ಅಮೇರಿಕಾ ದೇಶಕ್ಕೆ ಭಿಕ್ಷಾಪಾತ್ರೆಯನ್ನು ಹಿಡಿದು ಹೋಗುವ ಭಿಕ್ಷುಕರನ್ನಾಗಿ ಮಾಡಿದ್ದಾರೆ. ದೇಶದಲ್ಲಿರತಕ್ಕ ಜನರನ್ನು ಪರಾವಲಂಬಿಗಳಾಗಿ ಮಾಡಿದ್ದಾರೆ. ದೇಶಕ್ಕೆ ಬೆನ್ನುಮೂಳೆಯಂತಿರುವ ಹರಿಜನ ಗಿರಿಜನರನ್ನು ಉದ್ಧಾರ ಮಾಡದೆ ಇವರು ನಮ್ಮ ದೇಶವನ್ನು ಸುಖೀರಾಜ್ಯವಾಗಿ ರಾಮರಾಜ್ಯವನ್ನಾಗಿ ಮಾಡುತ್ತೇವೆ ಎಂದು ಹೇಳುವುದು ಕೇವಲ ಕನಸು. ರಾಜ್ಯಸರ್ಕಾರದಿಂದ ರಚಿಸಲ್ಪಡತಕ್ಕ ಸಮಿತಿಗಳು, ಕಾರ್ಪೊರೇಷನ್‌ಗಳು ಮತ್ತು ಬೋರ್ಡುಗಳು ಇತ್ಯಾದಿಗಳಲ್ಲಿ ಹರಿಜನ ಗಿರಿಜನರ ಪ್ರಾತಿನಿಧ್ಯ ಎಷ್ಟಿರಬೇಕು ಎನ್ನತಕ್ಕ ಬಗ್ಗೆ 1961 ರಲ್ಲೇ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ ಆ ಆಜ್ಞೆಯನ್ನು ಸರ್ಕಾರ ಪಾಲಿಸುತ್ತಿಲ್ಲ. ಈ ದಿವಸ ನಮ್ಮ ಈ ರಾಜ್ಯಸರ್ಕಾರದ 22 ಜನರಿಂದ ಕೂಡಿದ ಈ ಮಂತ್ರಿ ಮಂಡಲದಲ್ಲೇ ನೀವು ಕೇವಲ ಒಬ್ಬ ಮಂತ್ರಿಯನ್ನೂ ಮತ್ತು ಉಪಮಂತ್ರಿಯನ್ನೂ ಹರಿಜನಗಿರಿಜನರ ವರ್ಗದಿಂದ ತೆಗೆದುಕೊಂಡಿರುವಾಗ ಹರಿಜನರ ಬಗ್ಗೆ ತಾವು ನ್ಯಾಯವಾಗಿ ಕಾನೂನು ಬದ್ಧವಾಗಿ ಹೇಗೆ ಕೆಲಸ ಮಾಡುತ್ತೀರಿ ? ಎಂಬುದು ಇಲ್ಲೇ ಎದ್ದು ಕಾಣುವ ಒಂದು ಪ್ರಶ್ನೆ. ಹರಿಜನ ಗಿರಿಜನರಿಗೆ ಕಾನೂನು ಬದ್ಧವಾಗಿ, ರಾಜ್ಯಾಂಗ ಬದ್ಧವಾಗಿ ಇಂತಿಷ್ಟೇ ಸ್ಥಳಗಳನ್ನು ಮೀಸಲಾಗಿಡಬೇಕೆಂದು ಸೂಚನೆ ಇದೆ. ಕಾನೂನುಗಳನ್ನು ಪಾಲಿಸದ ಈ ಸರ್ಕಾರ ಇನ್ನು ಹರಿಜನಗಿರಿಜನರನ್ನು ಉದ್ಧಾರಮಾಡುವುದು ಕೇವಲ ಕನಸು. ಅದಕ್ಕಾಗಿ ಹರಿಜನರಾದ ನಾವು ಈಗ ರಚನಾತ್ಮಕ ರೀತಿಯಲ್ಲಿ ನಮ್ಮ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಚಳುವಳಿಯನ್ನು ಈ ಸರ್ಕಾರದ ವಿರುದ್ಧ ಮಾಡಬೇಕಾಗಿ ಬಂದಿದೆ. ಈ ನಮ್ಮ ರಚನಾತ್ಮಕ ಚಳುವಳಿಯು ನಿಮಗೆ 1972ರ ಸಾಲಿಗೆ ಒಂದು ಪಾಠವನ್ನು ಕಲಿಸತಕ್ಕದ್ದಾಗಿದೆ. ಸರ್ಕಾರದ ಪ್ರತಿಯೊಂದು ಯೂನಿಟ್‌ಗಳಲ್ಲೂ ಮತ್ತು ಸಂಸ್ಥೆಗಳಲ್ಲೂ ಹರಿಜನ ಗಿರಿಜನಗಳಿಗೆ ರಾಜ್ಯಾಂಗ ಬದ್ಧವಾಗಿ ಶೇಕಡ 18ರಷ್ಟು ಸ್ಥಾನಗಳನ್ನು ಕೊಡಬೇಕೆಂದು ನಿಯಮವಿದೆ. ಇದು ರಾಜ್ಯಾಂಗ ನಿಯಮಾವಳಿ, ಅದು ಹರಿಜನರ ಹಕ್ಕು. ರಾಜ್ಯಾಂಗವು ಹರಿಜನರಿಗೆ ವಿಶೇಷ ರಿಯಾಯಿತಿಯನ್ನು ಕೊಟ್ಟಿದ್ದರೂ ಈ ಹಿಂದೆ ಇದೇ ಜನಾಂಗಕ್ಕೆ ಸೇರಿದ್ದ 14 ಜನ ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ಕೆಲಸದಿಂದ ತೆಗೆದು ಹಾಕಿದರು. ಅವರು ಈ ದಿವಸ ಬೀದಿಯ ಭಿಕಾರಿಗಳಾಗಿ ತಿರುಗುತ್ತಿದ್ದಾರೆ. ಈ ಯೋಚನೆಯಿಂದ ಒಬ್ಬ ಅಧಿಕಾರಿಗಳು ಸತ್ತೇಹೋದರು. ಹೀಗೆ ಈ ಕಾಂಗ್ರೆಸ್ ಸರ್ಕಾರದವರು ರಾಜ್ಯಾಂಗಬದ್ಧವಾಗಿ ಜಾರಿಗೆ ತರಬೇಕಾಗಿದ್ದ ಅನೇಕ ಕಾನೂನುಗಳನ್ನು ಜಾರಿಗೆ ತರದೆ ಹರಿಜನರಿಗೆ ಹಾಗೂ ದೇಶಕ್ಕೆ ದ್ರೋಹಮಾಡಿದ್ದಾರೆ. ಇಂಥವರು ದೇಶದ ಪ್ರತಿನಿಧಿಗಳಾಗುವುದು ಸರಿಯೇ ? ರಾಜ್ಯಾಂಗದಲ್ಲಿ 16 (4) 335 ಈ ವಿಧಿಗಳಲ್ಲಿ ಏನು ಹೇಳುತ್ತಿದೆ ಎಂಬುದನ್ನೆಲ್ಲಾ ಇವರು ಮರೆತಿದಾರೆ. ಅದಕ್ಕೆ ವಿರುದ್ಧ ಕೆಲಸಮಾಡುತ್ತಿದ್ದಾರೆ. ಹೀಗೆ ರಾಜ್ಯಾಂಗಬಾಹಿರವಾಗಿ ಕೆಲಸಮಾಡತಕ್ಕ ಜನರು ಅಧಿಕಾರದಲ್ಲಿರುವುದಕ್ಕೆ ಅವಕಾಶವಿಲ್ಲ, ಅವರು ಕೂಡಲೆ ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕೋ ಆಪರೇಟೀವ್ ಸೆಕ್ಟಾರಿನಲ್ಲಿ ಹರಿಜನ ಗಿರಿಜನರನ್ನು ಇವರು ಎಷ್ಟರಮಟ್ಟಿಗೆ ಉದ್ಧಾರಮಾಡಿದ್ದಾರೆಂಬುದನ್ನು ನೋಡೋಣ. ಹಾಲಿ ದೇಶದಲ್ಲಿ ಸುಮಾರು 331 ಕೋ ಆಪರೇಟಿವ್ ಫಾರ್‌ಮಿಂಗ್ ಸೊಸೈಟಿಗಳಿವೆ. ಇವುಗಳ ಮೂಲಕ ಬಡವರಾಗಿರತಕ್ಕ ಹರಿಜನ ಗಿರಿಜನರ ಹಿತ ಸಾಧಿಸಲು, ಅವಕಾಶ ಮಾಡುವುದಾಗಿ ಹೇಳುತ್ತಿದ್ದಾರೆ. ಅದು ಆಗಿಲ್ಲಾ. ಇವರು ಈ ಜನಾಂಗಕ್ಕೆ ಪ್ರತಿಯೊಂದು ಇಲಾಖೆಯಲ್ಲೂ ಸರ್ಕಾರಿ ಉದ್ಯೋಗಗಳಲ್ಲಿ ಏನು ಒಂದು ಗೊತ್ತಾದ ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಇನ್ನು ಈ ಜನರನ್ನು ಉದ್ಧಾರಮಾಡುತ್ತಾರೆಂದರೇನು ಅರ್ಥ ? ಹೀಗೆ ಕಾನೂನು ಬಾಹಿರವಾದ ಆಡಳಿತವನ್ನು ನಡೆಸು

ವುದು ನ್ಯಾಯವೇ ಎಂದು ಕೇಳುತ್ತಿದ್ದೇನೆ? ಈ ದಿವಸ ಕೆಲಸಮಾಡುತ್ತಿರುವ ತಾಲ್ಲೂಕ್ ಬೋರ್ಡ್ ಎಲೆಕ್ಟ್ರಿಸಿಟಿಬೋರ್ಡ್, ಕಾರ್ಪೊರೇಷನ್ ಮತ್ತು ಇತರೇ ಸರ್ಕಾರಿ ಸಹಾಯ ಪಡೆದು ಕೆಲಸ ಮಾಡುತ್ತಿರುವ ಸಂಸ್ಥೆಗಳಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಅದಕ್ಕೆ ಕಾರಣವೇನು ಸರ್ಕಾರವೇ ಹೇಳಬೇಕು. ಎಲ್ಲಿ ನೋಡಿದರೂ ಕಾಂಗ್ರೆಸ್ ಪುಢಾರಿಗಳ ಕೈವಾಡ. ಹರಿಜನರನ್ನು ಭಿಕ್ಷಕರನ್ನಾಗಿಮಾಡಿದ್ದಾರೆ. ಹರಿಜನರು ಭಿಕ್ಷಕರಲ್ಲ. ಇರತಕ್ಕ ವಿವಿಧ ವಿಶೇಷ ಸೌಲಭ್ಯಗಳನ್ನು ರಾಜ್ಯಾಂಗಬದ್ಧವಾದ ರೀತಿಯಲ್ಲಿ ಒತ್ತಾಯಮಾಡಿ ತಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳತಕ್ಕವರು ಎಂಬುದನ್ನು ನೀವು ಅರಿಯಬೇಕು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ನಿಜವಾಗಿ ನಮ್ಮ ರಕ್ಷಣೆಯನ್ನು ಮಾಡುತ್ತಾರೆಂದು ನಾನು ತಿಳಿದಿದ್ದೇನೆ. ತಾವು ರಚಿಸಿದ ಕೌನ್ಸಿಲ್ ಆಫ್ ಮಿನಿಸ್ಟರ್ಸ್‌ನಲ್ಲೀ ಹರಿಜನರಿಗೆ ಸೇಕಡ 18ರಷ್ಟು ಸ್ಥಾನ ಕೊಟ್ಟಿಲ್ಲ. ಸರ್ಕಾರದಲ್ಲಿ ನೂರಾರು ಕಮಿಟಿಗಳನ್ನು ಅವರು ರಚಿಸಿದ್ದಾರೆ. ಅಲ್ಲಿಯೂ ಸಹ ಪ್ರಾತಿನಿಧ್ಯವಿಲ್ಲ. ಈಗ ಹೊಸದಾಗಿ ಟ್ರಸ್ಟ್ ಬೋರ್ಡ್ ಕಮಿಟಿಯೊಂದನ್ನು, ಬೆಂಗಳೂರಿನಲ್ಲಿ ರಚನೆಮಾಡಿದ್ದಾರೆ. ಅದರಲ್ಲಿ ಒಬ್ಬ ಹರಿಜನ ಪ್ರತಿನಿಧಿಯೂ ಇಲ್ಲ. ಯಾರು ಕಾಂಗ್ರೆಸ್ ಬಾಲವನ್ನು ಹಿಡಿದುಕೊಂಡಿರುತ್ತಾರೋ ಅಂತಹವರಿಗೆ ಮಾತ್ರ ಅಲ್ಲಿ ಅವಕಾಶ ಕೊಟ್ಟಿದ್ದಾರೆ. ಹರಿಜನರಿಗೆ ಇವರು ಏನು ಹೇಳುತ್ತಾರೆಂದರೆ ಹರಿಜನರು ಭಿಕ್ಷಾಪಾತ್ರೆ ಹಿಡಿದಿರುವ ಭಿಕ್ಷುಕರು ಎನ್ನುತ್ತಾರೆ. ಅವರಿಗೆ ಏತಕ್ಕೆ ಸ್ಥಾನಗಳು ಬೇಕು ಎಂಬುದಾಗಿ ಹೇಳುತ್ತಾರೆ. ಇದು ನ್ಯಾಯವೇ ಎಂದು ಕೇಳುತ್ತೇನೆ.

ಇನ್ನು ಜಮೀನುಗಳನ್ನು ಕೊಡುವ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ—10 ಎಕರೆಗಳಿಗಿಂತ ಕಡಿಮೆ ಜಮೀನು ಇದ್ದರೆ ಅದನ್ನು ಹರಿಜನರಿಗೆ ಕೊಡಬೇಕು ಎಂತಲೂ ಅಥವಾ 10 ಎಕರೆಗಳಿಗಿಂತ ಜಾಸ್ತಿ ಇದ್ದರೆ ಅರ್ಧಭಾಗ ಹರಿಜನ ಗಿರಿಜನರಿಗೆ ಕೊಟ್ಟು ಇನ್ನುಳಿದ ಅರ್ಧಭಾಗವನ್ನು ಜಮೀನು ಇಲ್ಲದವರಿಗೆ ಕೊಡಬೇಕು ಎಂದು ಕಾನೂನು ಇದೆ, ಏನಾದರೂ ಅದನ್ನು ಜಾರಿಗೆ ತಂದಿದ್ದೀರಾ? ಇಲ್ಲ, ಜಾರಿಗೆ ತಂದಿಲ್ಲ. M. C. R. P. ಸ್ಕೀಮ್ ಎಂದೇನು ತಂದಿದ್ದಾರೆ ಅದಕ್ಕೆ 25 ಕಂಡೀಷನ್ನುಗಳನ್ನು ಹಾಕಿ ಖರ್ಚುಮಾಡದೆ ಸುಮಾರು 18 ಲಕ್ಷ ರೂಪಾಯಿಗಳನ್ನು ಹೋದ ವರ್ಷ 31ನೇ ಮಾರ್ಚಿನಲ್ಲಿ ಲ್ಯಾಪ್ಸ್ ಮಾಡುತ್ತಿದ್ದರು. ಆಗ ನಾನು ಇವರ ಗಮನಕ್ಕೆ ತಂದಿದ್ದರೂ ಸಹ ಆ ಹಣ ಇದುವರೆಗೂ ಖರ್ಚಾಗಲಿಲ್ಲ. ಸುಮ್ಮನೆ ಲಕ್ಷಾಂತರ ರೂಪಾಯಿಗಳನ್ನು ಇಂತಹ ಬಾಬುಗಳಿಗೆ ಒದಗಿಸುತ್ತಾರೆ. ಆದರೆ ಖರ್ಚುಮಾಡುತ್ತಾ ಇಲ್ಲ. ಅದರಿಂದ ಹರಿಜನರಿಗೆ ಪ್ರಯೋಜನವೂ ಆಗುವುದಿಲ್ಲ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರಿಗೆ ಕನ್ನಡವೇ ಬರುವುದಿಲ್ಲ. ಅಂದಮೇಲೆ ಅಂತಹವರು ಎಷ್ಟರಮಟ್ಟಿಗೆ ಹರಿಜನ-ಗಿರಿಜನರನ್ನು ಉದ್ಧಾರಮಾಡುತ್ತಾರೋ ಗೊತ್ತಿಲ್ಲ. ಅವರಿಗೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಎನ್ನುವ ಪದದಲ್ಲಿ ಸೇರಿಸಿರುವ ಜಾತಿಗಳನ್ನು ಹೇಳುವ ಶಕ್ತಿಯೂ ಇಲ್ಲ. ಮೈಸೂರು ಸರ್ಕಾರ ಅಸ್ಪೃಶ್ಯತಾ ನಿವಾರಣೆ ಮಾಡುವುದಕ್ಕೆ ಬೇಕಾದ ಪ್ರಚಾರವನ್ನಾಗಲೀ ಅಥವಾ ಪ್ರೊಪಗ್ಯಾಂಡವನ್ನಾಗಲೀ ಮಾಡುತ್ತಾ ಇಲ್ಲ. ಹಳ್ಳಿಗಾಡಿನಲ್ಲಿರತಕ್ಕ ಜನರ ಸಂಪರ್ಕ ಪಡೆದು ಅವರ ಪ್ರೀತಿ, ವಿಶ್ವಾಸಗಳನ್ನು ಗಳಿಸಿ ಅವರೊಡನೆ ಮಿಳಿತವಾಗುವುದಕ್ಕೆ ಬೇಕಾದ ಪ್ರಚಾರ ಹಾಗೂ ಪ್ರೊಪಗ್ಯಾಂಡ ಇವೇನೂ ನಡೆಯುತ್ತಿಲ್ಲ. ಪತ್ರಿಕೆಗಳು ಪ್ರಕಟವಾಗುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆ ಕಳೆದ 20 ವರ್ಷದಿಂದ ಸರ್ಕಾರದ ನೀತಿಯನ್ನು ಮಹಾತ್ಮ ಗಾಂಧಿಯವರ ಆದರ್ಶ ತತ್ವಗಳನ್ನು ಹಳ್ಳಿಗಾಡುಗಳಿಗೆ ಹೋಗಿ ಖುದ್ದಾಗಿ ಪ್ರಚಾರ ಮಾಡುತ್ತಿದ್ದರು. ಈಗ ಅಂತಹ ಪ್ರಚಾರಗಳ ವ್ಯವಸ್ಥೆ ಇಲ್ಲವೇ ಇಲ್ಲ. ಇನ್ನು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಈಗ ಜನರಲ್ ಹಾಸ್ಟೆಲ್ ಸ್ಕೀಂ ಒಂದನ್ನು ತೆಗೆದುಕೊಂಡು ಬಂದಿದ್ದಾರೆ. ಅದರಿಂದ ಅಸ್ಪೃಶ್ಯತೆ ನಿವಾರಿಸಲು ಅವಕಾಶವಿದ್ದರೂ, ಸರಿಯಾಗಿ ವಿದ್ಯಾರ್ಥಿಗಳಿಗೆ ಸಹಾಯ ದೊರಕುತ್ತಿಲ್ಲ.

Mr. SPEAKER.—Does not the member know that his time limit is over? He does not seem to come to a close. I have given him several mild hints to conclude his speech. I have allowed him so much of latitude, because this happens to be his maiden speech. I now call upon Sri Chikke Gowda to speak.

ಶ್ರೀ ಎಚ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಕಳೆದ ಮೂರು ದಿವಸಗಳಿಂದಲೂ ರಾಜ್ಯಪಾಲರು ಈ ಸಭೆಯನ್ನು ಉದ್ದೇಶಿಸಿ ಮಾಡಿದಂತಹ ಭಾಷಣದ ಮೇಲೆ ಹೆಚ್ಚಿಗೆ ನಮ್ಮ ವಿರೋಧ ಪಕ್ಷದ ಸ್ನೇಹಿತರು ಭಾಷಣ ಮಾಡಿದ್ದಾರೆ. ಅವರು ಭಾಷಣ ಮಾಡುವ ಕಾಲದಲ್ಲಿ ಇನ್ನೂ ಚುನಾವಣೆಯ ಭಾಷಣವನ್ನು ಮಾಡುತ್ತಿದ್ದಾರೆಯೋ ಏನೋ ಎಂದು ನನ್ನ ಮನಸ್ಸಿಗೆ ಕಂಡು ಬಂದಿದೆ. ಮುಖ್ಯವಾಗಿ ಹೇಳುವುದಾದರೆ ಇವತ್ತಿನ ದಿವಸ ನಮ್ಮ ಎದುರಿಗೆ ಇರತಕ್ಕ ವಿರೋಧ ಪಕ್ಷದವರಲ್ಲಿ ಅನೇಕರು ನಮ್ಮ ಗರಡಿಯಲ್ಲಿಯೇ ಇದ್ದವರು ಎಂಬುದನ್ನು ಮರೆಯಬಾರದು.

(ಶ್ರೀ ಎಚ್. ಚಿಕ್ಕೇಗೌಡ)

ಅವರಲ್ಲಿ ಅನೇಕರು ಕಾಂಗ್ರೆಸ್ ಟಿಕೆಟ್ಟಿಗಾಗಿ ಪ್ರಯತ್ನಪಟ್ಟವರೂ, ಕಾಂಗ್ರೆಸ್ ಟಿಕೆಟ್ ಸಿಕ್ಕದೇ ಇದ್ದವರೂ, ಮಂತ್ರಿಪದವಿಗಾಗಿ ಪ್ರಯತ್ನ ಪಟ್ಟು ಆ ಸ್ಥಾನ ಸಿಗದೇ ಇರುವವರೂ ಇದ್ದಾರೆ. ಇವತ್ತಿನ ದಿವಸ ಹೇಗೋ ಅವರು ಚುನಾವಣೆಯಲ್ಲಿ ಗೆದ್ದು ಇಲ್ಲಿಗೆ ಸದಸ್ಯರಾಗಿ ಬಂದಿದ್ದಾರೆ. ಆರೀತಿಯಾಗಿ ಬಂದಿರುವ ಕಾಲದಲ್ಲಿ ಅನೇಕ ಮಾನ್ಯ ವಿರೋಧ ಪಕ್ಷದ ಸ್ನೇಹಿತರು ಹೇಳಿದರು, ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಇತರರು ಅನೇಕರು ಚುನಾವಣೆಯಲ್ಲಿ ಆಡಳಿತ ವರ್ಗದವರನ್ನು ಉಪಯೋಗಿಸಿ ಮತ್ತು ಇತರೇ ಮಾರ್ಗಗಳನ್ನು ಉಪಯೋಗಿಸಿಕೊಂಡು ಗೆದ್ದು ಬಂದಿದ್ದಾರೆಂದು. ಇನ್ನು ಅನೇಕ ವಿಧವಾಗಿ ಕಾಂಗ್ರೆಸ್ ಪಕ್ಷದ ಮೇಲೆ ಟೀಕೆ ಮಾಡಿದರು. ಇವತ್ತಿನ ದಿವಸ ನಾಲ್ಕೈದು ಚುನಾವಣೆಗಳು ನಡೆದ ಕಾಲದಲ್ಲಿ ಈ ದೇಶದಲ್ಲಿ ಪ್ರಧಾನಮಂತ್ರಿಗಳಿಂದ ಹಿಡಿದು ಸಾಮಾನ್ಯ ಕ್ಷೇತ್ರದಿಂದ ನಿಂತಿರತಕ್ಕ ಒಬ್ಬ ಕಾಂಗ್ರೆಸ್ ವ್ಯಕ್ತಿಯಮೇಲೆ ವಿರೋಧಪಕ್ಷದವರು ಆಗಾಗ್ಗೆ ಮಾಡಿದಂಥ ದೋಷಾರೋಪಣೆಗಳನ್ನು ಹಾಗೂ ಹಿಂಸಾಕೃತ್ಯಗಳನ್ನು ಅನೇಕರು ಪತ್ರಿಕೆಗಳಲ್ಲಿ ಓದಿದ್ದಾರೆ. ಅದೇ ರೀತಿಯಲ್ಲಿ ಈ ಸಾರಿ ನಡೆದ ಚುನಾವಣೆ ಕಾಲದಲ್ಲಿಯೂ ವಿರೋಧಪಕ್ಷದ ಸ್ನೇಹಿತರು ವರ್ತಿಸಿರುವ ರೀತಿಯನ್ನು ನಾವು ಅನುಭವಿಸಿ ಚುನಾವಣಾ ರಂಗದಲ್ಲಿ ವಿರೋಧ ಪಕ್ಷದವರ ಹಿಂಸಾಕೃತ್ಯಗಳನ್ನು ನಾವು ಎದುರಿಸಿರುವುದು ಆಗಿದೆ. ಈ ಸಭೆಯಲ್ಲಿಯೂ ಅಲ್ಲಿ ಮಾತನಾಡಿದ ಹಾಗೆಯೇ ಈಗಲೂ ಮಾತನಾಡುತ್ತಿದ್ದಾರೆ. ಹೊರಗಡೆಯಲ್ಲಿ ಇವರು ಯಾವ ರೀತಿಯಲ್ಲಿ ವರ್ತಿಸಿದ್ದಾರೆಂಬುದಕ್ಕೆ ಅವರು ಇಲ್ಲಿ ಮಾತನಾಡುವ ರೀತಿ ನೀತಿಯೇ ಸಾಕ್ಷಿಯಾಗಿದೆ. ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಈಗಿನ ಚುನಾವಣಾರಂಗದಲ್ಲಿ ಯಾವ ರೀತಿ ಗೆದ್ದು ಬಂದರು ಎಂಬ ಬಗ್ಗೆ ವಿರೋಧ ಪಕ್ಷದವರು ಹೇಳಿರತಕ್ಕದ್ದಕ್ಕೆ ನಾನು ಹೇಳುವುದಿಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷದವರನ್ನು ಯಾವ ರೀತಿಯಲ್ಲಿ ಚುನಾವಣಾ ರಂಗದಲ್ಲಿ ಎದುರಿಸಬೇಕಾಗಿತ್ತೆಂಬ ಬಗ್ಗೆ ಎಲ್ಲ ರೀತಿಯಲ್ಲಿಯೂ ಅವರನ್ನು ಎದುರಿಸುವುದಕ್ಕೆ ತಯಾರಾಗಿದ್ದರೆಂಬುದನ್ನು ಈ ಸಭೆಯಲ್ಲಿ ನಾನು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಈಗ ತಾಲ್ಲೂಕ್ ಪ್ರೆಸಿಡೆಂಟರಾಗಿ ಬಂದಿದ್ದಾರೆ. ಅದಕ್ಕೆ ಮೊದಲು ಮಾನ್ಯ ಸದಸ್ಯರು ಯಾವ ಪಕ್ಷದಲ್ಲಿದ್ದರೆಂಬುದನ್ನು ನನಗೆ ಹೇಳಲಿ.

ಶ್ರೀ ಎನ್. ಚಿಕ್ಕೇಗೌಡ.—ಇವತ್ತಿನ ದಿವಸ ವಿರೋಧ ಪಕ್ಷದ ಸ್ನೇಹಿತರು ಮುಖ್ಯ ಮಂತ್ರಿಗಳು ಏನೋ ಒಂದು ಮಾರ್ಗದಲ್ಲಿ ಚುನಾವಣೆಯಲ್ಲಿ ಗೆದ್ದು ಬಂದರು ಎಂಬುದಾಗಿ ಹೇಳಿದರು. ಅವರು ಚುನಾವಣೆಯ ಕಾಲದಲ್ಲಿ ಪ್ರಚಾರಕ್ಕೆ ಹೋದಾಗ ಅಲ್ಲಿನ ಜನರಿಗೆ ಸರ್ಕಾರ ಇದುವರೆಗೂ ಮಾಡಿದ್ದು ಮತ್ತು ಮುಂದೆ ಮಾಡುವಂಥಾದ್ದನ್ನು ತಿಳಿಸಿದಾಗ ಅದರಿಂದ ವಿರೋಧ ಪಕ್ಷದವರಿಗೆ ತೊಂದರೆಯಾಯಿತೆಂದು ಹೇಳಿದರು. ಎಷ್ಟೋ ಕಲುಷಿತ ಪ್ರಸಂಗಗಳು ನಡೆದುವು. ಅದನ್ನೆಲ್ಲಾ ಈ ಸಭೆಯವರು ಹಾಗೂ ಹೊರಗಡೆ ಇರತಕ್ಕವರೆಲ್ಲರೂ ಚೆನ್ನಾಗಿ ತಿಳಿದಿದ್ದಾರೆ. ಆದ್ದರಿಂದ ನಾನು ಆ ವಿಷಯದಲ್ಲಿ ಹೆಚ್ಚಿಗೆ ಮಾತನಾಡದೆ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಕಳೆದ ಚುನಾವಣೆಯಲ್ಲಿ ಆಡಳಿತ ಪಕ್ಷ ಶೇಕಡ 37.85 ರಷ್ಟು ಓಟು ಪಡೆದು ಬಂದಿದ್ದಾರೆ. ವಿರೋಧಪಕ್ಷ ಶೇಕಡ 62.15ರಷ್ಟು ಓಟು ಗಳಿಸಿ ಬಂದಿದೆ ಎಂದು ಹೇಳಿದ ಮಾತಿನಮೇಲೆ ಮಾತನಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಅದು ಆಲ್ ಇಂಡಿಯಾ ಪರ್ಸೆಂಟೇಜ್ ಮೈಸೂರು ಸಂಸ್ಥಾನದ್ದು ಮಾತ್ರವಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಆಡಳಿತ ಪಕ್ಷ ಈಗಿನ ಚುನಾವಣೆಯಲ್ಲಿ ಈಗ ಬಂದಿದೆ ಎಂದು ವಿರೋಧ ಪಕ್ಷದವರು ಹೇಳಿದರು. ಚುನಾವಣೆಯ ಕಾಲದಲ್ಲಿ ವಿರೋಧ ಪಕ್ಷದವರು ಹೇಳಿದಂಥ ಮಾತುಗಳನ್ನು ನಾನು ಮತ್ತೆ ಪ್ರತಿಪಾದಿಸುತ್ತೇನೆ. ಅದಲ್ಲದೆ ಕಳೆದ 20 ವರ್ಷಗಳಲ್ಲಿ ಈ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿರತಕ್ಕ ತಪ್ಪುಗಳ ವಿಷಯದಲ್ಲಿಯೂ ವಿರೋಧ ಪಕ್ಷದವರು ಹೇಳಿದರು. ಅದಕ್ಕಾಗಿ ನಾನು ಅವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಯಾರು ಇವತ್ತಿನ ದಿವಸ ಆಡಳಿತ ಪಕ್ಷವನ್ನು ಟೀಕೆ ಮಾಡುತ್ತಿದ್ದಾರೋ ಅವರೇ ಆ ತಪ್ಪುಗಳಿಗೆ ಜವಾಬ್ದಾರರಾಗಿದ್ದರು ಎಂಬುದನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ.

9.00 A.M.

ಈ ವಿಷಯವನ್ನು ಮಾನ್ಯ ಹಿರಿಯ ಮಿತ್ರರಾದಂತಹವರು, ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದವರು, ಈಗ ವಿರೋಧ ಪಕ್ಷದಲ್ಲಿರತಕ್ಕಂತಹವರು ಹೇಳುವುದು ಸರಿಯಲ್ಲ. ನಮ್ಮ ದೇಶದಲ್ಲಿ, ಕಳೆದ ವರ್ಷದಲ್ಲಿ ಬಂದಂತಹ ಆಹಾರದ ಅಭಾವದ ಕಾಲದಲ್ಲಿ ಈ ಸರ್ಕಾರ ಬೇಕಾದಷ್ಟು

ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ನನ್ನ ಅನೇಕ ಮಿತ್ರರು ಹೇಳಿದರು, ಸಹಕಾರ ಸಂಘಗಳು ಮತ್ತು ಫೇರ್ ಪ್ರೈಸ್ ಅಂಗಡಿಗಳಲ್ಲಿ ಕಾಂಗ್ರೆಸ್ಸಿನವರು, ಆಡಳಿತ ಪಕ್ಷದವರು ಎಲ್ಲಾ ಸೇರಿಕೊಂಡು ಇದ್ದಾರೆ, ಹಾಗೂ ಇನ್ನಿತರ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಇದಕ್ಕೆ ನಾನಾದರೂ ಹೇಳುತ್ತೇನೆ, ಎಷ್ಟು ಜನ ಕಾಂಗ್ರೆಸ್ಸಿನವರು ಇವುಗಳಲ್ಲಿ ಇದ್ದಾರೋ ಅಷ್ಟೇ ಜನ ವಿರೋಧ ಪಕ್ಷದವರೂ ಇದರಲ್ಲಿ ಎಲ್ಲಾ ಸೇರಿಕೊಂಡಿದ್ದಾರೆ; ಅದರ ಅಂಕಿ ಅಂಶಗಳನ್ನು ಬೇಕಾದರೆ ತಮ್ಮ ಅವಗಾಹನೆಗೆ ತರಬಲ್ಲೆನು. ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ, ಅದು ಬ್ರಾಡ್‌ಗೇಜ್ ರೈಲ್ವೇ ಲೈನು ಇದ್ದಂತಹ ಜಾಗ ಆಹಾರ ಅಭಾವ ಇದ್ದಂತಹ ಕಾಲದಲ್ಲಿ ರೈಲಿನಿಂದ ಆಹಾರ ಸಾಮಗ್ರಿಗಳನ್ನು ಕದ್ದವರು ವಿರೋಧಪಕ್ಷದವರ ಕಡೆಯವರು. ಅದಕ್ಕೆ ಬೇಕಾದಷ್ಟು ದಾಖಲೆಗಳು ನನ್ನ ಹತ್ತಿರ ಇವೆ. ಆದ್ದರಿಂದ ಇವತ್ತಿನ ದಿವಸ ಪ್ರತಿ ಒಂದಕ್ಕೂ ಕಾಂಗ್ರೆಸ್ ಪಕ್ಷವನ್ನು ದೂರುವುದರಿಂದ ಪ್ರಯೋಜನವಿಲ್ಲ. ಅದಕ್ಕೆ ವಿರೋಧ ಪಕ್ಷದವರೂ ಹೊಣೆಯಾಗಿದ್ದಾರೆ ಮತ್ತು ಅವರು ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕೇ ವಿನಹ, ಎಲ್ಲಾ ತರದ ವಿರೋಧವನ್ನು ಮಾಡುವುದು ಸರಿಯಲ್ಲ. ಈಗ ಚುನಾವಣೆಗಳು ಮುಗಿದಿವೆ. ಪ್ರಧಾನ ಮಂತ್ರಿಗಳು ಮುಖ್ಯ ಮಂತ್ರಿಯವರು ಎಲ್ಲಾ ಹೇಳಿದ ಹಾಗೆ, ನಾವು ಎಲ್ಲಾ ಇಂಥ ಸಣ್ಣ ಪುಟ್ಟ ಕೆಲಸಗಳನ್ನು ಬಿಟ್ಟು ಒಂದು ರಚನಾತ್ಮಕವಾದ ರೀತಿಯಲ್ಲಿ ರಾಷ್ಟ್ರವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು, ಮತ್ತು ನಮ್ಮೆಲ್ಲರತಕ್ಕ ಆಹಾರ ಸಮಸ್ಯೆ ಹಾಗೂ ಇನ್ನಿತರ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ನಾವೆಲ್ಲರೂ ಒಗ್ಗಟ್ಟಿನಿಂದ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದೇಶದಲ್ಲಿ ಅನೇಕ ರೀತಿಯ ಕ್ಲಿಷ್ಟಕರವಾದ ಪರಿಸ್ಥಿತಿ ಇರುವಾಗಲೂ, ಈ ವಿರೋಧ ಪಕ್ಷದ ಸದಸ್ಯರು ಯಾವ ರೀತಿಯಲ್ಲೂ ಸಹಕರಿಸಲಿಲ್ಲ ಎಂದು ನಾನಾದರೂ ತಿಳಿಸುತ್ತೇನೆ. ಕಳೆದ ಒಂದೆರಡು ವರ್ಷಗಳಲ್ಲಿ ಆದಂತಹ ತೊಂದರೆಗಳಿಗೆ ಮತ್ತು ಆಹಾರದ ವಿತರಣೆಯ ಸಂದರ್ಭದಲ್ಲಿ ದೇಶಕ್ಕೆ ಹೆಚ್ಚಿಗೆ ವಿರೋಧ ಪಕ್ಷದವರಿಂದ ತೊಂದರೆಯಾಗಿದೆ. ದೇಶದಲ್ಲಿ ಇಂಥ ಸಮಸ್ಯೆಗಳು ತಲೆದೋರಿದಾಗ, ಅದಕ್ಕೆ ನಮ್ಮ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರು ತಕ್ಕ ಪರಿಹಾರ ಕ್ರಮಗಳನ್ನು ಕೈಗೊಂಡಿದ್ದಾರೆ.

ಇನ್ನು ಮಾನ್ಯ ಕೆ. ಎಚ್. ಪಾಟೀಲರವರು ಸಹಕಾರ ಸಂಘಗಳ ವಿಚಾರದಲ್ಲಿ ಸ್ವಲ್ಪ ಟೀಕೆಯನ್ನು ಮಾಡಿದರು. ನನಗೆ ತಿಳಿದ ಮಟ್ಟಿಗೆ ನಮ್ಮ ಸರ್ಕಾರದ ಕಡೆಯಿಂದಲೂ ಅದಕ್ಕೆ ಬೇಕಾದ ಅಂಕಿ ಅಂಶಗಳನ್ನು ಉತ್ತರದಲ್ಲಿ ಹೇಳುತ್ತಾರೆಂದು ಕಾಣುತ್ತದೆ. ಮಾನ್ಯ ಕಂಠಿಯವರು ಹೇಳಿದ ಹಾಗೆ, ದುರಾಡಳಿತ ನಡೆದುದರಲ್ಲಿ, ವಿರೋಧ ಪಕ್ಷದವರೂ ಪಾಲುಗಾರರಾಗಿದ್ದಾರೆ ಎಂಬುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಉತ್ತರದಲ್ಲಿ ಇದನ್ನೆಲ್ಲಾ ನಮೂದಿಸುತ್ತಾರೆಂದು ಕಾಣುತ್ತದೆ. ರಾಜ್ಯಪಾಲರವರ ಭಾಷಣದಲ್ಲಿ ಕಳೆದ 20 ವರ್ಷಗಳಿಂದ ಏನೇನು ಕ್ಲಿಷ್ಟಪರಿಸ್ಥಿತಿ ಬಂತು, ಮತ್ತು ಕಳೆದ ಪಂಚವಾರ್ಷಿಕ ಯೋಜನೆಗಳು, ವ್ಯವಸಾಯ ಅಭಿವೃದ್ಧಿ, ಕೈಗಾರಿಕೆ, ಹಾಗೂ ಇತರ ನಾನಾ ಪ್ರಗತಿಯನ್ನು, ಅಂಕಿ ಅಂಶಗಳ ಮುಖಾಂತರ ನಮೂದಿಸಿದ್ದಾರೆ. ಮಾನ್ಯ ಸದಸ್ಯರನೇಕರು, ರಾಜ್ಯಪಾಲರು ಪ್ರತಿಯೊಂದು ವಿಷಯವನ್ನೂ ನಮೂದಿಸಿಲ್ಲ ಎಂದು ಹೇಳಿದರು. ರಾಜ್ಯಪಾಲರು ಸರ್ಕಾರದ ವತಿಯಿಂದ ಕೊಟ್ಟಂತಹ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇನ್ನು ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು, ಶರಾವತಿಯನ್ನು ಕರ್ಮಕಾಂಡ ಎಂದು ಹೇಳಿದರು. ಅವರ ವಿಷಯದಲ್ಲಿ ನನಗೆ ಒಳ್ಳೆಯ ಸದ್ಭಾವನೆ ಇದೆ, ಅವರು ನಮ್ಮ ಗರಡಿಯಲ್ಲೇ ಇದ್ದವರು. ಇದಕ್ಕೆ ಅವರೂ ಜವಾಬ್ದಾರರು ಎಂಬುದನ್ನು ನಮ್ಮ ಮಿತ್ರರೊಬ್ಬರು ಹೇಳಿದರು. ಅವರು ಮಂತ್ರಿಗಳಾಗಿದ್ದಾಗ ಸರಿಯಾಗಿ ವೆಚ್ಚಮಾಡದೆ ಇರುವುದರಿಂದ, ಅವರದ್ದೂ ಇದರಲ್ಲಿ ಜವಾಬ್ದಾರಿ ಇದೆ.

ಇನ್ನೊಂದು ವಿಚಾರ. ನಾನು ಹೊಸಕೋಟೆಯಿಂದ ಬಂದವನು, ಚುನಾವಣೆಯ ಕಾಲದಲ್ಲಿ ಅಲ್ಲಿ ನನ್ನನ್ನು ವಿರೋಧ ಪಕ್ಷದವರು ಕಲ್ಲಿಂದ ಹೊಡೆದು ಭಾಷಣ ಕೂಡ ಮಾಡಲು ಬಿಡಲಿಲ್ಲ. ಅದಕ್ಕೂ ನಾನು ಬೇಕಾದರೆ, ಪುಷ್ಟೀಕರಿಸಬೇಕಾದರೆ, ಪೋಲೀಸ್ ದಾಖಲೆಗಳನ್ನು ಕೊಡಬಲ್ಲೆ. ಆದ್ದರಿಂದ, ದಯವಿಟ್ಟು ಮಾನ್ಯ ಮಿತ್ರರು, ಚುನಾವಣೆ ಮುಗಿದ ಮೇಲೆ ಇನ್ನೂ ಅದನ್ನು ಇಲ್ಲಿ ತರಬೇಡಿ ಎಂದು ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಜಯಪ್ರಕಾಶ್‌ರವರನ್ನು ನಾನು ಅನೇಕ ವರ್ಷದಿಂದ ಬಲ್ಲೆ. ಅವರ ಸಾರ್ವಜನಿಕ ಜೀವನ ನಾನು ತಿಳಿದುಕೊಂಡಿದ್ದೇನೆ. ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರದವರು ಸಾಧಾರಣ 5 ವರ್ಷಗಳಲ್ಲಿ, 41 ಸಾವಿರ ನೀರಾವರಿ ಬಾವಿಗಳಿಗೆ ಸಾಲದ ರೂಪದಲ್ಲಿ ಹಣ ಕೊಟ್ಟು ಅನುಕೂಲ ಮಾಡಿದುದರಿಂದ ನಮ್ಮ ಇವತ್ತಿನ ಆಹಾರ ಉತ್ಪತ್ತಿಯೂ ಹೆಚ್ಚಾಗುವುದಕ್ಕೆ ಕಾರಣವಾಯಿತು. ಮತ್ತು ವ್ಯವಸಾಯ ಇಲಾಖೆಯಲ್ಲಿ ಮಾಡಿರತಕ್ಕ ಪ್ರಗತಿಯ ಬಗ್ಗೆ ಹೇಳಿದ್ದಾರೆ. ಇವೊತ್ತಿನ

(ಶ್ರೀ ಎಚ್. ಚಿಕ್ಕೇಗೌಡ)

ದಿವಸ ನಾನು ಸರ್ಕಾರದವತಿಯಿಂದ ಆಗಿರತಕ್ಕ ಎಲ್ಲಾ ವಿಷಯಗಳನ್ನೂ ಪುಷ್ಟೀಕರಿಸುತ್ತಾ ಈಗ ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿರತಕ್ಕ ಕೆಲಸಕಾರ್ಯಗಳು ಕಾರ್ಯಗತವಾಗುವ ಕಾಲದಲ್ಲಿ ಆಗಬೇಕಾದ ವಿಷಯಗಳನ್ನು ಈ ಮಾನ್ಯ ಸಭೆಯ ಮೂಲಕ ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ರೈತರಿಗೆ ನೀರಾವರಿ ಬಾವಿಗಳಿಗೋಸ್ಕರವಾಗಿ ಜಮೀನು ಅಭಿವೃದ್ಧಿ ಬ್ಯಾಂಕುಗಳ ಮೂಲಕ ಸಾಲವನ್ನು ಕೊಡುವಾಗ ಅನ್ವಯ ಮಾಡತಕ್ಕಂಥ ಕಾನೂನುಗಳನ್ನು ಹೆಚ್ಚು ಸರಳವಾಗಿ ಮಾಡಬೇಕು. ಅದರಲ್ಲಿ ರೈತರಿಗೆ ಹೆಚ್ಚಿನ ಒಂದು ಕಾನೂನಿನ ಅಡಚಣೆ ಇದೆ. ಅದರಿಂದ ರೈತರಿಗೆ ಹೆಚ್ಚು ತೊಂದರೆಯಾಗುತ್ತಿದೆ. ರೈತರಿಗೆ ಪಂಪುಸೆಟ್ಟುಗಳನ್ನು ಕೊಡುವಾಗ ಪರ್ಸನಲ್ ಸೆಕ್ಯೂರಿಟಿಗೆ ಯಾವ ದಾಖಲೆಗಳನ್ನು ಕೊಡುತ್ತಾರೆಯೋ ಅದೇ ತರಹ ದಾಖಲೆಗಳನ್ನು ಈ ಬಾವಿಗಳ ಸಾಲವನ್ನು ಕೊಡುವಾಗಲೂ ಅನ್ವಯ ಮಾಡಬೇಕು. ಕಮ್ಯುನಿಟಿ ಡೆವಲಪ್‌ಮೆಂಟ್ ಸಾಲಗಳನ್ನು ಕೊಡುವಾಗ ವಂಶವೃಕ್ಷಗಳನ್ನು ಕೊಡಬೇಕೆಂದು ಕೇಳುತ್ತಾರೆ. ಈ ದೃಷ್ಟಿಯಿಂದ ಜಮೀನು ಅಭಿವೃದ್ಧಿ ಬ್ಯಾಂಕುಗಳ ಮೂಲಕ ಬಾವಿಗಳಿಗೆ ಸಾಲವನ್ನು ಕೊಡುವಾಗ ಬಹಳ ದಾಖಲೆಗಳನ್ನು ಒದಗಿಸಬೇಕಾಗಿದೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಸರ್ಕಾರದವರು ಜಾಗ್ರತೆಯಾಗಿ ಪರಿಶೀಲನೆ ಮಾಡಬೇಕು. ಮತ್ತು ಬಾವಿಗಳಿಗೆ 5 ಸಾವಿರ ರೂಪಾಯಿಗಳ ಸಾಲವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ರೈತರಿಗೆ ಸಾಲವನ್ನು ಕೊಡತಕ್ಕ ಕಾಲದಲ್ಲಿ, ಪಂಪುಸೆಟ್ಟುಗಳನ್ನು ಕೊಳ್ಳಲು ಸಾಲವನ್ನು ಕೊಡುವಾಗ ತಾಲ್ಲೂಕು ಅಭಿವೃದ್ಧಿಮಂಡಲಿಗಳ ಮುಖೇನ ಸರ್ಕಾರದವರು ಕೊಡುತ್ತಿದ್ದರು. ಅವುಗಳನ್ನು ಇನ್ನು ಮುಂದೆ ರೆವಿನ್ಯೂ ಇಲಾಖೆಯ ಮುಖೇನ ಕೊಡಬೇಕೆಂದು ಸರ್ಕಾರದಿಂದ ಆದೇಶ ಬಂದಿದೆ. ರೆವಿನ್ಯೂ ಇಲಾಖೆಯ ಮುಖೇನ ಅದನ್ನು ಕೊಡುವುದಾದರೆ ಅದರಿಂದ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ರೈತರಿಗೆಕೆ ಕೊಡತಕ್ಕ ಸಾಲಗಳು ಮತ್ತು ಪಂಪುಸೆಟ್ಟುಗಳು ಇತ್ಯಾದಿಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ವಿಷಯದಲ್ಲಿ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ನಾನು ಕಾಂಗ್ರೆಸ್ ಪಕ್ಷದವನಾದರೂ ಈ ಇಲಾಖೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಲೇಬೇಕಾಗಿದೆ. ರೀ ಆರ್ಗನೈಜೇಷನು ಆದಮೇಲೆ ವ್ಯವಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಲ್ಲಿ ಏನೋ ಒಂದು ಜಾಡ್ಯ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ, ಅಧಿಕಾರಿಗಳು ಕಛೇರಿಗಳಲ್ಲಿ ಕುಳಿತುಕೊಂಡು ಕೆಲಸಮಾಡುವುದನ್ನು ಬಿಟ್ಟು ಅವರು ಫೀಲ್ಡಿಗೆ ಹೋಗಿ ನೋಡಿ ರೈತರಿಗೆ ಏನು ಕುಂದುಕೊರತೆಗಳು ಇವೆ ಎಂಬುದನ್ನು ಅರಿತುಕೊಂಡು ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಂಥಾ ಒಂದು ಆದೇಶವನ್ನು ಸರ್ಕಾರದವರು ಅವರಿಗೆ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಬೆಂಗಳೂರು ಜಿಲ್ಲೆಯಲ್ಲಿ ರೈತರಿಗೆ ಒಂದು ದೊಡ್ಡ ಸಮಸ್ಯೆ ಇದೆ. ಅದೇನೆಂದರೆ, ರೈತರು ಬೆಳೆದಂತಹ ಹಣ್ಣು, ಹೂವು, ತರಕಾರಿ ಮತ್ತು ದ್ರಾಕ್ಷಿ ಬೆಳೆಗಳಿಗೆ ಸರಿಯಾದಂತಹ ಬೆಲೆ ಸಿಕ್ಕುತ್ತಾ ಇಲ್ಲ. ಅವರಿಗೆ ಬೇಕಾದ ಕೋಲ್ಡ್ ಸ್ಟೋರೇಜ್ ಮುಂತಾದ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಅವರು ಬೆಳೆದಂತಹ ಬೆಳೆಗಳಿಗೆ ನ್ಯಾಯವಾದ ಬೆಲೆಗಳು ಸಿಕ್ಕುವಂತೆ ಮಾಡಬೇಕು. ಸಹಕಾರ ಸಂಘಗಳ ಮೂಲಕವಾಗಲೀ, ಮಾರಾಟ ಸಹಕಾರ ಸಂಘಗಳ ಮುಖಾಂತರವಾಗಲೀ ಸರ್ಕಾರದವರು ಜಾಗ್ರತೆಯಾಗಿ ಹಣ್ಣು ಬೆಳೆಯತಕ್ಕ ರೈತರಿಗೆ ಕೋಲ್ಡ್ ಸ್ಟೋರೇಜ್ ಅನ್ನು ಒದಗಿಸುವುದಕ್ಕೆ ಅಧ್ಯ ಗಮನ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಪಶು ಸಂಗೋಪನೆಯ ವಿಷಯವಾಗಿ ಹೇಳಬೇಕಾದರೆ, ರೈತರಿಗೆ ಹಳ್ಳಿಕಾರ್ ಮತ್ತು ಅಮೃತಮಹಲ್ ಜಾತಿಯ ಹಸುಗಳನ್ನು ತರಿಸಿಕೊಟ್ಟು ಆ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಏತಕ್ಕೆಂದರೆ ಈಗ ಅದು ಕ್ರಮೇಣ ಕ್ಷೀಣವಾಗುತ್ತಾ ಬಂದಿದೆ. ಆದ್ದರಿಂದ ಹಳ್ಳಿಕಾರ್ ಮತ್ತು ಅಮೃತಮಹಲ್ ಜಾತಿಯ ಹಸುಗಳನ್ನು ರೈತರಿಗೆ ತರಿಸಿಕೊಡುವುದಕ್ಕೆ ಒಂದು ಯೋಜನೆಯನ್ನು ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಸಾಮುದಾಯಿಕ ಅಭಿವೃದ್ಧಿಯೋಜನೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಿದೆಯೆಂದು ಇರತಕ್ಕ ಕೆಲವು ಯೋಜನೆಗಳನ್ನು ಎಂದರೆ ಸೋಷಿಯಲ್ ಎಜುಕೇಷನ್, ರಸ್ತೆಗಳನ್ನು ಮಾಡತಕ್ಕದ್ದು ಮತ್ತು ಶಾಲಾ ಕಟ್ಟಡಗಳನ್ನು

ಕಟ್ಟತಕ್ಕದ್ದು ಇತ್ಯಾದಿ ಕೆಲಸಗಳನ್ನು ನಿಲ್ಲಿಸಿದ್ದರು. ಆ ರೀತಿ ಆ ಕೆಲಸಗಳನ್ನು ತಡೆ ಹಿಡಿದದ್ದನ್ನು ಈಗ ತೆಗೆದುಹಾಕಬೇಕೆಂದು ನಾನು ಈ ಸಭೆಯಲ್ಲಿ ತಮ್ಮ ಮೂಲಕ ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ಇನ್ನು ಪಂಚಾಯಿತಿಗಳಲ್ಲಿ ಮತ್ತು ತಾಲ್ಲೂಕುಬೋರ್ಡುಗಳಲ್ಲಿ ಕಾರ್ಯದರ್ಶಿಗಳು ಇಲ್ಲದೆ ಬಹಳ ತೊಂದರೆಯಾಗುತ್ತಿದೆ, ಆದ್ದರಿಂದ ಅವುಗಳಿಗೆ ಕಾರ್ಯದರ್ಶಿಗಳನ್ನು ನೇಮಿಸುವುದಕ್ಕೆ ಜಾಗ್ರತೆಯಾಗಿ ಸರ್ಕಾರದವರು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಪಂಚಾಯಿತಿ ರಾಜ್ಯದ ವಿಧೇಯಕ ಏನಿದೆ ಅದನ್ನು ಆದಷ್ಟು ಜಾಗ್ರತೆಯಾಗಿ ಈ ಸಭೆಯ ಮುಂದೆ ತಂದು ಅದನ್ನು ಕಾರ್ಯಗತ ಮಾಡಬೇಕು. ಮುಖ್ಯವಾಗಿ ಒಟ್ಟಿನಲ್ಲಿ ಹೇಳುವುದಾದರೆ, ಸರ್ಕಾರದವರು ಬೇಕಾದಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಇವೊತ್ತಿನದಿವಸ ವಿರೋಧಪಕ್ಷದವರು ಹೇಳಿದಂತೆ ಅಂಧೋಳನಗಳು, ಗೊಂದಲಗಳು, ಅವ್ಯವಸ್ಥೆ, ಮತ್ತು ಹಣದ ದುರುಪಯೋಗ ಆಗಿರುವುದು ಸರ್ವಥಾ ಸುಳ್ಳು. ಇಷ್ಟು ಹೇಳಿ ಶ್ರೀಮಾನ್ ಘೋರ್ಪಡೆಯವರು ಈ ಸಭೆಯ ಮುಂದೆ ತಂದಿರತಕ್ಕ ರಾಜ್ಯಪಾಲರ ವಂದನಾರ್ಪಣಾ ನಿರ್ಣಯವನ್ನು ಸಮರ್ಥಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Now before I call upon anybody, I wish to say a few words. We are just settling down. So, I am allowing certain latitude. Let it not be understood that it is the normal rule. One thing I want to mention now is : up to the moment, the time consumed by the Congress Party is 2 hours 15 minutes, and by the Opposition 5 hours 45 minutes. I am mentioning this so that members may kindly co-ordinate. I am also reminding Members that there are more opportunities almost immediately, during the discussion on Supplementary Demands and the Budget presentation, and the debate will be there. But at the same time, there are newcomers. Therefore, they may also be given a chance. It is only an indication and implied request to the Whips not only in choosing the persons to participate in the debate, but also in the allocation of time. Particularly with regard to time, there is great disparity between the terms arrived at and the actualities realised. It is observed that fifteen minutes are converted by some speakers to 50 minutes or more. That should not happen. That means, we do not have a grip over the situation ; then difficulty comes up.

Sri S. SIVAPPA (Sravanabelagola).—It is better that more time is given to the Opposition because the speeches of the Congress Party members are almost like gramophone records. They repeat the same thing and there is nothing more in them.

Mr. SPEAKER.—Order, order. I will deal with it. This remark was least expected from the Leader of the Opposition.

An Hon'ble MEMBER.—Junior members must be given more chances.

Mr. SPEAKER.—There is nothing like junior or senior member. Everybody is an accredited representative with equal rights. Still, they call me old and young. Bearing that approach in mind, I say senior members. But at the same time, I am allowing certain little aggressiveness to cool down. What we have cultivated during the elections, requires a little time to cool down. The scope of the debate here is slightly different from the election approaches.

(MR. SPEAKER)

Now I find a name in the list. I do not know how to pronounce it. Is it Churchill-math or Churchihalmath. I request the Hon'ble Member not to mistake me if I have pronounced his name wrongly. (*Laughter*).

Sri Churchihalmath, has been allotted ten minutes. He may kindly adhere to it.

ಶ್ರೀ ಸಿ. ಎಂ. ಚುರ್ಚಿಹಾಳಮಠ (ಮುಂಡರಗಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಈ ಸಭೆಯನ್ನು ಉದ್ದೇಶಿಸಿ ಮಾಡಿದಂತಹ ಭಾಷಣಕ್ಕಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾ ಶ್ರೀಮಾನ್ ಗೋರ್ಪಡೆಯವರು ತಮ್ಮ ಭಾಷಣದಲ್ಲಿ ಉದಾಹರಣೆಗಳ ಸಮೇತ ವಾಗಿ ಕೂಲಂಕಷವಾಗಿ ವಿವರಿಸಿದ್ದಾರೆ. ಒಂದು ಪ್ರತ್ಯಕ್ಷ ವರದಿಯನ್ನೇ ಅವರು ಈ ಸಭೆಗೆ ಸಲ್ಲಿಸಿದ್ದಾರೆ. ವಿರೋಧಪಕ್ಷದ ಅನೇಕ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಸರ್ಕಾರವನ್ನು ಮತ್ತು ಮಂತ್ರಿಗಳನ್ನು ಟೀಕಿಸುತ್ತಾ ಒಂದು ಮಹಾ ಪಾತ್ರವನ್ನು ನವರಸಭರಿತವಾಗಿ ಮಾಡಿದರು.

Sri K. H. PATIL (Gadag).—May I raise a point of order ?

Mr. SPEAKER.—He has a right provided there is substance in it.

Sri K. H. PATIL.—I understand that a written speech should not be read in the House. Moreover, if that is a speech drafted by the Treasury Benches, it should not be read by the hon'ble Members, I learn. Am I correct ?

Mr. SPEAKER.—I will give a ruling. The Member raised the Point of Order more by imagination than anything else. Please let him not do that. First of all, he ought not to have said that the speech is drafted by the Treasury Benches. Hon'ble members are entitled to have certain pieces of paper.

ಶ್ರೀ ಸಿ. ಎಂ. ಚುರ್ಚಿಹಾಳಮಠ.—ವಿರೋಧಪಕ್ಷದ ಇನ್ನೂ ಕೆಲವು ಮಾನ್ಯಸದಸ್ಯರು ಅನೇಕ ವಿಷಯಗಳನ್ನು ಮಾತನಾಡುತ್ತಾ ಕಾಂಗ್ರೆಸ್ ಪಕ್ಷದವರನ್ನು, ಕಾಂಗ್ರೆಸ್ ಪಕ್ಷದ ಪರವಾಗಿ ಇರತಕ್ಕ ಮಂತ್ರಿಗಳನ್ನು ಟೀಕೆ ಮಾಡುತ್ತಾ ಮಾತನಾಡಿದರು. ಆದರೆ ಆ ಕಾಲದಲ್ಲಿ ಎಲ್ಲಾ ಕಾಂಗ್ರೆಸ್ ಸದಸ್ಯರೂ ಕೂಡ ಶಾಂತರೀತಿಯಾಗಿ ಕುಳಿತು ಕೊಂಡಿದ್ದು ಆ ಮಾತನ್ನು ಕೇಳಿದರು. ಕಾಂಗ್ರೆಸ್ ಸದಸ್ಯರು ಮಾತನಾಡುವಾಗ ವಿರೋಧ ಪಕ್ಷದವರು ಎಷ್ಟೊಂದು ಗಲಾಟೆಯನ್ನು ಮಾಡುತ್ತಾರೆ, ಎಷ್ಟೊಂದು ಪ್ರಶ್ನೆಗಳನ್ನು ಕೇಳುತ್ತಾರೆ ಎಂಬುದನ್ನು ನೋಡಿದರೆ ಇವರು ಚುನಾವಣೆಯ ಕಾಲದಲ್ಲಿ ಯಾವ ರೀತಿ ವರ್ತಿಸಿದ್ದಾರೆ ಎಂಬುದು ಇದರಿಂದಲೇ ಸ್ಪಷ್ಟಪಡುತ್ತದೆ.

ನಮ್ಮ ಪರಮ ಮಿತ್ರರಾದ ಶ್ರೀ ಕೆ. ಎಚ್ ಪಾಟೀಲರು ಕೋ-ಆಪರೇಟಿವ್ ಸೊಸೈಟಿಯ ವಿಚಾರವನ್ನು ಮಾತನಾಡುತ್ತಾ ಅಲ್ಲಿ ಅನೇಕ ಲೋಪದೋಷಗಳು ನಡೆದಿವೆಯೆಂದು ಹೇಳಿದರು. ಆದರೆ ವಾಸ್ತವವಾಗಿ ಅಲ್ಲಿ ಆ ರೀತಿ ನಡೆದಿಲ್ಲ. ಎಲ್ಲಾ ಅಧಿಕಾರಿಗಳು ಸಹ ಕೆಟ್ಟವರಿರುತ್ತಾರೆ ಎಂದು ಹೇಳುವುದು ಸರಿಯಲ್ಲ. ಶ್ರೀ ಕೆ. ಎಚ್. ಪಾಟೀಲರು ಹನುಮನಮಟ್ಟಿಯಲ್ಲಿರುವ ವಿದ್ಯಾ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೆ.........

Sri M. NAGAPPA BASAPPA (Raichur).—Sir, I rise to a Point of Order. With reference to rules 19 and 22, I would like to know whether a member can answer to the argument made by another member ? I think, the concerned Minister only can give the answer and not the member.

Mr. SPEAKER.—He may kindly read the Rules.

Sri M. NAGAPPA BASAPPA.—Rule 19 reads as follows :

> "On such day or days or part of any day, the Assembly shall be at liberty to discuss the matters referred to in such Address on a Motion of Thanks moved by a member and seconded by another member."

Rule 22 says :

"The Chief Minister or any other Minister whether he has previously taken part in the discussion or not, shall on behalf of the Government have a general right of explaining the position of the Government at the end of the discussion and the Speaker may enquire how much time will be required for the speech so that he may fix the hour by which the discussion shall conclude."

Therefore, the member can criticise, but cannot reply to the argument.

Sri B. D. JATTI (Minister for Food).—Sir, I think the rule is clear.

Mr. SPEAKER.—The Hon'ble Minister for Food may know that the rules are perfectly right, but the Hon'ble member (Sri M. Nagappa) has understood it wrongly. So, there is no merit in the Point of Order.

ಶ್ರೀ ಸಿ. ಎಂ. ಚುರ್ಚಿಹಾಳಮಠ.—ಅವರು ತಮ್ಮ ಸಂಸ್ಥೆಯಲ್ಲಿ ಕೆ. ಎಚ್. ಪಾಟೀಲರು ಮಾಡಿದ ಆರೋಪವನ್ನು ಆಡಿಟರರು ಎತ್ತಿ ತೋರಿಸಿದ್ದರಿಂದ ಆಡಿಟರುಗಳ ಬಗ್ಗೆ ಅವರು ಅಧಿಕಾರಿಗಳ ಮೇಲೆ ದೋಷಾರೋಪಣೆ ಮಾಡುತ್ತಿದ್ದಾರೆ. ಅದು ತಪ್ಪು ಎಂಬುದು ನಮಗೆಲ್ಲಾ ಸ್ಪಷ್ಟವಾಗಿ ಕಾಣುತ್ತಿದೆ.

Sri K. H. PATIL.—Sir, it is a wrong statement by my friend. I have not said so against the Auditor.

ಶ್ರೀ ಸಿ. ಎಂ. ಚುರ್ಚಿಹಾಳಮಠ.—ಇನ್ನು ಗದುಗಿಗೆ ನೀರನ್ನು ಸರಬರಾಜು ಮಾಡುವ ವಿಚಾರವನ್ನು ತೆಗೆದುಕೊಂಡರೆ, ತುಂಗಭದ್ರಾ ನದಿಯ ನೀರನ್ನು ಅಲ್ಲಿಗೆ ಗದಗಿಗೆ ತರುವ ಕಾರಣ ಮುಂದೆ ಮಾಡಿ, ಗದಗ ಮುನಿಸಿಪಾಲಿಟಿಯನ್ನು ಸರಕಾರವು ಹತ್ತಿಕ್ಕಲು ಪ್ರಯತ್ನ ನಡೆಯಿಸಿದೆ, ಎಂದು ಹೇಳಿದ್ದಾರೆ. ಯಾವುದೇ ಕಾರ್ಯವನ್ನು ಮಾಡಬೇಕಾದರೂ ಸಹ, ಯಾವ ನದಿಯ ನೀರನ್ನು ಸರಬರಾಜು ಮಾಡಬೇಕಾದರು ಸಹ ತಜ್ಞರ ಅಭಿಪ್ರಾಯ ಅವಶ್ಯಕ. ಅವರು ಹೇಳಿದಂತೆ ಮಾಡಬೇಕಾಗುತ್ತದೆ. ತಜ್ಞರ ಅಭಿಪ್ರಾಯದಂತೆ ತುಂಗಭದ್ರಾನದಿಯ ನೀರನ್ನು ಗದಗಿಗೆ ತರಲು ತುಂಬ ವೆಚ್ಚವಾಗುತ್ತದೆ. ಮತ್ತು ಜನರಿಗೆ ಸಾಕಷ್ಟು ತೆರಿಗೆ ಬೀಳುತ್ತದೆ. ಆದ್ದರಿಂದ ನವಿಲತೀರ್ಥ (ಮಲಪ್ರಭಾ) ನದಿಯ ನೀರನ್ನು ಗದಗಿಗೆ ತಂದರೆ ಬಹಳ ಕಡಿಮೆ ಖರ್ಚಿನಲ್ಲಿ ಆಗುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಅ ವಿಚಾರವನ್ನು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮತ್ತು ಗದಗ ಮುನಿಸಿಪಾಲಿಟಿಯನ್ನು ಅನೇಕ ಕಾರಣಗಳಿಂದ, ಸುಳ್ಳು ಕಾರಣಗಳಿಂದ.........

ಅಧ್ಯಕ್ಷರು.—ಸುಳ್ಳು ಎಂಬ ಪದವನ್ನು ಉಪಯೋಗಿಸಬಾರದು, ತಪ್ಪು ಎಂದು ಬೇಕಾದರೆ ಹೇಳಿ.

ಶ್ರೀ ಸಿ. ಎಂ. ಚುರ್ಚಿಹಾಳಮಠ.—ತಪ್ಪು ಕಾರಣಗಳಿಂದ ಸರ್ಕಾರದವರು "ಸೂಪರಸೀಡ" ಮಾಡಬೇಕೆಂದಿದ್ದಾರೆ, ಎಂದು ವಿರೋಧಪಕ್ಷದವರು ಹೇಳಿದರು. ಸರ್ಕಾರದವರು ಗದಗ ಮುನಿಸಿಪಾಲಿಟಿಯ ಲೋಪದೋಷಗಳನ್ನು ಕೂಲಂಕುಷವಾಗಿ ವಿಚಾರಿಸಿ, ಅವಶ್ಯಕವಾದ ಷೋಕಾಸ್ ನೋಟಿಸನ್ನು ಕೊಟ್ಟು ನಂತರ ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು.

ಇನ್ನು ವಿರೋಧಪಕ್ಷದವರು ಕನ್ನಡ ಭಾಷೆ ಆಡಳಿತ ಭಾಷೆಯಾಗಬೇಕು, ಕರ್ನಾಟಕ ಎಂದು ಹೆಸರಿಡಬೇಕು, ಎಂದು ಹೇಳಿದರು. ಇದುವರೆಗೆ ಆ ರೀತಿ ಮಾಡಲು ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲವೆಂದು ಹೇಳಿದರು. ಆ ರೀತಿ ಅವರು ಹೇಳುವಾಗ ಕನ್ನಡದಲ್ಲೇ ಕೇಳದೆ ಎದುರುಪಕ್ಷದ ದುರೀಣರು ಇಂಗ್ಲೀಷ್‌ನಲ್ಲೇ ಕೇಳಿದ್ದು ತಪ್ಪು ಎನಿಸುತ್ತದೆ. ಕನ್ನಡದಲ್ಲಿ ಆ ಪ್ರಶ್ನೆಯನ್ನು ಕೇಳಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ.

Sri K. H. PATIL.—I rise to a Point of Order, Sir. It is a personal attack on persons who are asking questions in English. We have a right to ask in any language we like. The Hon'ble member should not attack like that.

ಶ್ರೀ ಸಿ. ಎಂ. ಚುರ್ಚಿಹಾಳ ಮಠ.—ಇನ್ನು ಕೆಲವರು ಈ ಸರ್ಕಾರವನ್ನು ಇನ್ನು ಒಂದು ವರ್ಷದಲ್ಲಿ ಕೆಳಗಿಳಿಸುತ್ತೇವೆ ಎಂದು ಹೇಳಿದರು, ಮತ್ತೆ ಕೆಲವರು 1972ರ ಚುನಾವಣೆಯಲ್ಲಿ ನಿಮಗೆ ಪಾಠ ಕಲಿಸುತ್ತೇವೆಂದು ಹೇಳಿದರು. ಇದನ್ನು ನೋಡಿದರೆ ಅವರಲ್ಲಿಯೇ ಒಗ್ಗಟ್ಟು ಇಲ್ಲವೆಂದು ತಿಳಿಯುತ್ತದೆ. ಒಟ್ಟಾರೆ ನೋಡಿದರೆ ರಾಜ್ಯಪಾಲರ ಭಾಷಣ ಚೆನ್ನಾಗಿದೆ, ಸರ್ಕಾರವು ಸುಭದ್ರವಾಗಿ ನಡೆಯುತ್ತಿದೆ ಎಂಬುದನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Now, I give the Ruling. There is no merit in that point. The point is that in a debate there are positive as well as negative aspects. Assertion of a fact may be made by one party and the negative aspect may be propounded by another party. The reply is, when it has come from the concerned Minister with regard to the allegations made against him or made against that Department. As a matter of fact, that does not diminish the right of the members in expressing their views or trying to say that the argument advanced is wrong. It is an inherent right of everybody. If a reply is given by another member, it is only a participation in the Debate; it does not amount to a final reply binding on the Government. But, when it is given by the concerned Minister, it is the Government's reply. Let the member not think that I have brushed aside his point.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎದುರು ಪಕ್ಷದವರು ಮಾತನಾಡಿದರೆ ನಾವು ಸಹ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಗಲಾಟೆ ಮಾಡಿದರೆ ಚರ್ಚೆಯನ್ನು ನಿಲ್ಲಿಸಿ ಓಟಿಗೆ ಹಾಕುತ್ತೇನೆ. ಯಾವ ಸದಸ್ಯರೇ ಆಗಲಿ ಅಗತ್ಯವಿಲ್ಲದೆ ಮಧ್ಯೆ ಮಧ್ಯೆ ಮಾತನಾಡಿದರೆ ಕಾಲವು ಸರಿಯಾಗಿ ಸದ್ವಿನಿಯೋಗವಾಗುವುದಿಲ್ಲವೆಂದು ಮಾತ್ರ ಹೇಳುತ್ತೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ನಮ್ಮ ಮಾನ್ಯ ಮಿತ್ರರಾದ ಶ್ರೀ ಎಂ. ವೈ. ಘೋರ್ಪಡೆಯವರು ಮಂಡಿಸಿರತಕ್ಕಂಥ ಅಭಿನಂದನಾ ಗೊತ್ತುವಳಿಯ ಮೇಲೆ ಮಾತನಾಡಲು ಇಷ್ಟಪಡುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಮ್ಮ ಸರ್ಕಾರದವರು ಏನೇನು ಸಾಧನೆಗಳನ್ನು ಮಾಡಿದ್ದಾರೆ ಎಂಬುದು ಈ ರಾಜ್ಯಪಾಲರ ಭಾಷಣವನ್ನು ನೋಡಿದರೆ ಗೊತ್ತಾಗುತ್ತದೆ. ನಮ್ಮ ಸರ್ಕಾರದ ಸಾಧನೆಯ ಒಂದು ದೊಡ್ಡ ಚಿತ್ರ ಇದರಲ್ಲಿದೆ. ಆದರೆ ದುರ್ದೈವದಿಂದ ವಿರೋಧಪಕ್ಷದ ಮಿತ್ರರಾರೂ ಸಹ ಇದನ್ನು ಕಣ್ಣು ತೆರೆದು ನೋಡಿಲ್ಲವೆಂದು ಕಾಣುತ್ತದೆ. ಮಾನ್ಯ ಚಿಕ್ಕೇಗೌಡರು ಹೇಳಿದ ರೀತಿಯಲ್ಲಿ ವಿರೋಧಪಕ್ಷದವರು ಇನ್ನೂ ಚುನಾವಣೆಯ ವಾತಾವರಣದಲ್ಲಿಯೇ ಇದ್ದಾರೆ. ವಿರೋಧಪಕ್ಷದವರು ಮಾತನಾಡುವ ಧಾಟಿ ನೋಡಿದರೆ, ಅವರು ಬರೀ ಗದ್ದಲ ಮಾಡಿ ತಮ್ಮ ವಿಷಯವನ್ನು ಗೆದ್ದುಕೊಳ್ಳಬೇಕೆಂದಿರುವಂತೆ ಕಾಣುತ್ತದೆ. ಅದನ್ನು ಕವಿತಾ ರೂಪದಲ್ಲಿ ಹೇಳಬೇಕೆಂದರೆ :

'ನೋಡುವ ಕಣ್ಣಿಲ್ಲ ಮಾಡುವ ಬಲವಿಲ್ಲ,
ಬರಿಯ ಮಾತಿನ ಮಲ್ಲ ನಮ್ಮ ವೀರ,
ಒಳಗೆ ಹುರುಳಿಲ್ಲದೇ ಹೊರಗೆ ಬಡಬಡಿಸುತಿಹ
ಸುಳ್ಳಿನ ಸರದಾರ ಉತ್ತರಕುಮಾರ'

9-30 A.M.

Sri K. H. PATIL.—On a point of order, Sir. He used a defamatory sentence against the Opposition. The word *'Sullu'* *'Sullina Saradara'* has been used. He should not use it.

Mr. SPEAKER.—Defamatory statement does not constitute a point of order.

Sri K. H. PATIL.—The word *'Sullu'* has been used.

Mr. SPEAKER.—Let the Member discuss it with his friends. I will give a ruling after we assemble again.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸ್ವಾಮಿ, ನಿನ್ನೆ ಇಲ್ಲಿ ಮಾತನಾಡಿದ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಇಲ್ಲಿಗೆ ಬಂದಿರುವಂತಹ ನಮ್ಮಂತಹ ಹೊಸಬರನ್ನು ಡಂಗು ಬಡಿಸುವುದಕ್ಕಾಗಿ ಮಾತನಾಡಿದರೋ ಏನೋ ಎನ್ನುವಂತೆ ಮೊದಲು ನಮಗೆ ಭಾಸವಾಯಿತು. ಅದೇ ರೀತಿ ಮಧ್ಯೆ ಮಧ್ಯೆ ಶ್ರೀಮಾನ್ ಕೆ. ಹೆಚ್. ಪಾಟೀಲರವರೂ ಇಲ್ಲಿ ಮಾತನಾಡಿದರು—Empty vessels make much noice ಎಂದು ಹೇಳುವ ಹಾಗೆ ಇಲ್ಲಿ ಸುಮ್ಮನೆ ಉದ್ರೇಕ, ಗಲಭೆ ಇತ್ಯಾದಿಗಳನ್ನು ಮಾಡುವುದು ಸರಿಕಾಣುವುದಿಲ್ಲ. ನನ್ನಂಥ ಕೆಲವರು ಇಲ್ಲಿಗೆ ಹೊಸದಾಗಿ ಬಂದಿರಬಹುದು. ಇಲ್ಲಿ ಸುಮ್ಮನೆ ಎಲ್ಲರಿಗೂ ಡಂಗುಬಡಿಸುವ ಹಾಗೆ ದೊಡ್ಡದಾಗಿ ಹೇಳಿದರೆ ಅದನ್ನು ಚೆನ್ನಾಗಿ ಎಲ್ಲರೂ ತಿಳಿದುಕೊಳ್ಳಬಹುದು ಎಂದು ಹೇಳಬಹುದು. ಆದರೆ ಅದು ಬರೀ ಗಲಾಟೆ ಮಾಡಲಿಕ್ಕಾಗಿ, make much noice when your case is week ಎನ್ನುವುದಕ್ಕಾಗಿ ಅದನ್ನು ಬಹು ದೊಡ್ಡದಾಗಿ ಇಲ್ಲಿ ಮಾಡಿ ಇಲ್ಲಿ ಹೇಳಬಹುದು. ಇಲ್ಲಿ ಹೇಳಿದಂತಹ ವಿಷಯ ಗಳಿಗೆಲ್ಲಾ ನಮ್ಮ ಸನ್ಮಾನ್ಯ ಮಂತ್ರಿಗಳೇ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟು ಅದನ್ನು ಇಲ್ಲಿ ಮುಂದೆ ಪ್ರತಿಪಾದನೆಮಾಡುವವರಾಗಿದ್ದಾರೆ, ಅದನ್ನು ಆಗ ಎಲ್ಲರೂ ಕೇಳಬಹುದು. ಆದರೆ ಇಲ್ಲಿ ನಮ್ಮ ಮಾನ್ಯ ಸದಸ್ಯರು ಏನು ಕರ್ಮಕಾಂಡ ಎಂದು ಹೇಳಿದ್ದಾರೆ ಆ ದುರಂತಗಳಿಗೆಲ್ಲಾ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರೇ ಅದರ ನಾಯಕರಾಗಿದ್ದರು. ಅವರೇ ಇಲ್ಲಿಯವರೆಗೆ ಇಷ್ಟುಮಟ್ಟಿನ ಪ್ರಕರಣಗಳನ್ನು ಬೆಳೆಸಿಕೊಂಡು ಬರಲಿಕ್ಕೆ ಮೂಲಭೂತ ಕಾರಣ ರಾಗಿದ್ದವರು. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲರವರು ಮಾತನಾಡುವಾಗ ಗದಗಿನಲ್ಲಿ ಸಹಕಾರಿ ಸಂಘಗಳಲ್ಲಿ ಅಕ್ರಮಗಳು ಆಗಿವೆ, ಹಾಗೂ ಹನುಮನಹಟ್ಟಿ ಸಂಸ್ಥೆಯ ಬಗ್ಗೆ ಏನೇನೋ ಅಕ್ರಮಗಳಾಗಿವೆ ಎಂದು ಹೇಳಿದರು. ಅಂತಹ ಅಕ್ರಮಗಳಿಗೆಲ್ಲಾ ಅವರೇ ನಾಯಕರು ಆಗಿದ್ದವರು ಅವರೇ ಎಂದು ತಿಳಿದುಬರುತ್ತದೆ. ಇವರ ಬಗ್ಗೆ ಕೇಂದ್ರ ಸರ್ಕಾರದವರ ವತಿಯಿಂದ ವಿಚಾರಣೆ ನಡೆಯುತ್ತಿದೆ. ಅದಾದ ನಂತರ ಇದರ ವಿವರಗಳು ಹೊರಬೀಳುತ್ತವೆ ಮತ್ತು ಸತ್ಯ ಸಂಗತಿ ಹೊರಬೀಳುತ್ತದೆ, ಮತ್ತು ನಮ್ಮ ಕಾನೂನುಗಳಲ್ಲಿ ಏನು ನಿಯಮಗಳಿವೆ ಅದರಂತೆ ಯೋಚನೆ ಮಾಡಿ ಎಲ್ಲವನ್ನೂ ಸರಿಯಾಗಿಯೇ ಮಾಡುತ್ತಾರೆ. ಇವರು ಇಲ್ಲಿ ಹೇಳು ತ್ತಿರುವುದು ಹೇಗಿದೆ ಎಂದರೆ ನಮ್ಮ ಉದ್ದಾಮ ಸಾಹಿತಿಗಳಾದ ಶ್ರೀಮಾನ್ ಡಿ. ವಿ. ಗುಂಡಪ್ಪ ನವರು ಅವರ ಮಂಕುತಿಮ್ಮನ ಕಗ್ಗದಲ್ಲಿ ಈ ರೀತಿ ಹೇಳಿದ್ದಾರೆ :

'ಅಪ್ಪಾರೆ ತಿಪ್ಪಾರೆ ತಿರುಗಿ ಬಿದ್ದವನೊಬ್ಬ
ಸ್ವಪ್ನ ಲೋಕದಿ ತಿರೆಯ ಮರೆತಾತನೊಬ್ಬ
ತಪ್ಪು ಸರಿಗಳ ತೂಕವಳೆಯೆ ಕುಳಿತವನೊಬ್ಬ
ಬೆಪ್ಪನಾರ್ ಮೂವರಲಿ, ಮಂಕು ತಿಮ್ಮ'

ಎಂಬ ಹಾಗೆ ಇಲ್ಲಿ ಕೆಲವರು ಮೇಲೆ ಮೇಲೆ ಎದ್ದು ಗೊಂದಲ ಗಲಾಟೆಗಳನ್ನು ಮಾಡುತ್ತಿರುವುದು ಹೇಗಿದೆ ಎಂದರೆ :

'ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವೆನ್ನುತಿಹ ಸಖನೇ ನಿನ್ನ
ಉದ್ಧಾರವೆಷ್ಟಾಯ್ತೋ, ಮಂಕು ತಿಮ್ಮ'

ಎಂದು ಇರುವಂತೆ ಇಲ್ಲಿ ಸುಮ್ಮನೆ ಮೇಲೆ ಮೇಲೆ ಎದ್ದು ಗೊಂದಲ ಗಲಾಟೆಗಳನ್ನು ಎಬ್ಬಿಸ ತ್ತಿದ್ದರೆ ಅದು ಸರಿಯಾದ ಮಾರ್ಗವಾಗುವುದಿಲ್ಲ. ಇದಕ್ಕೆಲ್ಲಾ ನಮ್ಮ ಸರಕಾರದ ವತಿಯಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡಲು ಶಕ್ತರಾಗಿದ್ದಾರೆ. ನಮ್ಮ ವಿರೋಧ ಪಕ್ಷಗಳ ಸದಸ್ಯರು ಈ ಸಭೆಯೊಳಗೆ ದಂಗುಬಡಿಯುವಂತೆ ಹೇಳಿದರೆ ಹೊರಗಿನ ಸಾಮಾನ್ಯ ಜನರು ಮರುಳಾಗುತ್ತಾ ರೆಂದು ತಿಳಿದುಕೊಂಡಿರಬಹುದು ಆದರೆ ಇದರ ಬಗ್ಗೆ ಜನ ಸರಿಯಾಗಿ ವಿಚಾರಮಾಡಿ ತಿಳಿದು ಕೊಳ್ಳುತ್ತಾರೆ. ಇಲ್ಲಿ ಸುಮ್ಮನೆ ಗೊಂದಲ ಗಲಾಟೆ ಮಾಡುವುದು ದಂಗೆ ಎಬ್ಬಿಸುವುದಕ್ಕಾಗಿ, ಸಾಮಾಜಿಕ ಜೀವನವನ್ನು ಹಾಳುಮಾಡುವುದಕ್ಕಾಗಿ ಇಲ್ಲಿ ಹೇಳುತ್ತಾ ಹೋದರೆ ಸರಿಯಾಗಿರುವುದಿಲ್ಲ.

Sri K. H. PATIL.—On a point of order, Sir. ನಿನ್ನೆಯ ದಿನ ನಮ್ಮ ಕಡೆಯ ಮಾನ್ಯ ಸದಸ್ಯರು ಮಾತನಾಡುವಾಗ ಕಾದಂಬರಿಯಂತಹ ಪುಸ್ತಕಗಳನ್ನು ಇಲ್ಲಿ ಓದಬಾರದು ಎಂದು ಮಾನ್ಯ ಅಧ್ಯಕ್ಷರು ಇಲ್ಲಿ ಹೇಳಿದ್ದರು ಮತ್ತು ಅಂತಹ ವಾಕ್ಯಗಳನ್ನು ಇಲ್ಲಿ ಉಲ್ಲೇಖ ಮಾಡಬಾರದು ಎಂದು ಅಪ್ಪಣೆ ಇತ್ತರು. ಆದರೆ ಇಂದು ಇಲ್ಲಿ ಈಗ ಮಾನ್ಯ ಸದಸ್ಯರು ಡಿ. ವಿ. ಜಿ. ಯವರ ಮಂಕು ತಿಮ್ಮನ ಕಗ್ಗದಂತಹ ಪುಸ್ತಕವನ್ನು ಓದಿ ಅಂತಹ ಸಂಗತಿಗಳನ್ನು ಹೇಳುವುದು ವಿಸಂಗತವಾಗಿದೆ.

Mr. SPEAKER.—It is a point of order or a reflection on the Chair's ruling, let the member be clear in his point.

Sri K. H. PATIL.—I have nothing against the Chair, Sir. ಇದು ಉಲ್ಲೇಖ ಅವರು ಮಾಡುತ್ತಿರುವ್ಷದು, ಅದರಿಂದಾಗಿ ಹೇಳುತ್ತಿದ್ದೇನೆ.

Mr. SPEAKER.—Let him not think in a confused manner. I want him to tell me whether it is a reflection on my ruling or whether it is a point of order ? Is he clear about it ?

Sri K. H. PATIL.—I am quite clear, Sir. It is a point of order.

Mr. SPEAKER.—There is no point of order or any merit in what the Hon'ble Member has said.

(The Hon'ble Member Sri K. H. Patil interrupted)

Is not the Member aware that I am saying something ? Are we in a public meeting where anybody can get up and talk anything ? What are the Rules for ? I am giving some latitude so that things might settle down. But if some members think of constantly interrupting and spend all the time of the House, I will not permit it at all. If there is no good debate, let there be no debate at all. Let both parties shout at each other.

The suggestion by the Hon'ble Member was that objection was raised when another Member was reading a book called 'political novel' or 'historic novel' written by an author and that was being recited as a factual statement. I raised objection saying that it cannot be done. I made the position clear that such a book is prohibited from being referred to, but if for the purpose of supporting an argument, an extract is read, I do not object, though I would discourage reading of books here. Here the question is one of intelligent participation in the debate by the merit of the Members for the purposes of best expression of the ideas, if a quotation is given, it may not be bad. Here if I remember aright, Mr. Sogi referred to some couplet by a learned author. I do not say that it is absolutely necessary or highly relevant to the debate. But it does not stand on par with what happened yesterday. And the position having been made clear by the Hon'ble Member who raised the point of order that if he does not cast any reflection on the ruling of the Speaker, I think I must drop the matter at that.

Sri AZIZ SAIT (Narasimharaja).—He used the word '*dange*'; is it parliamentary, Sir ?

Mr. SPEAKER.—Can the Member show any precedent ? I want to know whether it has been held as unparliamentary at any time let

him kindly bear in mind the difference between the word 'traitor' and 'revolt'. Any way I will study it and give a ruling.

Sri S. SIVAPPA.—What Mr. Patil wanted to know was............

Mr. SPEAKER.—Is it a point of order ?

Sri S. SIVAPPA.—That difference should not be made between author and author.

Mr. SPEAKER.—Is the reading means reading anything and everything and speaking means, speaking anything, relevant or irrelevant ?

Sri S. SIVAPPA.—I welcome quoting............

Mr. SPEAKER.—It was not coating, it was shirting ! !

(laughter)

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಪ್ರಗತಿಯ ಬಗ್ಗೆ ನೋಡುವುದಾದರೆ ನಿಜವಾಗಿಯೂ ನಮ್ಮ ಪ್ರಗತಿ ಬಹು ಚೆನ್ನಾಗಿ ಮುಂದುವರಿಯುತ್ತಿದೆ. ಇದರ ಹಿನ್ನೆಲೆಯನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆಡಳಿತ ಪಕ್ಷವಾಗಿರುವ ನಮ್ಮ ಕಾಂಗ್ರೆಸ್ಸು ಪಕ್ಷವು ಕಳೆದ ಹತ್ತು ವರ್ಷಗಳಿಂದ ಬಹಳ ಒಗ್ಗಟ್ಟಿನಿಂದ ಕೆಲಸ ಮಾಡುತ್ತಾ ಬಂದಿದೆ. ಮತ್ತು ಜನರ ಪ್ರಗತಿಗಾಗಿ ಸಾಮೂಹಿಕವಾಗಿ ಕೆಲಸ ಮಾಡುತ್ತ ಬಂದಿದ್ದಾರೆ.

ಅದಕ್ಕಿಂತಲೂ ಪೂರ್ವದಲ್ಲಿ ಯಾವುದೇ ವಿಧವಾದ ಸೌಕರ್ಯಗಳು ಇರಲಿಲ್ಲ. ಅದರ ಜೊತೆಗೆ ಸಂಶಯಗಳು, ಎಡರುತೊಡರುಗಳು, ವಿಘ್ನಗಳು, ರಾಜಕೀಯವಾಗಿ ಸಾಮಾಜಿಕವಾಗಿ ಇರತಕ್ಕಂಥ ತೊಂದರೆಗಳನ್ನು ಪರಿಗಣಿಸಿದರೆ ನಮ್ಮ ರಾಜ್ಯ ಸರ್ಕಾರ ಸಾಧಿಸಿರತಕ್ಕಂಥ ಪ್ರಗತಿ ಸಾಮಾನ್ಯವಲ್ಲ. ಟೀಕೆಮಾಡಬೇಕು ಎನ್ನುವ ದೃಷ್ಟಿ ಅಲ್ಲದೆ ಹೊಟ್ಟೆಕಿಚ್ಚಿನಿಂದ ನೋಡದೆ ನಿಜವಾದ ಜವಾಬ್ದಾರಿಯಿಂದ ಪರಿಶೀಲಿಸಿದರೆ ನಮ್ಮ ಸರ್ಕಾರ ಅದ್ಭುತ ಪ್ರಗತಿಯನ್ನು ಸಾಧಿಸಿದೆ ಎಂದು ಕಂಡು ಬರುತ್ತಿದೆ. ಸಾಧಿಸಬೇಕಾದುದು ಇನ್ನೂ ಇದೆ. ನಾವು ಎಲ್ಲಾ ಮಾಡಿಬಿಟ್ಟಿದ್ದೇವೆ ಎಲ್ಲಾ ಮುಗಿದುಹೋಯಿತ್ತು ಎಂದು ಹೇಳುವುದಿಲ್ಲ. ಈಗ 10 ಪರ್ಸೆಂಟು ಸಾಧಿಸಿದ್ದರೆ ಸಾಧಿಸಬೇಕಾದುದು ಇನ್ನೂ 90 ಪರ್ಸೆಂಟು ಇದೆ, ಎಂಬುದನ್ನು ಗಮನಿಸಬೇಕು. ಸಾಧಿಸುವ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಎದ್ದು ಕಾಣಬರುತ್ತದೆ. ವಿರೋಧಪಕ್ಷದವರು ಮೂಲಭೂತವಾದ ತತ್ವಗಳನ್ನೂ ನೀತಿಯನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಪ್ರತಿಪಾದನೆ ಮಾಡಲಿಲ್ಲವೆಂದು ಪ್ರಸ್ತಾಪ ಮಾಡಿದರು. ಸರ್ಕಾರದ ನೀತಿ ಮತ್ತು ತತ್ವ ಮತ್ತು ಅದು ನಡೆಯತಕ್ಕ ಮಾರ್ಗ ಏನು ಎನ್ನುವುದನ್ನು ಜನತೆಯ ಮುಂದೆ ಚುನಾವಣೆಯ ಘೋಷಣೆಯ ಕಾಲದಲ್ಲಿ ಇಟ್ಟಿದ್ದಾರೆ. ಈ ಸಭೆಯಲ್ಲಿ ಅಲ್ಲದೆ ಹೊರಗಡೆಯೂ ಅನೇಕ ಸಲ ಅನೇಕ ಸಂದರ್ಭಗಳಲ್ಲಿ ಸರ್ಕಾರದ ನೀತಿ ಏನು ಮಾರ್ಗ ಏನು ಎನ್ನುವುದನ್ನು ಅನೇಕ ಭಾರಿ ವ್ಯಕ್ತ ಮಾಡಿದ್ದಾರೆ. ಮುನ್ನಡೆ ಮಾರ್ಗ ಏನು ಎನ್ನುವುದೂ ಸರ್ವ ವಿದಿತವಾಗಿದೆ. ಅದಕ್ಕೆಲ್ಲಾ ವಿವರಣೆಯನ್ನು ಕೊಡುತ್ತಾ ಹೋದರೆ ಅದು ಒಂದು ದೊಡ್ಡ ಗ್ರಂಥವೇ ಆಗಬಹುದು. ಸರ್ಕಾರ ಮಾಡಿರತಕ್ಕ ಸಾಧನೆಯೆಲ್ಲಾ ರಾಜ್ಯಪಾಲರ ಭಾಷಣದ ಪಕ್ಷಿನೋಟದಲ್ಲಿ ವ್ಯಕ್ತವಾಗಿದೆ. ನಾನು ಹೇಳಿದ ಹಾಗೆ ನಮಗೆ ಇರತಕ್ಕ ಎಡರುತೊಡರುಗಳ ಜೊತೆಗೆ ಬೆಳೆದಿರತಕ್ಕಂಥ ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಮಾಡಿರತಕ್ಕ ಸಾಧನೆ ಬಹಳ ದೊಡ್ಡದಾಗಿದೆ. ಎಲ್ಲರೂ ಸೇರಿ ಆಹಾರದ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಸರ್ಕಾರದ ಸಾಧನೆಯನ್ನು ಪರಿಗಣಿಸಬೇಕಾದರೆ ಒಂದೇ ದಿವಸದಲ್ಲಿ ಅವರು ಏನು ಮಾಡಿದ್ದಾರೆ ಎನ್ನುವುದನ್ನು ನೋಡಿದರೆ ಗೊತ್ತಾಗುವುದಿಲ್ಲ. ಶರಾವತಿ ಅಂಥ ಒಂದು ದೊಡ್ಡ ಪ್ರಾಜೆಕ್ಟ್ ಕೆಲಸ ನಮ್ಮ ದೇಶದಲ್ಲಿ ಆಗಿದೆ. ಶರಾವತಿ ಬಗ್ಗೆ ಏನೇನೋ ಹೇಳುತಿದ್ದಾರೆ, ಆದರೆ ಅಂತಹ ಮಹತ್‌ಕಾರ್ಯ ಇಡೀ ದೇಶದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿ ಇರಬಹುದಾದ ದೊಡ್ಡ ಕಾರ್ಯ. ನಮ್ಮ ರಾಜ್ಯಕ್ಕೆ ಮಾತ್ರವೇ ಅಲ್ಲ ದೇಶದ ಬಹುಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಕೆಲಸ ನಡೆದಿದೆ. ಅದನ್ನು ಬಿಟ್ಟು ಸಣ್ಣಪುಟ್ಟ ಅಕ್ರಮಗಳು ಆಗಿವೆ ಎಂದು ಹೇಳುತ್ತಾ ಹೋದರೆ ಹೇಗೆ. ವಿಧಾನಸೌಧ ಭವನ ಕಟ್ಟುವಾಗ ಅನೇಕ ಅಕ್ರಮಗಳು ವೇಸ್ಟೇಜ ಎಷ್ಟೋ ಆಗಿರಬಹುದು. ದೊಡ್ಡ ಕೆಲಸಗಳನ್ನು ಮಾಡುವಾಗ ಸಣ್ಣಪುಟ್ಟ ಅಕ್ರಮ ಆಗಿರಬಹುದು. ಆದರೆ ಇಡೀ ಜನತೆಯನ್ನು ಪ್ರಕ್ಷುಬ್ಧಗೊಳಿಸುವ ಅನ್ಯಾಯ ಅಕ್ರಮ ನಡೆದಿದೆ ಎನ್ನುವುದು ನಮ್ಮ ಗಮನಕ್ಕೆ ಬರಲಿಲ್ಲ· ಅಂಥಾದ್ದು ಏನಾದರು ಇದ್ದರೆ ಕ್ರಮ ತೆಗೆದುಕೊಳ್ಳು

(ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ)

ತ್ತೇವೆ. ಅಕ್ರಮ ನಡೆದಿದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಅವರು ತೀವ್ರ ಗಮನಕೊಟ್ಟು ಪರಿಶೀಲನೆ ಮಾಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ ನೋಡುವುದಾದ್ದರೆ ನಮ್ಮ ದೇಶದಲ್ಲಿ ಮಹಾ ಮಹಾ ಅಧ್ಬುತ ಪ್ರಗತಿ ನಡೆದಿದೆ. ಆಹಾರ ಕೊಡುವ ವ್ಯವಸ್ಥೆ ಏನು ಇದೆ, ಮತ್ತು ಅದಕ್ಕಾಗಿ ವ್ಯವಸಾಯದ ಖಾತೆಗೆ ಅದ್ವಿತೀ ಗಮನವನ್ನು ಕೊಡುವಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ವ್ಯಕ್ತಪಡಿಸಿದ್ದಾರೆ. ಆದ್ಯ ಗಮನವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಆ ಖಾತೆಯನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ. ಇದರಿಂದ ಸರ್ಕಾರದವರು ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದಕ್ಕೆ ಎಷ್ಟು ಕಳಕಳಿ ಇದೆ, ಎಷ್ಟು ಆಸಕ್ತಿಇದೆ ಎಂಬುದು ವ್ಯಕ್ತವಾಗುತ್ತದೆ. ಅವರು ಮಾಡಿರುವ ಸಾಧನೆಯ ಬಗ್ಗೆ ನಾವು ನಿಜವಾಗಿಯೂ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ವ್ಯವಸಾಯದ ವಿಚಾರದಲ್ಲಿ ನಮ್ಮಲ್ಲಿ ಶೇಕಡ 8 ರಷ್ಟು ಪ್ರಗತಿಯಾಗಿದೆ, ಬೇರೆ ರಾಜ್ಯದಲ್ಲಿ 40-50 ಪರ್ಸೆಂಟು ಆಗಿದೆ ಎಂದು ಹೇಳುತ್ತಾರೆ. ನಮ್ಮ ರಾಜಕೀಯ ಸೂತ್ರವನ್ನು ವಹಿಸಿಕೊಂಡ ಆರಂಭ ದಲ್ಲಿ ಎಷ್ಟು ಪರ್ಸೆಂಟು ಇತ್ತು, ಈಗ ಎಷ್ಟು ಪರ್ಸೆಂಟು ಇದೆ ಆ ಲೆಕ್ಕ ಹಾಕಿದರೆ ಗಮನಾರ್ಹವಾದ ಪ್ರಗತಿಯಾಗಿದೆ. 10ವರ್ಷಕಾಲ ಯಾವ ಪರ್ಸೆಂಟೂ ಇಲ್ಲದೇ ಇರುವ ವ್ಯವಸಾಯದಲ್ಲಿ 8 ಪರ್ಸೆಂಟು ಪ್ರಗತಿಯಾಗಿದೆ ಎಂದರೆ ಈ 10 ವರ್ಷಗಳಲ್ಲಿ ಅಷ್ಟುಮಟ್ಟಿನ ಸಾಧನೆ ಮಾಡುವುದು ಸಣ್ಣದೇನೂ ಅಲ್ಲ. ಈ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಸಾಧನೆ ಜಾಸ್ತಿಯಾಗಿದೆ ಎಂದು ಹೇಳಬಹುದು. ನೀರಾವರಿಬಾವಿಗಳನ್ನು ಹೆಚ್ಚು ಕಡಿಮೆ ಸಾಕಷ್ಟು ಕೊಟ್ಟಿದೆ. ಅದರ ಜೊತೆಗೆ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಸೂಚಿಸಬಯಸುತ್ತೇನೆ. ನೀರಾವರಿ ಬಾವಿಗಳನ್ನು ಹೆಚ್ಚು ಮಾಡುವುದರ ಜೊತೆಗೆ ರಾಜ್ಯದಲ್ಲಿ ಪ್ರತಿ ಗ್ರಾಮಕ್ಕೂ ಕೆರೆ ಮತ್ತು ಸಾಧ್ಯ ಇರುವ ಕಡೆ ಲಿಫ್ಟ್ ಇರ್ರಿಗೇಶನ್ನಿಗೆ ಹೆಚ್ಚಿನ ಗಮನಕೊಡಬೇಕು. ಇದರಿಂದ ಜನತೆಗೆ ಹೆಚ್ಚಿನ ಉಪಯೋಗ ವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ಹೊಸ ಹೊಸ ರೀತಿ ನೀತಿ ಯನ್ನು ಸರ್ಕಾರ ರೂಪಿಸಿದೆ. ಶಿಕ್ಷಕರಿಗೆ ಟ್ರಿಪ್ಪಲ್ ಬೆನಿಫಿಟ್ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದೆ. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಉಚಿತವಾಗಿ ಮಾಡಿದ್ದಾರೆ. ಅನೇಕ ರೀತಿಯ ಸೌಲಭ್ಯ ಗಳನ್ನು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಒದಗಿಸಿ ಕೊಟ್ಟಿದೆ. ಇಡೀ ದೇಶದಲ್ಲಿ ಎಲ್ಲಿ ಹೋಗಲಿ ಒಂದಲ್ಲ ಒಂದು ರೀತಿಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಾ ಇದೆ. ರಸ್ತೆ ಕಟ್ಟಡ ಆಸ್ಪತ್ರೆ ಶಾಲಾ ಕಟ್ಟಡ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಾ ಇರುವುದನ್ನು ಕಾಣುತ್ತಾ ಇದ್ದೇವೆ. 10-20 ವರ್ಷ ಹಿಂದಿನಿಂದಲೂ ಯಾವುದನ್ನು ಕಾಣುತ್ತಿದ್ದೇವೆ ಏನು ಎನ್ನುವುದನ್ನು ನಿರ್ಮಲವಾದ ಮನಸ್ಸಿನಿಂದ ವಿಚಾರ ಮಾಡಬೇಕು. ಹಾಗೆ ಪ್ರೆಜುಡಿಸ್ ಮೈಂಡನ್ನು ಬಿಟ್ಟು ನಿರ್ವಿಕಾರ ಮನಸ್ಸಿನಿಂದ ವಿಚಾರ ಮಾಡಿದರೆ ಸರ್ಕಾರ ಸಾಧಿಸಿದ ಪ್ರಗತಿ ಅಧ್ಬುತವಾಗಿದೆ ಎಂದು ಕಾಣಬರುತ್ತದೆ. ಶಿಕ್ಷಣ ವಿಚಾರದಲ್ಲಿ ಸರ್ಕಾರಕ್ಕೆ ನಾನು ಒಂದು ಸಲಹೆ ಕೊಡಬಯಸುತ್ತೇನೆ. ಬಳ್ಳಾರಿ ಜಿಲ್ಲೆಯ ವಿಚಾರ ಹೇಳುವುದಾದರೆ ಶಿಕ್ಷಣದ ವಿಚಾರದಲ್ಲಿ ಪ್ರಾಥಮಿಕ ಶಿಕ್ಷಕರ ಗೋಳು ಹೇಳತೀರದ ಗೋಳಾಗಿದೆ. ಸಕಾಲದಲ್ಲಿ ಸಂಬಳ ದೊರಕುತ್ತಾ ಇಲ್ಲ. ಡಿಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡು ಸ್ಕೂಲುಗಳನ್ನು ಸರಿಯಾಗಿ ವ್ಯವಸ್ಥೆ ಮಾಡುತಿದ್ದಾರೆಯೋ ಎಂದು ಕೇಳುತ್ತಿದ್ದೇನೆ. ಆದರೆ ಅದರ ವ್ಯವಸ್ಥೆ ಇನ್ನೂ ಸರಿಯಾಗಿಲ್ಲ. ಅದನ್ನು ಸರ್ಕಾರ ವಹಿಸಿಕೊಂಡು ಎಲ್ಲ ಸರ್ಕಾರಿ ಶಾಲಾ ಶಿಕ್ಷಕರಿಗೆ ದೊರೆಯುವ ಸೌಲಭ್ಯಗಳನ್ನು ಇವರಿಗೂ ಕೊಡಬೇಕೆಂದು ಸರ್ಕಾರಕ್ಕೆ ಸೂಚಿಸ ಬಯಸುತ್ತೇನೆ.

ಇನ್ನು ಕರ್ಣಾಟಕದ ವಿಚಾರ : ನಮ್ಮ ರಾಜ್ಯಕ್ಕೆ ಕರ್ಣಾಟಕ ಎನ್ನುವ ಹೆಸರನ್ನು ಸರ್ಕಾರ ಇನ್ನೂ ಇಡಲಿಲ್ಲ. ಅದಕ್ಕೆ ಒಂದು ಮಾತು ಹೇಳುತ್ತೇನೆ. ಅವರಿಗೆ ಅಂದರೆ, ವಿರೋಧಪಕ್ಷದವರಿಗೆ ನಾನು ಒಂದು ಛಾಲೇಂಜ್ ಕೊಡುತ್ತೇನೆ. ಏನೆಂದರೆ, ಅವರು 90 ಜನ ಇದ್ದಾರೆ ಎಂದು ಹೇಳುತ್ತಾರೆ. 90 ಜನರಿಗೂ ಒಂದೇ ಅಭಿಪ್ರಾಯ ಇದೆಯೆ? ಕರ್ಣಾಟಕವೆಂಬ ಹೆಸರನ್ನು 90 ಜನವೂ ಒಮ್ಮತದಿಂದ ಒಪ್ಪಿಕೊಳ್ಳುವುದಾದರೆ ನಾವು 126 ಜನರೂ ಒಪ್ಪಿ ಹೆಸರು ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಯಾವುದೇ ಅಭಿಪ್ರಾಯ ವ್ಯಕ್ತ ಮಾಡಿದರೂ 126 ಜನರ ಒಪ್ಪಿಗೆ ಇದೆಯೆ ಎಂದು ಕೇಳುತ್ತಾರೆ. ಅವರ ಅಭಿಪ್ರಾಯ ಇದೆ. 90 ಜನರಲ್ಲಿ ಒಮ್ಮತದ ಅಭಿಪ್ರಾಯ ಇದೆಯೇ ಎನ್ನುವುದನ್ನು ವಿರೋಧಪಕ್ಷದ ಮುಖಂಡರು ಅರ್ಥಮಾಡಿಕೊಳ್ಳಬೇಕು.

ಶ್ರೀ ಎಸ್. ಗೋಪಾಲಗೌಡ.—126 ಜನರಲ್ಲಿ ಯಾವುದರಲ್ಲಿ ಐಕ್ಯತೆ ಇದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವಾಗಲೂ ಐಕ್ಯತೆ ಇದ್ದೇ ಇದೆ. ವಿರೋಧ ಪಕ್ಷದ ಜನರು ಅರ್ಥಮಾಡಿಕೊಳ್ಳಬೇಕು. ಈ 90 ಜನರು ಅಸೆಂಬ್ಲಿಗೆ ಆರಿಸಿ ಬರಲು ಅನುಕೂಲ ಮಾಡಿಕೊಟ್ಟವರು ಕಾಂಗ್ರೆಸ್ಸಿನವರು ಎಂದು ತಿಳಿದು ಕೊಳ್ಳಬೇಕು. ಪ್ರಜಾಪ್ರಭುತ್ವದ ವಿಚಾರವನ್ನು ಅರಿತು ವಿರೋಧಪಕ್ಷದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟು ಪ್ರಜಾಪ್ರಭುತ್ವ ತತ್ವವನ್ನು ಇಲ್ಲಿಗೆ ರೂಡಿಸುವಂತೆ ಮಾಡಿದವರು, ಮೂಲ ಕಾರಣರು ಕಾಂಗ್ರೆಸ್ಸಿನವರೇ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಲ್ಯಾಂಡ್ ರೆವಿನ್ಯೂ ವಿಚಾರ ಹೇಳುವುದಾದರೆ ಲ್ಯಾಂಡ್ ರೆವಿನ್ಯೂ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಭೂಕಂದಾಯ ರದ್ದು ಮಾಡುವ ವಿಷಯದಲ್ಲಿ ವಿರೋಧ ಪಕ್ಷದವರು ಗದ್ದಲ ಮಾಡಲು ಹತ್ತಿದ್ದಾರೆ. ಭೂಕಂದಾಯದ ವರಮಾನ ನೋಡಿದರೆ ಅಲ್ಪಸ್ವಲ್ಪ. ಅಂತಹ ಗಮನಾರ್ಹವಾದ ವರಮಾನವೇನೂ ಬರುವುದಿಲ್ಲ. ಆದರೆ ಸರ್ಕಾರಕಿಂತ ಹೆಚ್ಚಿಗೆ ತಾಲ್ಲೂಕುಬೋರ್ಡಿಗೆ ಅಪ್ರತ್ಯಕ್ಷವಾಗಿ ವರಮಾನ ಬರುವುದರಿಂದ, ನಾನು ಒಬ್ಬ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿರುವುದರಿಂದ ಹೇಳುತ್ತೇನೆ. ಸ್ಥಳೀಯ ಸಂಸ್ಥೆಗಳ ಹಿತದೃಷ್ಟಿಯಿಂದ ಇದನ್ನು ಯೋಚಿಸಬೇಕು. ಸ್ಥಳೀಯ ಸಂಸ್ಥೆಗಳ ವ್ಯವಸ್ಥೆ ಸರಿಯಾಗಿ ನಡೆಯಬೇಕಾದರೆ ಅವುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಡೆಸಬೇಕಾಗಿದ್ದರೆ ಬಹಳ ಮಟ್ಟಿಗೆ ಅದು ಸಹಾಯಕವಾಗಿದೆ. ಈ ಭೂಕಂದಾಯವನ್ನು ಪುನಃ ಪರಿಶೀಲನೆ ಮಾಡುವ ಧೋರಣೆಯನ್ನು ಸರ್ಕಾರ ಇಟ್ಟುಕೊಂಡಿದೆ. ನನ್ನ ಅಭಿಪ್ರಾಯ ಹೇಳುವುದಾದರೆ ಬಡವರಿಗೆ ಅನುಕೂಲವಾಗಬೇಕು. ಚೀಪ್ ಪಾಪುಲಾರಿಟಿ (Cheap popularity) ದೃಷ್ಟಿಯಿಂದ ದೊಡ್ಡ ದೊಡ್ಡ ಹಿಡುವಳಿದಾರರು, ಜಮೀನ್ದಾರರು ಲಾಭ ಪಡೆಯುವುದಕ್ಕೆ ಅವಕಾಶವಾಗಬಾರದು. ಬಡವರಿಗೆ ಲಾಭ ಬರಬೇಕು ಎನ್ನುವ ದೃಷ್ಟಿ ಇಟ್ಟುಕೊಳ್ಳಬೇಕು. ಮತ್ತು ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಕೇವಲ ಬಡವರಾಗಿರುವವರು ಐದು ಹತ್ತು ಎಕರೆಗಳಿಗೆ ಒಳಪಟ್ಟಿರುವವರಿಗೆ ಭೂಕಂದಾಯವನ್ನು ರದ್ದು ಮಾಡಿ, ಅವರ ಮೇಲ್ಪಟ್ಟಿರುವ ದೊಡ್ಡ ದೊಡ್ಡ ಜಮೀನ್ದಾರರಿಗೆ ಭೂಕಂದಾಯವನ್ನು ಹಾಕಿ, ಹೆಚ್ಚಾದರೂ ಚಿಂತೆ ಇಲ್ಲ ಹಾಕಿ, ಅದರಿಂದ ಬರುವ ಹಣವನ್ನೆಲ್ಲ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟು ಅವು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಹೆಚ್ಚಿನ ಹಣ ಕೊಡಬೇಕೆಂದು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ ಸ್ವಾಮಿ.

ವಿದ್ಯುಚ್ಛಕ್ತಿ ಮತ್ತು ನೀರಾವರಿ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ನೀರಾವರಿ ಬಾವಿಗಳಿಗೆ ಸಾಲ ಕೊಡುವಾಗ ಈ ಮುಂಚೆ ತಾಲ್ಲೂಕು ಬೋರ್ಡ್ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಕೊಡತಕ್ಕ ಪದ್ಧತಿ ಇತ್ತು. ಈಗ ಲಿಬರಲ್ಕ್ಸಸ್ಟ್ ಸ್ಕೀಮನ್ನು ತೆಗೆದುಹಾಕಿ ಅಡಮಾನ ಬ್ಯಾಂಕುಗಳವರು ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ತೊಂದರೆಯಾಗಿದೆ. ಮಾನ್ಯ ಚಿಕ್ಕೇಗೌಡರು ಹೇಳಿದಂತೆ ಇದರಲ್ಲಿರುವ ಪ್ರೊಸೀಜರಲ್ ಕಾಂಪ್ಲಿಕೇಷನ್‌ಗಳಿಂದ ತಡವಾಗುತ್ತಿದೆ. ಆದ್ದರಿಂದ ಇದನ್ನು ಆದಷ್ಟು ಮಟ್ಟಿಗೆ ಸರಳಗೊಳಿಸಬೇಕು. ಇದರ ಜೊತೆಗೆ ಲಿಬರಲೈಸ್ಡ್ ಸ್ಕೀಮನ್ನು ಮತ್ತೆ ಜಾರಿಗೆ ತಂದು ತಾಲ್ಲೂಕು ಬೋರ್ಡು ಅಥವಾ ರಾಷ್ಟ್ರೀಯ ವಿಸ್ತರಣಾ ಯೋಜನೆ ಮುಖಾಂತರ ರೈತರಿಗೆ ನೀರಾವರಿ ಬಾವಿಗಳಿಗೆ ಸಾಲ ಸಿಕ್ಕುವ ವ್ಯವಸ್ಥೆಯನ್ನು ಅಡಮಾನ ಬ್ಯಾಂಕುಗಳ ಜೊತೆಗೆ ಇರುವಂತೆ ಮಾಡಿ ರೈತರಿಗೆ ಸಾಲವನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಗ್ರಾಮೀಣ ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ ಬಹುಮಟ್ಟಿಗೆ ಎಲ್ಲ ಕಡೆಗೂ ಗ್ರಾಮೀಣ ರಸ್ತೆಗಳ ನಿರ್ಮಾಣವಾಗಿದೆ. ಆದರೆ ಅವುಗಳ ದುರಸ್ತಿ ಕೆಲಸ ನಿರೀಕ್ಷಿಸಿದ ಮಟ್ಟದಲ್ಲಿ ನಡೆದಿಲ್ಲ ಎಂದು ಕಂಡುಬರುತ್ತದೆ. ದುರಸ್ತಿ ಕೆಲಸವನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಿದರೆ ಅದಕ್ಕೆ ಬೇಕಾದ ಹಣವನ್ನು ಅವರಿಗೆ ಒದಗಿಸಿ ಕೆಲಸ ಮಾಡಿಸಬೇಕು ಅಥವಾ ಪಬ್ಲಿಕವರ್ಕ್ಸ್ ಇಲಾಖೆಯಿಂದ ಆ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ದುರಸ್ತು ಮಾಡಿಸಬೇಕೆಂದು ಸೂಚಿಸಬಯಸುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ಭ್ರಷ್ಟಾಚಾರದ ವಿಚಾರವಾಗಿ ನಮ್ಮ ವಿರೋಧ ಪಕ್ಷದ ಮಿತ್ರರು ಹೆಚ್ಚಿನ ಗದ್ದಲ ಗಲಾಟೆ ಮಾಡಿದರು. ಜೋರಾಗಿ ಮಾತನಾಡತಕ್ಕ ಪ್ರಕೃತಿಯಿಂದ, ಪ್ರಚಂಡವಾದ ಧ್ವನಿಯಿಂದ ಮಾತನಾಡಿ ಗಲಾಟೆ ಗದ್ದಲ ಮಾಡುವುದು ಶ್ರೇಯಸ್ಕರವಾದುದಲ್ಲ. ಭ್ರಷ್ಟಾಚಾರದ ಅಪಾದನೆ ರುಜುವಾತಾದಾಗ ಸರ್ಕಾರ ಅವಶ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಕೋತಿ ಮೊಸರನ್ನು ತಿಂದು ಹೋತನ ಬಾಯಿಗೆ ಒರಸಿ, ಏ ಹೋತೆ ನಿನ್ನ ಬಾಯಿಗೆ ಮೊಸರಾಗಿದೆ ಎಂದು ಹೇಳಿದಂತೆ ಭ್ರಷ್ಟಾಚಾರಗಳಿಗೆ ಕಾರಣಭೂತರಾಗಿರುವವರೇ ಘೋರವಾದ ಆಕ್ರಮಗಳನ್ನು

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ನಡೆಯುಸಿರುವರೇ ಇವತ್ತು ದೊಡ್ಡ ತತ್ವೋಪದೇಶಕರಾಗಿ ಬಂದು ಗಲಾಟೆ, ಗಲಭೆ ಮಾಡುವುದು ಸರಿಯಲ್ಲ. ಇಲ್ಲಿನ ಸನ್ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ, ಈ ಮಹಾ ಸಭೆ ಕಂಡುಕೊಂಡಿದೆ. ಅದರೆ ಆ ವಿಷಯ ಎಲ್ಲರಿಗೂ ಗೊತ್ತಾಗುತ್ತದೆ, ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ ಎನ್ನುವ ಆಸೆಯ ಮೇಲೆ ಏನೆಲ್ಲ ಮಾತನಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಸರಿಯಲ್ಲ. ಪತ್ರಿಕೆಯವರು ವಿರೋಧ ಪಕ್ಷದವರಿಗೆ ಸ್ವಲ್ಪ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವಂತೆ ಕಾಣುತ್ತದೆ. ಕೇವಲ ಅವರು ಹೇಳಿದುದೆಲ್ಲ ಪತ್ರಿಕೆಗಳಲ್ಲಿ ಬರುತ್ತದೆ. ಜನರು ಮರುಳಾಗುತ್ತಾರೆ ಎಂದು ಅವರು ತಿಳಿದುಕೊಳ್ಳುವುದಾರೆ......

Sri H. SIDDAVEERAPPA (Harihara).—I rise to a point of order. Is it right on the part of the Hon'ble Member to cast aspersions on the newspapers, which are after all playing a vital role in the building up of our democracy? Is he well within his rights? What does he mean when he says that we want to see our names in the print? we are not seeing our names in the papers for the first time. Perhaps that gentleman is interested. The Hon'ble Member must know the limits within which he has to offer his remarks.

Sri C. K. RAJAIAH SHETTY (Chicknaikanahalli).—What voice have the newspapers in this House to defend themselves?

Sri H. SIDDAVEERAPPA.—It should be a warninig to the Press not to report such speeches.

Mr. SPEAKER.—Now the point of order raises very interesting and intricate problems. I will make a deep study of it and give a rulinglater.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕಾಗಿ ನಾನು ಹೇಳುವುದಾದರೆ, ಈ ಮುಂಚೆ ಏನಾದರೂ ದುರಂತವಾಗಿದ್ದರೆ, ಕರ್ಮಕಾಂಡಗಳಾಗಿದ್ದರೆ, ಇದನ್ನೆಲ್ಲ ಯಾರು ಹೇಳಿದರೋ ಅವರೇ ಅದರ ನಾಯಕರು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅವರ ಮೇಲೆಯೇ ವಿಚಾರಣೆ ಮಾಡಲಿ ಸ್ವಾಮಿ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿಚಾರಣೆ ಮಾಡುವ ಅವಶ್ಯಕತೆ ಕಂಡು ಬಂದರೆ ಮಾಡುತ್ತಾರೆ. ಅದನ್ನು ಯಾವ ರೀತಿ ನಡೆಸಬೇಕು ಎನ್ನುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಅದನ್ನು ತಿಳಿದುಕೊಂಡಿದ್ದಾರೆ ಇವತ್ತು ಕೆಲವು ಮಟ್ಟಿಗೆ ಭ್ರಷ್ಟಾಚಾರ, ಅಕ್ರಮಗಳು, ನಡೆದ್ದರೆ ಅವನ್ನೆಲ್ಲ ಪರಿಶೀಲಿಸಿ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ. ವಿರೋಧ ಪಕ್ಷದವರು ಸರ್ಕಾರಿ ನೌಕರರು ಕೆಲಸ ಮಾಡದಂತೆ ಮಾಡುತ್ತಿದ್ದಾರೆ, ರೈತರು ತೆರಿಗೆಗಳನ್ನು ಕೊಡದಂತೆ ಮಾಡುತ್ತಿದ್ದಾರೆ......

Sri K. H. RANGANATH (Mudigere--S. C.).—I rise to a point of order. The Hon'ble Member's allegation is that we have been preventing the officials from working. May I know to which Hon'ble Member he refers to? If that is true, he should name that particular member. It is a serious allegation. Let that member name who has prevented the officials from doing their legitimate work.

Mr. SPEAKER.—Now a point of order has been raised that an allegation or a suggestion or a criticism is made by one of the participants in the debate by refering to some members, whose identity is not disclosed. I do not think it amounts to a point of order, particularly when it is remembered that the member raising the point has not participated in the debate. He can take advantage of it while participating and put it as an argument. Therefore, I fail to see how it amounts to a point of order.

Sri K. H. RANGANATH.—The member has made an allegation not only against newspapers. but against the Opposition.........

Mr. SPEAKER.—Now it is a very delicate ground between two important institutions. One is the Legislature with sovereignty and independence to speak freely, fearlessly with absolute immunity, and the other is the Press an important factor and an organ in public life which will have certain rights within limits, perhaps to criticise. Should we rake up such controversial questions here. No member should refer to that aspect till I give my ruling.

Sri K. H. RANGANATH.—The allegations.........

Mr. SPEAKER.—Is the Hon'ble Member finding fault with the Chair? Let not the member refer to this aspect till I give my ruling. By referring to it, he is making matters worse.

Sri K. H. RANGANATH.—If the Hon'ble Member is able to inform this august House, who is the member who is preventing the Government officials from doing their duties, it is but right, he should name that member. Because, when he means the Opposition, I am also included in the Oppoistion.

Mr. SPEAKER.—Order, Order, With regard to newspapers, I have reserved my ruling and the matter rests unless the Hon'ble Member raises a fresh point of order.

Sri K. H. RANGANATH.—I am not touching about that aspect. The member was making allegations against us, specifically against one of the ninety. We are ninety in the opposition, and he said that one of us has been preventing the Government servants from doing their duties.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಹತಗಲ ಕ್ಷೇತ್ರದ ಸದಸ್ಯರಾದ ತರಣ ಪೋಗಿ ಅವರು ಹೊಸದಾಗಿ ಕಾಂಗ್ರೆಸ್ ಪಕ್ಷ ಉಳಿಸುವುದಕ್ಕೆ ಮತ್ತು ಶ್ರೀಮಾನ್......

Mr. SPEAKER.—Order, Order......

ಶ್ರೀ ಎಸ್. ಗೋಪಾಲ ಗೌಡ.—ನಿಜಲಿಂಗಪ್ಪನವರ ಪಲ್ಲಕ್ಕಿಯನ್ನು ಹೊರುವುದಕ್ಕೆ ಬಂದಿದ್ದಾರೆ; ಉತ್ಸಾಹಶಾಲಿಗಳಾಗಿದ್ದಾರೆ, ಅವರು ಬಹಳ ತಡವಾಗಿ ಬಂದಿದ್ದಾರೆ.

Mr. SPEAKER.—Does the House want to have a Tea break?

Sri H. SIDDAVEERAPPA.—Let the Hon'ble Member complete his speech. Only the second bell has been rung. The third Bell is to be rung.

Mr. SPEAKER.—The Hon'ble member may continue after the recess. The House now will rise to meet after half-an-hour.

The House adjourned for Recess at Ten of the Clock and re-assembled at Thirty Minutes past Ten of the Clock.

[MR. SPEAKER in the Chair]

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸನ್ಮಾನ್ಯ ಸಭಾಪತಿಗಳವರೇ, ಇದುವರೆಗೆ ನಾನು ಮಾತನಾಡಿದ ಬಗ್ಗೆ ವಿರೋಧ ಪಕ್ಷದವರು ನನ್ನ ಬಗ್ಗೆ ತಪ್ಪು ಅಭಿಪ್ರಾಯ ಬರುವ ಹಾಗೆ ಟೀಕೆ ಮಾಡಿದರು. ನಾನು ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ. ಪತ್ರಿಕೆಗಳ ಬಗ್ಗೆ ನನ್ನದು ಯಾವ ಆರೋಪವೂ ಇಲ್ಲ. ಪತ್ರಿಕೆಗಳವರು ಸಾಧುವಾಗಿ ನಿಷ್ಪಕ್ಷಪಾತವಾಗಿ ವರದಿ ಮಾಡುತ್ತಾರೆ ಎಂದು ನನ್ನ ಅಭಿಪ್ರಾಯ. ಅವರ ಬಗ್ಗೆ ನನ್ನದು ಯಾವ ಆರೋಪ ಇಲ್ಲ. ಆದರೆ ಶ್ರೀಮಾನ್ ಎಚ್. ಎಂ. ಚೆನ್ನಬಸಪ್ಪನವರು ದೊಡ್ಡವರು ಅನುಭವಿಕರು ಆಗಿರುವುದರಿಂದ ಅವರು ಹೇಳಿದ್ದಕ್ಕೆ ಸಿಕ್ಕವಷ್ಟು ಪಬ್ಲಿಸಿಟಿ ನನಗೆ ಸಿಕ್ಕುವುದಿಲ್ಲ. ಯಾಕಂದರೆ ನಾನು ಹೊಸಬನು. ಶ್ರೀಮಾನ್ ಚೆನ್ನಬಸಪ್ಪನವರು ದೊಡ್ಡವರು ಆಗಿರುವುದರಿಂದ ಅವರಿಗೆ ಹೆಚ್ಚು ಪಬ್ಲಿಸಿಟಿ ಸಿಕ್ಕುತ್ತದೆ.

Mr. SPEAKER.—Yesterday two Hon'ble members wanted to finish and go away. I will try to give opportunity to every member. The Whips should co-operate with me.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಆಗಲೇ ಹೇಳಿದ್ದು ಇಷ್ಟೇ. ಶ್ರೀಮಾನ್ ಚೆನ್ನಬಸಪ್ಪನವರು ದೊಡ್ಡವರು ಅನುಭವಿಗಳು ಆಗಿರುವುದರಿಂದ ಅವರು ಮಾತನಾಡಿದ್ದಕ್ಕೆ ಪೇಪರುಗಳಲ್ಲಿ ಹೆಚ್ಚಾಗಿ ಪಬ್ಲಿಸಿಟಿ ಸಿಕ್ಕುತ್ತದೆ ಎಂದು. ಅವರು ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಂಡು ಹೇಳಿರುವುದರಲ್ಲಿ ಭ್ರಷ್ಟಾಚಾರದ ವಿಚಾರ ಹೇಳಿರುವುದರಲ್ಲಿ ಏನಾದರೂ ಸತ್ಯಾಂಶ ಇದೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಯಾಕೆಂದರೆ, ಅವರು ಅದನ್ನು ರುಜುವಾತು ಮಾಡಿಲ್ಲ. ಒಂದು ವೇಳೆ ಏನಾದರೂ ಅಕ್ರಮ ಅನ್ಯಾಯ ನಡೆದಿದ್ದರೆ ಅದಕ್ಕಾಗಿ ಹೈಕೋರ್ಟು ಇದೆ, ಅಲ್ಲಿ ಅದನ್ನು ತೀರ್ಮಾನ ಮಾಡಬಹುದು. ಆದರೆ ಇಲ್ಲಿ ಇದು ನ್ಯಾಯದ ಕಟ್ಟೆ ಅಲ್ಲ. ನ್ಯಾಯ ಪಡೆಯುವುದಕ್ಕೆ ಬೇರೆ ಮಾರ್ಗ ಇದೆ. ಇಲ್ಲಿ ಗದ್ದಲ ಮಾಡಿ ಗಲಾಟೆ ಮಾಡಿ ಸತ್ಯಾಂಶವನ್ನು ಅಂಕಿ ಅಂಶಗಳಿಂದ ರುಜುವಾತು ಮಾಡಿಲ್ಲ. ಅಂಕಿಅಂಶಗಳಿದ್ದರೆ ಅದಕ್ಕೆ ಬೇರೆ ಮಾರ್ಗ ತೆಗೆದುಕೊಳ್ಳಬೇಕು.

ಇನ್ನು ಕೊನೆಯದಾಗಿ ಸರಕಾರಕ್ಕೆ ಒಂದೇ ಒಂದು ಸೂಚನೆ ಮಾಡುತ್ತೇನೆ. ಪಂಪ್ ಸೆಟ್ ವಿಚಾರದಲ್ಲಿ ರೈತರಿಗೆ ತೊಂದರೆಯಾಗಿದೆ. ಪಂಪ್ ಸೆಟ್ಸ್ ದೊರೆಯದೆ ತೊಂದರೆಯಾಗಿದೆ, ಇದಲ್ಲದೆ. ಒಂದು ವೇಳೆ ದೊರೆತಿದ್ದರೂ ಕೂಡ ಅದಕ್ಕೆ ಬೇಕಾಗುವ ಎಂಜಿನ್ನು ರೂಮ್ ಫೈಯರಿಂಗೆ ಸೌಲಭ್ಯಗಳಿಲ್ಲದೇ ತೊಂದರೆಯಾಗಿದೆ. ಇದನ್ನು ಕೂಡಲೇ ಬಗೆಹರಿಸುವುದಕ್ಕೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಕೂಡಲೇ ಪಂಪ್ ಸೆಟ್ಸ್ ಇನ್‌ಸ್ಟಾಲ್ ಮಾಡಲು ಸಹಾಯಕವಾಗುವಂತೆ ಅದಕ್ಕೆ ಅಗತ್ಯವಾಗಿ ಬೇಕಾಗುವ ಸಾಮಾನುಗಳನ್ನು ಒದಗಿಸಬೇಕು ಎಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

Sri M. S. KRISHNAN (Malleswaram).—I would like to know what has happened to the point of order raised by Mr. Ranganath.

Mr. SPEAKER.—The Hon'ble Member will kindly come to my chambers and meet me. A considered ruling will be given about the the allegations against the opposition member.

Sri K. H. RANGANATH.—He is making charges against all the members of the opposition as a whole. He says that the opposition members are inducing the Government Servants not to do their legitimate work. This is a serious allegation and also it is an offence. He is making a personal charge against members.

Mr. SPEAKER.—Making allegations against a member or against all the members make no difference.

Sri K. H. RANGANATH.—He has not named any member. He says the opposition members. Now I am not asking him to name the member, as he has already made allegations agaiust all of us.

SRI G. DUGGAPPA (Bharmasagara).—Any Hon'ble member making any speech on the floor of the House is held responsible for the truth or otherwise or statement made on the floor of the House. He must substantiate the statement made in this House. He has made a serious allegation that all the members of the opposition are preventing the Government servants from doing their legitimate work. I request the Chair to look into the proceedings of the House about this matter. He must now substantiate his statement with facts and figures.

MR. SPEAKER.—It is a serious point. What has been spoken has been recorded. This necessarily entails delay in giving a ruling. I request both the members Sri Ranganath and Duggappa to look into the matter very carefully so that the point is set at rest.

† SRI S. R. BOMAI (Kundagol).—Mr. Speaker, Sir, the Congress Government and their party may not boast of themselves as the champions of the common man, particularly, of the agriculturist. Sir, there is no mention in the Governor's Address of the definite progressive steps they are going to take so far as agriculture is concerned. The Planning Commission which is the brain trust of the Congress Government has realised its mistake in not giving first priority to agriculture and has indicated its intention to give first priority in the Fourth Plan. But this Government has utterly failed to indicate any policy so far as agriculture is concerned. Sir, the Land Reforms Act which has been passed after ten years of integration has failed to abolish the relationship of landlord and tenant. The Land Reforms Act has taken away the rights given to the tenants under the Bombay Tenancy Act. I may mention that the provisions of this Act is creating much more complications and litigations. It is a source of continuous litigation. The tenants and the land lords will have to wander to courts of law and the tenant will have to spend most of his money and energy in this and ultimately lose the land. Even after one year and six months, the Government have failed to frame the Rules and set up the necessary Tribunal and Bodies under the Act. I do not know how many years this Government is going to take to appoint the Tribunal. Perhaps, by the time they are going to appoint the necessary Tribunal, they may be out of power.

Sir, the most important point that has been urged by many experts and economists is that agriculture is to be nationalised and modernised; nothing has been indicated in that direction. I may not be worng if I state that most of the agriculture labour which from 75 per cent of the population of our country and our State is unemployed or under-employed or wasted. There is nothing to indicate what the Government is going to do with the 40 per cent of the landless people staying in the villages. They have not said anything to provide the minimum wages to agriculturist labour so far. Therefore, I urge the Chief Minister who has taken this most important portfolio of agriculture to take necessary steps to end the relationship of landlord and tenant and abolish the absentee landlordism and take steps to supply improved seeds, fertilizer

(SRI S. R. BOMAI)

etc., to each agriculturist irrespective of his capacity to pay in advance. May I also urge that immediate steps be taken to see that the facilities mentioned in the Government orders and Circulars reach the agriculturists directly ?

Then, Sir, I come to industries. It is a very strange thing. I say there is no Industries Department that is existing in this State. The office of the Director of Industries is just a post-office tossing up papers this side or that. Sir, a number of licences were issued at the beginning of the Third Plan. How many licences were issued and how many licencees have started industries, I would like to know. Licences were issued to persons who had no capacity or potential to start industries and licences were issued on political grounds. So far as textile industry is concerned, a number of licences were got in 1962 in the co-operative sector as well as private sector. Not a single textile mill has come into existence. I want to know what steps are going to be taken to cancel those licences. Sir, a group of friends including myself in Hobli applied for a textile licence. The Chief Minister was good enough to recommend to the Central Government and the Industries Department. May I mention that the then Industries Minister who is no more and the Director of Industries turned down the recommendation of the Chief Minister ? How is this Government running ? The Chief Minister recommends a case for the issue of a licence and the Director of Industries turns it down and the licence which he recommended to our group was taken up by the State Development Corporation three years ago. I am sorry to say that not a step has been taken by that Corporation to start the industry. Is this the way they are encouraging industries in the State ? They have utterly failed in this regard. I request the Chief Minister who is now holding this important portfolio to see that industries are properly developed.

Sir, in other States, I am given to understand, when an application is there, within three months the concerned authority makes the enquiry and finds out whether the person who has applied has got the potential and whether he has got the financial resources and whether it is advisable to start that industry in that area. If all these factors are satisfied, financial help is given. If it is not, a negative reply is given. But, in our State when application is made, for years there would be no reply at all. This is the state of affairs in this State. Therefore, I am obliged to say that the Industries Department and its Director are not functioning at all.

Then, Sir, coming to Education, I must congratulate the Government for providing free education up to Secondary standard. But the standard of education is going low and low. There are a number of reasons for this. The most important is the notorious text-book muddle. As all are aware, the basic subjects like mathematics, chemistry, history, geography are taught in S. S. L .C. There uniform syllabis so far as

S. S. L. C. in concerned. We expect, in the interest of the State and the emotional integration of the State, uniform text-books are prescribed But very strange modus operandi is adopted. For the same standard, different books written by different authors and published by different persons are recommended in each distrist and in some places different sets of books are prescribed in the same district. My daughter in Hubli reads one chemistry text book and another daughter in an other district reads quite a different book on the same subject. Similarly books for history and geography. How is this going to help the people, particularly, the Kannada people ? I say, there is something fishy in this. Why should there be so many authors, publishers and books ? This must be enquired into. In spite of representations in this behalf, nothing has been done. There is something wrong with the Education Department. Therefore I urge that necessary steps should be taken to enquire into the matter and in future proper standard text-books prescribed. Because of this muddle, there are Different standards of teaching and different standards of examination. Therefore, we see the mass massacre of students in the S. S. L. C. examination.

Then, Sir, the question of local authorities is very interesting. The Congress Government and its party men have misused their authority and power. They have superceded a number of local authorities. The Hubli Municpal Borough and Dharwar Municipal Borough were superceded and in post haste a Corporation was created by the Jatti Ministry a faw days before he laid down his office and his hechmen were nominated to the Corporation. Then, came the Bharata Raj of Sri S. R Kanthi as the Chief Minister. The term of these nominated members was extended from time to time just to keep their party men in power. No elections are held because men on the other side are very confident of their success and the nominees of the Government will never succeed. Therefore, they are postponing the elections.

The question of inter-State seniority list is there. The Government has found an intelligent and easy method to solve this problem and that is, to leave the matter as it is, so as to see that the number of officers who came from integrated areas die or retire. The Government will not solve the problem until all of them die or retire. That is the modus operandi adopted by the Government.

I was very much glad when I heard our young friend Sri M. Y. Ghorpade spoke on the point of co-operation and developments in his constituency. I congratulate on what he he has done in his constituency. But what has happened in other constituencies of the State ? He has appealed to the opposition to participate particularly in the developmental activities. Has the Government or the partymen created a psychological atmosphere in the State so that the youths could participate in the gigantic task of building the State ? I feel they have utterly failed and discouraged the youths. If we see the council of Ministers in the ministry, it is an indication that the youth have no place in the governance of the country.

Mr. SPEAKER.—Old men are not bad.

Sri B. D. JATTI.—When the people have elected them what to do

Mr. SPEAKER.—The objection is for choosing the people for the cabinet.

Sri S. R. BOMMAI.—I said what young people are not given proper place in the governance of the country.

Sri B. D. JATTI,—You can come to our side. We will consider your case.

(*Laughter*)

Mr. SPEAKER.—Order, order.

All invitations to be extended outside the House and not here.

Sri S. R. BOMMAI.—I will come to nationalisation of transport. So far as nationalisation of transport is concerned, the speed of the Government is dead slow. In Bombay State it could take place in an year and erstwhile Hyderabad State it could take place in an year. Why not here ? I doubt the Cabinet and also the particular minister in charge of the portfolio have vested interest in the old Mysore. He wants to help his own men and therefore he has been hesitant to nationalise bus routes.

Lastly, I would say that the Chief Minister and his team are working without any co-ordination. That has been our experience. Though they speak of emotional integration and interests of the State, there has been discrimination in different areas. The Chief Minister and the Congress party have utterly failed in providing minimum necessities of food, clothing and education to the people. They will face a trial in the people's court, if they do not discharge their duties properly.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಮಾಡಿದಂತಹ ಭಾಷಣದ ಮೇಲೆ ಸಭೆಯ ಮುಂದೆ ಇರತಕ್ಕ ವಂದನಾರ್ಪಣಾ ನಿರ್ಣಯವನ್ನು ಅನುಮೋದಿಸಿ ನಾನು ಮಾತನಾಡಲು ಇಚ್ಛಿಸುತ್ತೇನೆ. ಈವರೆಗೂ ಕಾಂಗ್ರೆಸ್ ಸದಸ್ಯರು ಆಗಲಿ ಮತ್ತು ವಿರೋಧ ಪಕ್ಷದ ಸದಸ್ಯರಾಗಲಿ ಸಾಕಾದಷ್ಟು ಮಾತನಾಡಿದ್ದಾರೆ. ನಾನು ಈ ಮಾನ್ಯ ಸಭೆಯಲ್ಲಿ ಹೇಳುವುದಿಷ್ಟು; ಈ ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವ ಬಂದ ನಂತರ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ ನಂತರ ಈ ಇಪ್ಪತ್ತು ವರ್ಷಗಳ ಕಾಲ ಯಾವ ಹೆದರಿಕೆ, ಬೆದರಿಕೆ ಇಲ್ಲದೆ ಬೇಕಾದಷ್ಟು ಟೀಕೆ ಟಿಪ್ಪಣಿಗಳನ್ನು ಎದುರಿಸಿ ಎಳ್ಳಷ್ಟೂ ನಾಚುವಂತಹ ಕೆಲಸವನ್ನು ಈ ಸರ್ಕಾರ ಮಾಡಿಲ್ಲ ಎಂದು ಧೈರ್ಯವಾಗಿ ಇಲ್ಲಿ ಹೇಳಬಹುದು. ರಾಜ್ಯಪಾಲರು ಸವಿಸ್ತಾರವಾಗಿ ಎಲ್ಲ ವಿಷಯಗಳ ಬಗ್ಗೆ ಇಲ್ಲಿ ಸ್ಪಷ್ಟೀಕರಣ ಮಾಡಿಲ್ಲ ಎಂದು ಹೇಳಿದರು. ರಾಜ್ಯಪಾಲರು ಸರ್ಕಾರದ ಸೆಕ್ರೆಟರಿಗಳು ಅಲ್ಲ. ಅವರು ಕಾಂಗ್ರೆಸ್ ಸರ್ಕಾರ ಮತ್ತು ಈಗ ರಾಜ್ಯದ ಕಾರಭಾರವನ್ನು ಮಾಡುವಂತಹ ಸರ್ಕಾರದ ಧೋರಣೆಗಳನ್ನು ಮಾತ್ರ ನಿರೂಪಣೆ ಮಾಡುವಂತಹ ಒಬ್ಬ ವ್ಯಕ್ತಿ. ಅದಕ್ಕನುಗುಣವಾಗಿ ಅವರು ಭಾಷಣ ಮಾಡಿದ್ದಾರೆ. ವಿರೋಧ ಪಕ್ಷದ ಸದಸ್ಯರು ಅದನ್ನು ಸರ್ಕಾರದ ರಿಪೋರ್ಟರ್ ಎಂದು ಭಾವಿಸಿದ್ದಾರೆ. ಅದಕ್ಕಾಗಿ ತುಂಬಾ ವಿಷಾದಪಡುತ್ತೇನೆ.

ಇನ್ನು ಚಿಕ್ಕ ನೀರಾವರಿ ಯೋಜನೆಗಳು ಅಥವಾ ಮಧ್ಯಮ ನೀರಾವರಿ ಯೋಜನೆಗಳು ಅಥವಾ ದೊಡ್ಡ ನೀರಾವರಿ ಯೋಜನೆಗಳು ಯಾವ ಕ್ಷೇತ್ರದಲ್ಲೇ ಆಗಲಿ ಸರ್ಕಾರದವರು ಕೆಲಸ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ದೊಡ್ಡ ನೀರಾವರಿ ಬಗ್ಗೆ ಹೇಳಬೇಕೆಂದರೆ, ಅಪ್ಪರ್ ಕೃಷ್ಣಾ ಮಾಲಪ್ರಭಾ ಯೋಜನೆಗಳನ್ನು ತೆಗೆದುಕೊಂಡರೆ, ಮಲಪ್ರಭಾ ಯೋಜನೆಯ ಕಾರ್ಯಕ್ರಮ ಪ್ರಾರಂಭವಾಗಿ ಈಗ ಐದಾರು ವರ್ಷಗಳಾದರೂ ಕೂಡ ಅದು ಪ್ರಗತಿಪರವಾಗಿ ನಡೆದಿದೆ, ಆದರೆ ರೊಕ್ಕದ ಅಭಾವದಿಂದ ಎಷ್ಟು ಪ್ರಗತಿಯಾಗಬೇಕೋ ಅಷ್ಟು ಪ್ರಗತಿಯಾಗಿಲ್ಲ ಎಂಬುದನ್ನು

ಮಾನ್ಯ ಸದಸ್ಯರು ಇಲ್ಲಿ ಗಮನಿಸಿ ನೋಡಿದರೆ ಗೊತ್ತಾಗುತ್ತದೆ. ಮಲಪ್ರಭಾ ಯೋಜನೆ ಸಂಪೂರ್ಣವಾಗಿ ಮುಗಿದಾಗ ಧಾರವಾಡ ಜಿಲ್ಲೆಯಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಬರಗಾಲ ಪೀಡಿತ ಪ್ರದೇಶಗಳು ನೀರಾವರಿಯನ್ನು ಹೊಂದಿ ಒಕ್ಕಲುತನ ಕ್ಷೇತ್ರದಲ್ಲಿ ಸಾಕಾದಷ್ಟು ಅಭಿವೃದ್ಧಿಯನ್ನು ಹೊಂದಿರಬಹುದೆಂದು ಧಾರವಾಡ ಜಿಲ್ಲೆಯವರಾದ ನಮಗೆ ಗೊತ್ತಾಗುತ್ತದೆ. ಇನ್ನು ಕೃಷ್ಣಾ ಮತ್ತು ಗೋದಾವರಿ ನದಿಗಳ ಬಗ್ಗೆ ಶ್ರೀಮಾನ್ ಚನ್ನಬಸಪ್ಪನವರು ಮತ್ತು ಇತರ ಹಿರಿಯ ಸದಸ್ಯರು ಮಾತನಾಡಿದರು. ಆದರೆ ನಾನು ಹೇಳುವುದಿಷ್ಟೆ: ಶ್ರೀಮಾನ್ ಚನ್ನಬಸಪ್ಪನವರು ಪಿ. ಡಬ್ಲ್ಯು. ಡಿ. ಖಾತೆಯ ಮಂತ್ರಿಗಳಾಗಿದ್ದಾಗ ಕೃಷ್ಣಾ ಗೋದಾವರಿ ನೀರನ್ನು ಸಾವಿರ ಸಿ. ಎಫ್. ಟಿ. ಆಗಲಿ 600 ಸಿ. ಎಫ್. ಟಿ. ಆಗಲಿ ಅಥವಾ ಎಷ್ಟು ದೊರಕಬೇಕಾಗಿತ್ತು ಎಂದು ವಾದ ಮಾಡಿದರೋ ಅಷ್ಟನ್ನು ದೊರಕಿಸಿಕೊಳ್ಳಲು ಆಗ ಪ್ರಯತ್ನ ಮಾಡಿ ಅಥವಾ ಕೋರ್ಟಿಗೆ ಹೋಗಿ ದೊರಕಿಸಬಹುದಾಗಿತ್ತು. ಹಿಂದೆ ತಾವು ಇದ್ದಾಗ ಅದುವನ್ನು ಮನಸ್ಸಿನಲ್ಲಿಟ್ಟುಕೊಂಡು ಈಗ ವಿರೋಧ ಪಕ್ಷದಲ್ಲಿದ್ದುಕೊಂಡು ಹಾಗೆ ಮಾಡಬೇಕಾಗಿತ್ತು ಎಂದು ಹೇಳುತ್ತಾ ಹೋದರೆ ಅದು ಅವರ ತಪ್ಪೇ ವಿನಾ ಸರ್ಕಾರದ ತಪ್ಪು ಅಥವಾ ಮತ್ತಾರದಾದರೂ ತಪ್ಪಲ್ಲ.

SRI H. M. CHANNABASAPPA (Periyapatna).—A notice was given on 27th January 1962 when Sri Jatti was functioning as Chief Minister of the Government. Therefore, the hon'ble member will stand corrected. It is Mr. Jatti's Government that gave notice to the Government of India and requested them to appoint a tribunal. Subsequently Sri Nijalingappa's government has given a go-by to it.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಫೈಲ್‌ನಲ್ಲಿ ನೋಟೀಸ್ ಕೊಡುವುದಾಗಲಿ ಯಾವುದೂ ಇಲ್ಲ, ನೋಟೀಸ್ ಕೊಡಬೇಕಾಗಿದ್ದುದು ಅವರ ಕರ್ತವ್ಯವಾಗಿತ್ತು ಅದನ್ನು ಮಾಡಿಲ್ಲ ಎಂದು ಹೇಳಿವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕರ್ತವ್ಯ ಮಾಡಿದ್ದನ್ನು ಮುಂದುವರಿಸಿಕೊಂಡು ಹೋಗದೆ ದೇಶಕ್ಕೆ ಅನಾನುಕೂಲವಾಯಿತು ಎಂದು ಹೇಳಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನೀವು ಮಾಡಿದ್ದು ಯಾವ ಫೈಲ್‌ನಲ್ಲೂ ಇಲ್ಲವಲ್ಲಾ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣಾ ಗೋದಾವರಿ ವಾಟರ್, ಮೆಮೊರ್ಯಾಂಡಂ ಅಂತ ಹೇಳಿ ದೊಡ್ಡ ಪುಸ್ತಕವನ್ನೇ ಪ್ರಿಂಟ್ ಮಾಡಿಸಲಾಗಿತ್ತು, ಅದನ್ನು ನೋಡಿದರೆ ನಾನು ಏನು ಮಾಡಿದ್ದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾನು ಸಂತೋಷಪಡುವುದು ಇಷ್ಟೆ, ನಮ್ಮ ಹಿರಿಯ ಸದಸ್ಯರಾದ, ಎಚ್. ಸಿದ್ಧವೀರಪ್ಪನವರು, ಎಚ್. ಎಂ. ಚನ್ನಬಸಪ್ಪನವರು ಮತ್ತು ಕೆ. ಎಚ್. ಪಾಟೀಲ್‌ರವರು ನಮ್ಮ ಈ ಮಾನ್ಯ ಸಭೆಯಲ್ಲಿ ಉತ್ತಮವಾದ ಅಂಕಿ ಅಂಶಗಳನ್ನು ಒದಗಿಸಿದ್ದಾರೆ, ಅದಕ್ಕೆ ಆನಂದ, ಹೆಮ್ಮೆಪಡತ್ತೇನೆ. ಏಕೆಂದರೆ ಆ ಶಕ್ತಿಯನ್ನು ಅವರಿಗೆ ಕೊಟ್ಟದ್ದು ನಮ್ಮ ಕಾಂಗ್ರೆಸ್ ಸಂಸ್ಥೆ, ನಾವು ಎಂದು ನಾನು ಹೆಮ್ಮೆಪಡುತ್ತೇನೆ.

11-00 A.M.

ಆದುದರಿಂದಲೇ ಅವರು ಇಷ್ಟು ಉತ್ತಮ ರೀತಿಯಲ್ಲಿ ಮಾತನಾಡಿದ್ದಾರೆ; ಅದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು. ಆದರೆ ನಾನು ಇಷ್ಟು ಹೇಳುತ್ತೇನೆ, ಯಾರು ಅವರಂತೆ ಅಷ್ಟು ಚೆನ್ನಾಗಿ ಮಾತನಾಡಬೇಕೆಂದು ಆಶೆಮಾಡುತ್ತಾರೋ ಅಂಥವರು ನಮ್ಮ ಪಕ್ಷದಲ್ಲಿ ಕೆಲವು ಕಾಲವಿದ್ದು ಅನಂತರ ಬೇರೆ ಪಕ್ಷಕ್ಕೆ ಸೇರಿದರೆ ಅದು ಚೆನ್ನಾಗಿರುತ್ತೆಂದು ಹೇಳಬಯಸುತ್ತೇನೆ. ಆದುದರಿಂದ ಹೊಸಬರಾಗಿ ಈ ಸಭೆಗೆ ಬರತಕ್ಕವರು ಮೊದಲು ನಮ್ಮಲ್ಲಿ ಕೆಲವು ಕಾಲ ಉಳಿದು ಅನಂತರ ಅತ್ತಕಡೆ ಹೋಗಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಕೆಲವು ಹೊಸದಾಗಿ ಚುನಾವಣೆಯಾಗಿ ಬಂದಿರತಕ್ಕ ಮಾನ್ಯ ಸದಸ್ಯರುಗಳು ಅವರು ಆ ವಿರೋಧಪಕ್ಷಕ್ಕೆ ಸೇರಿದವರಾಗಿದ್ದೇವೆಂಬ ಒಂದೇ ಒಂದು ಕಾರಣದ ಮೇಲೆ ಅವರು ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ, ಅದಕ್ಕಾಗಿ ನಾನು ತುಂಬಾ ವ್ಯಥೆಪಡಬೇಕಾಗಿದೆ. ಇನ್ನು ಈ ಹಿಂದೆ ಮಾತನಾಡಿದ ಒಬ್ಬ ಮಾನ್ಯ ಸದಸ್ಯರೇನಿದ್ದಾರೆ, ಅವರು ಒಬ್ಬ ಒಳ್ಳೆಯ ವಕೀಲರು. ಒಳ್ಳೆಯ ಚಳುವಳಿಗಾರರೂ ಹೌದು. ಅವರೂ ನಾನೂ ಬಹಳ ಸ್ನೇಹಿತರು. ಆದರೆ ಅವರು ಹುಬ್ಬಳ್ಳಿ-ಧಾರ್‍ವಾಡದ ಕಾರ್ಪೊರೇಷನ್ನನ್ನು ಸೂಪರ್ ಸೀಡ್ ಮಾಡಿದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದರ ಹಿನ್ನಲೆಯನ್ನು ಹೇಳಿದರೆ ಅವರು ಹೇಳಿದ್ದೆಲ್ಲಾ ಸತ್ಯಕ್ಕೆ ಬಹಳ ದೂರವಾದ್ದು ಎಂಬುದು ಗೊತ್ತಾಗುವುದು. ಅಲ್ಲಿ ಕೆಲವು ಅಕ್ರಮಗಳು ನಡೆದವು; ಅದಕ್ಕಾಗಿ ಸರ್ಕಾರದವರು ಅದನ್ನು ಒಂದು ಸುವ್ಯವಸ್ಥೆಯಿಂದ ಮುಂದುವರಿಸಿಕೊಂಡು ಹೋಗಲು

(ಶ್ರೀ ಎಚ್. ವಿ. ಅಗ್ನಿಹೋತ್ರಿ)

ಸೂಪರ್ ಸೀಡ್ ಮಾಡಬೇಕಾಯಿತು. ಈ ಹಿಂದೆ ಶ್ರೀಮಾನ್ ಜತ್ತಿಯವರಿದ್ದ ಕಾಲಕ್ಕೆ ಹುಬ್ಬಳ್ಳಿಗೂ ಧಾರ್ವಾಡಕ್ಕೂ ಕೇವಲ ಎಂಟು-ಹತ್ತು ಮೈಲುಗಳ ಅಂತರವಿದ್ದುದರಿಂದ ಮುಂದೆ ಇವೆರಡೂ ಒಂದೇ ಆಗುತ್ತವೆಂಬುದನ್ನು ಮನಗಂಡು ಅಲ್ಲಿ ಒಂದು ಕಾರ್ಪೊರೇಷನ್ನನ್ನು ಮಾಡಿದರು. ಹಾಗೆ ಅದನ್ನು ಪ್ರಾರಂಭ ಮಾಡುವ ಕಾಲಕ್ಕೆ ಕೆಲವು ಜನರನ್ನು ಅದಕ್ಕೆ ನಾಮಕರಣ ಮಾಡಿದರು. ಅವರು ಬರಿ ಎಲ್ಲಾ ಕಾಂಗ್ರೆಸ್ ಮಂದಿಯನ್ನೇ ಅದಕ್ಕೆ ಚುನಾಯಿಸಿದರು ಎಂದು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು. ಆ ದಿವಸ ಸರ್ಕಾರದವರು ರಚನೆ ಮಾಡಿದ ಸಮಿತಿಯಲ್ಲಿ ಖಾಸಗೀ ರಂಗದಲ್ಲಿ ನಾನಾ ಉದ್ಯಮಗಳಲ್ಲಿ ಉತ್ತಮಸೇವೆ ಸಲ್ಲಿಸಿರತಕ್ಕ ಅನೇಕ ಕಾಂಗ್ರೆಸ್ಸೇತರ ಜನರನ್ನೂ ಅದಕ್ಕೆ ಆರಿಸಿದ್ದಾರೆ. ಅದರಲ್ಲಿ ಒಬ್ಬಿಬ್ಬರು ಕಾಂಗ್ರೆಸ್ಸಿನವರು ಹೆಚ್ಚಿಗೆ ಇದ್ದರೂ ಇರಬಹುದು. ಆದರೆ ಆ ನನ್ನ ಸ್ನೇಹಿತರು ಇತ್ತೀಚೆಗೆ ಹೊಸದಾಗಿ ಚುನಾಯಿತರಾಗಿ ಇಲ್ಲಿಗೆ ಬಂದಮೇಲೆ ಈಗ ಹಸರು ಚಷ್ಮ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದುದರಿಂದ ಅವರ ಕಣ್ಣಿಗೆ ಎಲ್ಲರೂ ಕಾಂಗ್ರೆಸ್ಸಿನವರ ಹಾಗೇ ಕಂಡಿರಬಹುದು. ಅವರು ಅದನ್ನು ಅಂದರೆ ಚಷ್ಮವನ್ನು ತೆಗೆದು ನೋಡಿದರೆ ಅವರು ಹೇಳಿರತಕ್ಕ ಮಾತುಗಳು ಸತ್ಯಕ್ಕೆ ದೂರವಾದವು ಎಂಬುದು ಅವರಿಗೆ ಗೊತ್ತಾಗುವುದು. ಅವರು ಇಂಥ ಸತ್ಯಕ್ಕೆ ದೂರವಾದ ಮಾತುಗಳನ್ನು ಒಂದೆರಡು ಸಾರ್ತಿ ಹೇಳಿದರೆ ಅದೇನೋ ನಿಂತರೂ ನಿಂತೀತು; ಹಾಗಲ್ಲದೆ ಅವರು ಯಾವಾಗಲೂ ಹೇಳಿದ್ದನ್ನೇ ಹೇಳುವುದಕ್ಕೆ ಹೊರಟರೆ ಅದು ನಿಲ್ಲಲಾರದು. ಹಿಂದೆ ಅಲ್ಲಿ ಚುನಾವಣೆಗಳನ್ನು ನಡೆಸಬೇಕಾಗಿ ಬಂದಾಗ ಅದರ ಬಗ್ಗೆ ಕಾಂಗ್ರೆಸ್ ಪಕ್ಷದವರು ತಮ್ಮ ಪ್ರೋಗ್ರಾಮನ್ನೂ ಕೂಡ ಸಿದ್ಧಗೊಳಿಸಿ, ಇನ್ನೇನು ಚುನಾವಣೆಗಳನ್ನು ನಡೆಸಬೇಕು ಅನ್ನುವಷ್ಟರಲ್ಲೇ ಪಾಕೀಸ್ತಾನದ ಗಡಿ ಸಮಸ್ಯೆ ಬೃಹದಾಕಾರವನ್ನು ತಾಳಿದ್ದರಿಂದ ಅದನ್ನು ನಿಲ್ಲಿಸಬೇಕಾಗಿ ಬಂತು. ಆಗ ಆ ಚುನಾವಣೆಗಳು ಆಗಲಿಲ್ಲ. ಆದರೆ ಈ ಎಲ್ಲಾ ವಿಚಾರಗಳನ್ನೂ ಆ ಮಾನ್ಯ ಸದಸ್ಯರು ಹೇಳದೆ ಅವರು ಸುಮ್ಮನೆ ಅಲ್ಲಿ ಸೂಪರ್ ಸೀಡ್ ಮಾಡಿದರು, ಚುನಾವಣೆಗಳನ್ನೇ ಮಾಡಲಿಲ್ಲ ಅಂದುಬಿಟ್ಟರು. ಅದುದರಿಂದ ಅವರು ಹೇಳಿದ್ದು ಸರಿಯಿಲ್ಲ. ಇನ್ನು ಶ್ರೀಮಾನ್ ಕೆ. ಎಚ್. ಪಾಟೀಲರೂ ಇಲ್ಲಿಗೆ ಬಂದಮೇಲೆ ಒಮ್ಮೆಲೇ ಅವರ ಧಾಟಿಯನ್ನು ಪ್ರಾರಂಭಮಾಡಿಬಿಟ್ಟಿದ್ದಾರೆ. ನಾನೂ ಅವರೂ ಒಟ್ಟಿಗೆ ಇಬ್ಬರೂ ಕಲೆತು ಕೆಲಸಮಾಡಿದ್ದೇವೆ. ಅವರು ಹೊರಗಡೆಯಲ್ಲಿದ್ದಾಗ ಹೇಗೆ ಕೆಲಸಮಾಡುತ್ತಿದ್ದರೋ ಹಾಗೇ ಒಳಗೂ ಏಕದಂ ಕೆಲಸಕ್ಕೆ ಷುರು ಮಾಡಿದ್ದಾರೆ. ಆದರೆ ಅಲ್ಲಿಗೂ ಇಲ್ಲಿಗೂ ಕೆಲಸಮಾಡುವುದರಲ್ಲಿ ಬಹಳ ಫರಕ್ ಅವೆ. ಇವರು ಆ ಗದಗ್ ಮುನಿಸಿಪಾಲಿಟಿಯನ್ನು ಅಕಾರಣವಾಗಿ ಸೂಪರ್‌ಸೀಡ್‌ಮಾಡಿದ್ದಾರೆಂದು ಹೇಳಿದರು. ಅಲ್ಲಿಯೂ ಸೂಪರ್ ಸೀಡಾಗಿರಬಹುದು. ಅದಕ್ಕೆ ಕಾರಣವೇನೆಂದರೆ, ಇಲ್ಲಿಯೂ ಸಹಾ ಆ ಹುಬ್ಬಳ್ಳಿ ಧಾರ್ವಾಡದಂತೆ ಕೆಲವು ಅಕ್ರಮಗಳು ನಡೆದಿರಬಹುದು; ಅದಕ್ಕಾಗಿ ಸೂಪರ್‌ಸೀಡ್ ಮಾಡಿರಬಹುದು. ಆ ಮುನಿಸಿಪ್ಯಾಲಿಟಿಯವರು ಸಾರ್ವಜನಿಕರಿಗೆ ತಮ್ಮ ಆಬ್ಲಿಗೇಷನ್ ಕರ್ತವ್ಯಗಳಲ್ಲಿ ಸೇರಿದ್ದಂಥ ಕೆಲವು ಸೌಲಭ್ಯಗಳನ್ನು ಅಂದರೆ ಕುಡಿಯುವ ನೀರು, ಶಿಕ್ಷಣ ಇತ್ಯಾದಿ ಕೆಲವು ಬಾಬುಗಳಲ್ಲಿ ಅವರು ತಪ್ಪುನಡೆ ನಡೆದಿರಬೇಕು, ಅದಕ್ಕಾಗಿ ಸೂಪರ್‌ಸೀಡ್ ಮಾಡಿರುತ್ತಾರೆ. ಇಲ್ಲಿ ಸರ್ಕಾರದವರು ಆಡಳಿತವನ್ನು ಸರಿಯಾಗಿ ನಡೆಸುತ್ತಿಲ್ಲ, ಅದನ್ನು ಸರಿಪಡಿಸುವುದಕ್ಕಾಗೇ ಬಂದಿರುವಂಥ ಜನ ನಾವು ಎಂದು ಹೇಳಿಕೊಳ್ಳತಕ್ಕ ಇವರು ಎಲ್ಲಿ ಆಡಳಿತ ಸರಿಯಾಗಿರುವುದಿಲ್ಲವೋ ಅಲ್ಲಿ ಆಡಳಿತವನ್ನು ಸುಧಾರಣೆ ಮಾಡತಕ್ಕ ದೃಷ್ಟಿಯಿಂದ ಕೆಲವು ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಿದ್ದು ಸರಿಯಿಲ್ಲ ಎಂದರೆ ವಿರೋಧಪಕ್ಷದವರ ರಾಜಕೀಯ ಯಾವ ತರಹ ಇದೆಯೋ ಅದು ನಮಗೆ ತಿಳಿಯದು. ಇನ್ನೂ ಒಂದು ಅಂಶವನ್ನು ಆಲೋಚನೆ ಮಾಡೋಣ ಹಾಗೆ ಒಂದು ಮುನಿಸಿಪ್ಯಾಲಿಟಿಯನ್ನು ಸೂಪರ್‌ಸೀಡ್‌ಮಾಡಿದರೆ ಸರ್ಕಾರದವರಿಗೆ ಅದರಿಂದ ಬರತಕ್ಕ ಲಾಭವೇನಾದರೂ ಇದೆಯೇ ಎಂದರೆ ಅದೂ ಇಲ್ಲ. ಹಾಗಿರುವಾಗ ಇವರೇಕೆ ವಿನಾಕಾರಣ ರದ್ದುಮಾಡುತ್ತಾರೆ ಎಂಬುದನ್ನು ಆಲೋಚನೆ ಮಾಡುವುದಾದರೂ ಬೇಡವೇ? ಗದಗ್ ಪಟ್ಟಣಕ್ಕೆ ಮಲಪ್ರಭಾ ನದಿಯಿಂದ ಕುಡಿಯುವ ನೀರನ್ನು ಒದಗಿಸಿದರೆ ಜನರ ಮೇಲೆ ಹೆಚ್ಚಿನ ಒಂದು ತೆರಿಗೆಯು ಹೊರೆ ಬೀಳುತ್ತದೆ ಆದ್ದರಿಂದ ಆ ಯೋಜನೆ ಅಷ್ಟು ಲಾಭದಾಯಕವಿದ್ದು ತುಂಗಭದ್ರಾ ನದಿಯಿಂದಾ ಪಂಪು ಮಾಡವುದು ಬಹಳ ಖರ್ಚಿನದೆಂದು ಮೊದಲನದನ್ನು ಕೈಬಿಟ್ಟು ಎರಡನೆಯದನ್ನು ಮಾಡಬೇಕೆಂದು ಹಟಹಿಡಿದರು. ಹೀಗಾಗಿ ಅಲ್ಲಿ ಒಂದು ಗೊಂದಲವೆದ್ದು ಅದನ್ನು ಸೂಪರ್‌ಸೀಡ್‌ಮಾಡಬೇಕಾಯಿತು. ಇವರು ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೀಗೆ ಒಂದು ಮಾತನ್ನಾಡಿದ್ದಾರೆ. ಇಲ್ಲಿಗೆ ಬರತಕ್ಕ ಸದಸ್ಯರುಗಳು ಸರಿಯಾದ ವಿಷಯಗಳನ್ನು ಅರಿಯದೆ ಏನೋ ಒಂದು ತಪ್ಪಾಗಿ ತಿಳಿದುದನ್ನು ಹೇಳುವುದರಿಂದ ದೇಶದಲ್ಲಿರತಕ್ಕ ಜನರಲ್ಲಿ ಆಡಳಿತ ಬಗ್ಗೆ ಒಂದು ತಪ್ಪು ಭಾವನೆ ಮೂಡುವುದಕ್ಕೆ ಅವಕಾಶವಾಗುವುದು. ಸದಸ್ಯರೇನೋ ಅವರ ಉದ್ದೇಶ ಸಾಧನೆಗಾಗಿ ಏನನ್ನೊ ಏನನ್ನಾಗಿಮಾಡಿ ಹೇಳಿಬಿಡುತ್ತಾರೆ, ಆದರೆ ಅದರಿಂದ ದೇಶದಲ್ಲಿ ಉಂಟಾಗತಕ್ಕ ದುಷ್ಪ

ರಿಣಾಮವೇನು ಎಂಬುದನ್ನು ಗಮನಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಈ ಮಾನ್ಯ ಸದಸ್ಯರು ತಮ್ಮದೇ ಆದ ಒಂದು ಪತ್ರಿಕೆಯನ್ನೂ ಸಹಾ ಹೊರಡಿಸುತ್ತಿದ್ದಾರೆ. ಇಲ್ಲಿ ಇವರು ಹೇಗೆ ಮಾತನಾಡುತ್ತಾರೋ ಹಾಗೆ ಇವರ ಪತ್ರಿಕೆಯಲ್ಲೂ ಇವರು ಪ್ರಕಟಣೆಗಳನ್ನು ಹೊರಡಿಸುತ್ತಿದ್ದಾರೆ. ಮೊನ್ನೆ ಚುನಾವಣೆಗಳು ನಡೆಯುವ ಮುನ್ನ ಇವರ ಪತ್ರಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರತಕ್ಕ ಅಗ್ನಿಹೋತ್ರಿಯವರಿಗೆ ಚುನಾವಣೆಯಲ್ಲಿ ಡೆಪಾಜಿಟ್ ಹೋಗುತ್ತದೆ ಎಂಬುದಾಗಿ ಪ್ರಕಟಣೆಯಾಗಿತ್ತು. ಆದರೆ ನನ್ನ ಪ್ರತಿಸ್ಪರ್ಧಿಗೆ ಡೆಪಾಜಿಟ್ ಹೋಗತಕ್ಕ ಸಂದರ್ಭವಿತ್ತು; ಕೆಲವೇ ಓಟುಗಳಲ್ಲಿ ಅದು ತಪ್ಪಿತು. ಹೀಗೇ ಇವರು ಮಾತನಾಡುತ್ತಾ ಮತ್ತೊಂದು ಕಡೆ ಇವರು ತಮ್ಮ ತಮ್ಮ ಜಾತಿಯವರು ಇದ್ದುದರಿಂದ ಅಲ್ಲಿ ಅದನ್ನು ಸೂಪರ್‌ಸೀಡ್‌ಮಾಡಲಿಲ್ಲ ಎಂಬುದಾಗಿ ಹೇಳಿದರು. ಸೂಪರ್‌ಸೀಡ್‌ಮಾಡತಕ್ಕ ಬಗ್ಗೆ ಇರತಕ್ಕ ಕಾನೂನಿನ ಬಾಬಯವಯ ಪರಿಜ್ಞಾನ ಅವರಿಗೆ ಅಷ್ಟಾಗಿಲ್ಲವೆಂದು ಕಂಡುಬರುತ್ತದೆ. ಗದುಗಿನಲ್ಲಿ ಕೊಟ್ಟಿದ್ದ ವಿದ್ಯುಚ್ಛಕ್ತಿಯ ಪ್ರೈವೇಟ್ ಕಂಪನಿಯ ಲೈಸೆನ್ಸಿನ ಅವಧಿಯು ಇನ್ನೂ ಪೂರೈಸಿರಲಿಲ್ಲ, ಆದುದರಿಂದ ಅದನ್ನು ಬದಲಾಯಿಸುವುದಕ್ಕಾಗಲಿಲ್ಲ. ಅವಧಿ ಮುಗಿದ ಮೇಲೆ ಅದನ್ನು ಬದಲಾವಣೆಮಾಡಬಹುದು. ಹೀಗೆ ಯಾವುದೊಂದನ್ನೂ ಸರಿಯಯಾಗಿ ತಾವು ತಿಳಿದುಕೊಳ್ಳದೆ ಏನೋ ಒಂದು ಹೇಳಬೇಕು, ಏನೋ ಒಂದುನ್ನು ಹೇಳಿದರೆ ಆಯಿತು ಅನ್ನುವ ವಾದ ಸರಿಯಾದ್ದಲ್ಲ.

ಇನ್ನು ಹನುಮನಹಟ್ಟಿ ವಿಚಾರದಲ್ಲಿ ಅಲ್ಲಿ ಒಂದು ಒಕ್ಕಲುತನ ಶಾಲೆಯನ್ನು ಮಾಡಬೇಕೆಂದು ಕೇಂದ್ರದವರು ಅವಕ್ಕೆ ಹಣವನ್ನು ಕೊಟ್ಟಿದ್ದರು, ಆ ಶಾಲೆಗೂ ಈ ಸರ್ಕಾರಕ್ಕೂ ಏನೂ ಸಂಬಂಧವಿಲ್ಲ. ಅಲ್ಲಿ ಹಣವು ದುರುಪಯೋಗವಾಗಿರಬಹುದು. ಅದರ ಸೆಕ್ರೆಟರಿಗಳು ಇವರೇ ಇದ್ದಾರೆ ಅದರ ಬಗ್ಗೆ ಇದೇ ಬೆಂಗಳೂರಲ್ಲಿ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಬರಲಿವೆ. ಆ ವಿಚಾರಣೆಯನ್ನು ತಾ: 15ನೇ ಏಪ್ರಿಲ್ 1967 ಕ್ಕೆ ಇಟ್ಟುಕೊಂಡಿದೆ. ಹೀಗೆ ಅದರ ಬಗ್ಗೆ ಒಂದು ಖಟ್ಲೆ ನಡೆಯುತ್ತಿರುವುದನ್ನ ಮರೆತು ಅವರು ಮಾತನಾಡಿದ್ದನ್ನು ನೋಡಿದರೆ ನನಗೆ ಮರಾಠಿಯಲ್ಲಿರತಕ್ಕ ಚೋರರಾಂಚೆ ಉಲ್ಟಿ ಬೊಂಬ, ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. ಅವರು ಹಾಗೆ ಹೇಳಬಾರದಾಗಿತ್ತು ಅಂತ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಚೌರಾಂಚೆ-ಎಂಬುದು ಪಾರ್ಲಿಯಮೆಂಟರಿ ಪದವೇ !

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಈ ವಿದ್ಯುಚ್ಛಕ್ತಿ ಪವರಿನ ಬಗ್ಗೆ ನಾನು ಇಷ್ಟನ್ನು ಮಾತ್ರ ಹೇಳಬಯಸುತ್ತೇನೆ. ಇನ್ನು ಮೊನ್ನೆ ತಾನೆ ಸರ್ಕಾರದವರು ತುಟಿಭತ್ಯವನ್ನು ಸರ್ಕಾರಿ ನೌಕರರಿಗೆ ಕೊಡತಕ್ಕ ವಿಚಾರದಲ್ಲಿ ಒಂದು ಆರ್ಡರನ್ನು ಹೊರಡಿಸಿದ್ದಾರೆ. ಅದರಲ್ಲಿ ತಲಾ ಒಬ್ಬರಿಗೆ 5 ರಿಂದ 10 ರೂಪಾಯಿಗಳವರೆಗೂ ತುಟ್ಟಿಭತ್ಯದ ದರವನ್ನು ಏರಿಸಿರುವುದಾಗಿ ತಿಳಿಸುತಾ ಅವರಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ನೌಕರುಗಳಿಗೆ ಅದು ಸಿಗುವಹಾಗೆ ಮಾಡಿ, ಕೇವಲ ಮುನಿಸಿಪಲ್ ಕಾರ್ಪೊರೇಷನ್ ನೌಕರರಿಗೆ ಸಿಗುವಹಾಗೆ ಇಲ್ಲ ಅಂತಾ ಹೇಳಿದ್ದಾರೆ. ಆದ್ದರಿಂದ ಸರ್ಕಾರದವರು ಅದನ್ನು ಇನ್ನೊಮ್ಮೆ ಪರಿಶೀಲನೆಮಾಡಿ ಎಲ್ಲರಿಗೂ ಅದು ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತನಾಡುತ್ತಾ ಕೆಲವು ವಿರೋಧಪಕ್ಷದ ಸದಸ್ಯರು ಈ ಭಾಗದಲ್ಲಿ ಏನೂ ಪ್ರಗತಿಯಾಗಿಲ್ಲ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಅವರ ತಲೆ ಏನು ಬರೋಬರಿ ಇದೆಯೋ ಇಲ್ಲವೋ ಅನ್ನುವುದು ಸಂಶಯಾಸ್ಪದವಾಗಿದೆ. ಈ ವಿಚಾರದಲ್ಲಿ ಶ್ರೀಮಾನ್ ಕಂಠಿಯವರು ಯಾವ ಒಂದು ಭಾಗಕ್ಕೂ ಅನ್ಯಾಯ ಮಾಡಿಲ್ಲ. ಅವರ ಬಗ್ಗೆ ಕೆಲವರು ಏಕೆ ಟೀಕೆಮಾಡಿದ್ದಾರೆಂಬುದನ್ನು ನನಗೆ ತಿಳಿಯುವ ಎಲ್ಲಾ ಪ್ರೈಮರಿ, ಮಾಧ್ಯಮಿಕ ಶಿಕ್ಷಣ ಫ್ರೀಯಾಗಿ ಮಾಡಿದ್ದರೂ ಈ ಟೀಕೆಯಾಕೆ ? ಹೀಗೆ ಇನ್ನು ಕೆಲವರು ಪಿ. ಡಬ್ಲ್ಯು. ಡಿ. ಪರವಾಗಿ ಟೀಕೆಗಳನ್ನು ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರದ ಆಡಳಿತ ಬಂದ ನಂತರ ದೇಶದಲ್ಲಿ ಹಿಂದೆ ಇದ್ದುದಕ್ಕಿಂತ ಎರಡು ಮೂರು ಪಟ್ಟು ಹೆಚ್ಚಾಗಿ ರೂರಲ್ ಕಮ್ಯುನಿಕೇಷನ್ ರಸ್ತೆಗಳನ್ನೂ ನ್ಯಾಷನಲ್ ಹೈವೇ ಮತ್ತು ಪ್ರೊವಿನ್ಷಿಯಲ್ ರಸ್ತೆಗಳನ್ನೂ ಮಾಡಿದ್ದಾರೆ. ಈ ದಿವಸ ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ರಸ್ತೆಯ ಸೌಕರ್ಯವಿದೆ. ಹೀಗಿದ್ದರೂ ಏನೋ ನಾವು ಇಲ್ಲಿಗೆ ಬಂದಿರುವುದು ಕೇವಲ ಟೀಕೆಮಾಡುವುದಕ್ಕಾಗೇ ಬಂದಿದ್ದೇವೆ ಟೀಕೆಮಾಡೋಣ, ಅದು ಸತ್ಯವಾಗಿರಲಿ, ಇಲ್ಲದಿರಲಿ ಎಂದು ಸುಮ್ಮನೆ ಮಾತನಾಡುವುದು ಸರಿಯಲ್ಲ. ಇದರಿಂದ ದೇಶಕ್ಕೇನೂ ಒಳ್ಳೆಯದಾಗುವುದಿಲ್ಲ.

ಕೊನೆಯದಾಗಿ ನಾನು ಲ್ಯಾಂಡ್ ರೆವಿನ್ಯೂ ಬಗ್ಗೆ ಹೇಳುವುದಿಷ್ಟೇ. ಈಗ ಶೇಕಡ 80ರಷ್ಟು ಜನ ಒಕ್ಕಲುತನದ ಮೇಲೆ ಅವಲಂಬನ ಮಾಡಿದ್ದಾರೆ. ಆದರೆ ಈಗ ಲ್ಯಾಂಡ್ ರೆವಿನ್ಯೂವನ್ನು ಪೂರಾ ತೆಗೆದುಹಾಕಬೇಕೆಂಬ ಮನಸ್ಸು ಎಲ್ಲಾ ಸದಸ್ಯರಿಗೂ ಇದೆ. ಅದನ್ನು ಈಗ ತೆಗೆದರೆ ಪಂಚಾಯಿತಿಯವರಿಗೆ ಸ್ವಲ್ಪ ಮಟ್ಟಿಗೆ ಕಷ್ಟವಾಗಬಹುದು. ಆದರೆ ಯಾವ ಪ್ರಕಾರ ಮಾಡಿದರೆ ಅದರಿಂದೇನೂ ತೊಂದರೆ ಅವರಿಗೆ ಆಗುವುದಿಲ್ಲವೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಒಂದು ವೇಳೆ

(ಶ್ರೀ ಎಸ್. ಬಿ. ಅಗ್ನಿಹೋತ್ರಿ)

ಲ್ಯಾಂಡ್ ರೆವಿನ್ಯೂವನ್ನು ತೆಗೆದು ಹಾಕಿದರೆ ಅದನ್ನು ಅವರು ಪೂರೈಸುವುದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡಬೇಕು. ಅದರ ಬದಲು ಬೇರೆ ಹಣವನ್ನು ಅವರಿಗೆ ಒದಗಿಸಿ ಆ ಹಣವನ್ನು ಪಂಚಾಯತಿಯವರಿಗೆ ಕೊಟ್ಟರೆ ಪಂಚಾಯಿತಿಗಳು ಸುಲಲಿತವಾಗಿ ನಡೆಯುತ್ತವೆ. ಎಲ್ಲಾ ಟ್ಯಾಕ್ಸ್ ಒಕ್ಕಲುತನದವರಿಂದಲೇ ಬೇಕು ಎಂದರೆ ಹೇಗೆ? ಎಲ್ಲ ಕ್ಷೇತ್ರದಲ್ಲಿಯೂ ಈಗ ಅಭಿವೃದ್ಧಿ ಮಾಡಬೇಕಾಗಿದೆ. ಏನು ಅಭಿವೃದ್ಧಿ ಮಾಡಬೇಕಾದರೂ ತೆರಿಗೆ ಹೊರ ಹೆಚ್ಚು ಬರುವುದು ಒಕ್ಕಲಿಗರ ಮೇಲೆಯೇ. ಅದ್ದರಿಂದ ಲ್ಯಾಂಡ್ ರೆವಿನ್ಯೂವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಒಕ್ಕಲುತನದಲ್ಲಿ ಕ್ಯಾಷ್ ಕ್ರಾಪ್ಸ್ ಬೆಳೆಯುವವರ ಮೇಲೆ ವ್ಯವಸಾಯ ತೆರಿಗೆಯನ್ನು ಬೇಕಾದರೆ ಹಾಕಿ. ಆಗ ಒಕ್ಕಲುತನದವರಿಗೆ ಇರುವ ತೊಂದರೆಯನ್ನು ಪರಿಹಾರ ಮಾಡಿದ ಹಾಗೆ ಆಗುತ್ತದೆ.

ಇಷ್ಟು ಹೇಳಿ, ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಗುರಡ್ಡಿ (ಮುದ್ದೆಬಿಹಾಳ್).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ವಂದನಾರ್ಪಣೆಯ ನಿರ್ಣಯವನ್ನು ನಾನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಚುನಾವಣೆಯ ನಂತರ ಹೊಸದಾಗಿ ಸೇರಿದಂಥ ಈ ಸಭೆಯು ರಾಜ್ಯಪಾಲರು ನಿವೇದಿಸಿದಂಥ ಕೆಲವು ಅಂಶಗಳ ಬಗ್ಗೆ ವಿಚಾರ ಮಾಡಬೇಕಾಗಿದೆ ಎಲ್ಲ ಸದಸ್ಯರ ಮುಖ್ಯ ಜವಾಬ್ದಾರಿ ಈ ರಾಜ್ಯವನ್ನು ಉತ್ತಮ ಮಟ್ಟದಲ್ಲಿ ಕಟ್ಟಬೇಕು ಎಂಬುದಾಗಿ ಬೇಕು ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವುದನ್ನು ನಾನು ಪುಷ್ಟೀಕರಿಸಿ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇವತ್ತಿನ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನಾವು ಅವಲೋಕಿಸಿದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಹಂತದಲ್ಲಿದೆ ಮತ್ತು ದೇಶವನ್ನು ಉತ್ತಮವಾಗಿ ಕಟ್ಟಬೇಕಾದರೆ ಆರ್ಥಿಕ ಪರಿಸ್ಥಿತಿ ಹೇಗೆ ಪಾತ್ರವಹಿಸುತ್ತದೆ ಎನ್ನುವ ಮಾತನ್ನು ಈ ಸಭೆಯ ಎಲ್ಲ ಸದಸ್ಯರೂ ವಿಚಾರ ಮಾಡಬೇಕಾಗಿದೆ. ಇವತ್ತು ಮೈಸೂರು ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಕಠಿಣ ಸ್ಥಿತಿಯಲ್ಲಿದೆ ಎನ್ನುವ ಮಾತು ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿದ್ದಾಗಿದೆ. ಅದರ ಕರಭಾರ ಹೆಚ್ಚಾಗಿದೆ, ತೆಗೆಯಬೇಕು ಎಂಬ ಕೂಗು ಒಂದು ಕಡೆ ಮತ್ತು ಎಲ್ಲ ಕ್ಷೇತ್ರದಲ್ಲಿಯೂ ಪ್ರಗತಿಯನ್ನು ಸಾಧಿಸಬೇಕು ಎನ್ನುವ ಮಾತು ಮತ್ತೊಂದೆಡೆ ಕೇಳಿಬರುತ್ತಿದೆ. ಇವತ್ತು ನಮಗೆ ಕೇಂದ್ರ ಸರ್ಕಾರದವರು ಕೊಟ್ಟಂಥ ಸಾಲದ ಮೇಲೆ ಇರತಕ್ಕ ಬಡ್ಡಿಯನ್ನು ತೀರಿಸುವುದಕ್ಕಾಗುತ್ತಿಲ್ಲ. ಏಕೆಂದರೆ, ಅನೇಕ ಬಾಬುಗಳಲ್ಲಿ ನಾವು ದುರ್ವಿನಿಯೋಗ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರನೇಕರು ಆದರೆ ನಾವು ವಿನಿಯೋಗಿಸಿದ ಹಣಕ್ಕೆ ಪ್ರತಿಯಾಗಿ ಫಲ ದೊರೆಯುತ್ತಾ ಇಲ್ಲಾ ಉದಾಹರಣೆಗೆ ರಸ್ತೆಗಳನ್ನು ಮಾಡಿಸಿದ್ದಾರೆ. ವಿದ್ಯಾಭ್ಯಾಸ ಕ್ಷೇತ್ರಕ್ಕೆ ಬೇಕಾದಷ್ಟು ಖರ್ಚು ಮಾಡಿದ್ದಾರೆ. ಬೇಕಾದಷ್ಟು ದವಾಖಾನೆಗಳನ್ನು ತೆಗೆದಿದ್ದಾರೆ. ಇವೆಲ್ಲದರ ಮೇಲೆ ವಿಶೇಷವಾಗಿ ಹಣವನ್ನು ಖರ್ಚು ಮಾಡಿ ಈಗಲೇ ಪ್ರತಿಫಲ ಕೇಳಿದರೆ ತೀವ್ರವಾಗಿ ಅದು ಬರಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಸಾಲದ ಭಾರ ಹೆಚ್ಚಾಗಿದೆ ಎನ್ನುವ ಮಾತು ನಾವು ಈ ಸಂದರ್ಭದಲ್ಲಿ ಒಪ್ಪಬೇಕಾಗಿದೆ. ಆದರೆ ಅದು ದುರ್ವಿನಿಯೋಗವಾಗಿಲ್ಲವೆಂದು ನಾನು ಹೇಳಬಹುದು. ಇವತ್ತಿನ ದಿವಸ ಕೇಂದ್ರ ಸರ್ಕಾರದವರನ್ನು ನಾವೂ ನೀವೂ ಹೆಚ್ಚಿಗೆ ಹಣ ಸಹಾಯ ಮಾಡಬೇಕೆಂದು ಕೇಳಬೇಕಾಗಿದೆ. ಅಲ್ಲದೆ ಕೇಂದ್ರ ಸರ್ಕಾರದವರು ಕೆಲವು ಬಾಬುಗಳಿಗೆ ಕೊಡುವ ಹಣ ಸಾಲದ ರೂಪವಾಗಿ ಕೊಡಬೇಡಿ, ಕೇವಲ ಗ್ರಾಂಟು ರೂಪವಾಗಿ ಕೊಟ್ಟರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನಾವು ಸುಧಾರಿಸಬಹುದು ಎಂಬುದಾಗಿ ಕೇಳಬೇಕಾಗಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಹಾರ ಕೊರತೆ ಇದೆ. ಅದರೆ ಅದನ್ನು ನೀಗಿಸಲಿಕ್ಕೆ ನಾಲ್ಕನೇ ಯೋಜನೆಯಲ್ಲಿ ಒಕ್ಕಲುತನ ಸುಧಾರಿಸಲಿಕ್ಕೆ ಮೊಟ್ಟ ಮೊದಲನೆಯ ಸ್ಥಾನ ಕೊಟ್ಟಿದ್ದೇವೆ. ಆದರೆ ನಾವು ಒಕ್ಕಲುತನಕ್ಕೆ ಖರ್ಚು ಮಾಡುವ ಹಣ ಎಷ್ಟು ಅದನ್ನು ಯಾವ ರೀತಿಯಲ್ಲಿ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ, ಒಕ್ಕಲತನ ಸುಧಾರಿಸಲಿಕ್ಕೆ ನೀರಾವರಿ ಸೌಕರ್ಯ ಮುಖ್ಯವಾಗಿ ಬೇಕು.

ಇನ್ನು ಇವತ್ತು ರಾಜ್ಯದ ನೀರಾವರಿ ಪರಿಸ್ಥಿತಿಯನ್ನು ಅವಲೋಕಿಸಿದರೆ ನಾವು ಆ ಬಾಬಿನಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ನೀರಾವರಿ ಬಾಬಿಗೆ ತೆಗೆದಿಟ್ಟಿರುವ ಹಣ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಬಹಳ ಕಡಿಮೆ ಇದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿಸಬೇಕಾದಂಥ ಕಾಮಗಾರಿಗಳನ್ನು ಈಗ ಮುಗಿಸಬೇಕಾದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದಿಟ್ಟಿರುವ ಹಣ ನಿಜವಾಗಿ ಸಾಲುತ್ತದೆಯೇ ಎನ್ನುವ ಸಂಶಯ ಬರುತ್ತಿದೆ. ಅದ್ದರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಇವತ್ತಿನ ದಿವಸ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನಾ ದೊಡ್ಡ ದೊಡ್ಡ ಯೋಜನೆಗಳು

ಬರೀ ಕಾಗದದಲ್ಲಿ ಉಳಿದಿವೆ. ಇವತ್ತು ಕೃಷ್ಣಾ ನದಿಯ ಯೋಜನೆಯನ್ನು ತೆಗೆದುಕೊಳ್ಳಿಯೆಂದು ಅಲ್ಲಿರುವ ಸದಸ್ಯರು ಸರ್ಕಾರಕ್ಕೆ ಮೇಲಿಂದ ಮೇಲೆ ಒತ್ತಾಯ ಮಾಡುತ್ತಲೇ ಇದ್ದಾರೆ. ಆದರೆ ಕೃಷ್ಣಾ ಯೋಜನ ಒಂದು ಬೃಹತ್ ಯೋಜನೆ. ಅದನ್ನು ರಾಜ್ಯ ಸರ್ಕಾರ ತನ್ನ ರಿಸೋರ್ಸಸ್‌ದಿಂದ ಮಾಡುವುದಕ್ಕಾಗುವುದಿಲ್ಲ, ಇದನ್ನು ಕೇಂದ್ರದವರೇ ತೆಗೆದುಕೊಂಡು ಪೂರ್ಣ ಮುಗಿಸಬೇಕು. ಸಾಲದ ರೂಪದಲ್ಲಿ ಅದಕ್ಕಾಗಿ ಪ್ರತ್ಯೇಕ ಹಣ ಕೊಡಿ ಎಂಬುದಾಗಿ ಎಷ್ಟೋ ಸಾರಿ ಇಲ್ಲಿನ ಸದಸ್ಯರು ಹಾಗೂ ಅಲ್ಲಿನ ಸದಸ್ಯರು ಕೇಳಿದರೂ ಇದುವರೆಗೂ ಕೇಂದ್ರ ಸರ್ಕಾರದಿಂದ ಯಾವ ಉತ್ತರವೂ ಬಂದಿಲ್ಲ. ಇದರಿಂದೇನಾಗಿದೆಯೆಂದರೆ...

ಶ್ರೀ ಎಸ್. ಗೋಪಾಲಗೌಡ.—ಮತ್ತೆ ಶ್ರೀಮಾನ್ ನಿಜಲಿಂಗಪ್ಪನವರು ಮುಂದಿನ ತಿಂಗಳು ಏಪ್ರೈಲ್ ಒಂದನೇ ತಾರೀಖಿನ ನಂತರ ದೆಹಲಿಗೆ ಹೋದಾಗ ಈ ವಿಚಾರವನ್ನು ಮಾತನಾಡಿಕೊಂಡು ಬರುತ್ತಾರೆಂಬ ಆಶ್ವಾಸನೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. (ನಗು !)

ಶ್ರೀ ಎಸ್. ಎಂ. ಗುರೆಡ್ಡಿ.—ನಾವೆಲ್ಲರೂ ಈ ವಿಚಾರವನ್ನು ಕೂಲಂಕಷವಾಗಿ ಮತ್ತು ಗಾಂಭೀರ್ಯವಾಗಿ ಆಲೋಚನೆ ಮಾಡಬೇಕಾಗಿದೆ. ರಾಜ್ಯದ ಆರ್ಥಿಕಮಟ್ಟ ಬೆಳೆಯಬೇಕಾದರೆ ಕೇವಲ ಭಾಷಣಗಳಿಂದ ಆಗುವುದಿಲ್ಲ. ಅಲ್ಲದೆ ಕೇವಲ ಯೋಜನಗಳನ್ನು ನಿರೂಪಿಸುವುದರಿಂದ ಆಗುವುದಿಲ್ಲ. ಪ್ರತ್ಯಕ್ಷವಾಗಿ ಅವು ಕಾರ್ಯರೂಪಕ್ಕೆ ಬಂದಾಗ್ಗೆ ಅದರಿಂದಾಗುವ ಆಗುಹೋಗುಗಳು ತಿಳಿಯುತ್ತವೆ. ಇವತ್ತಿನ ದಿವಸ ಒಕ್ಕಲುತನ ಸುಧಾರಿಸಬೇಕಾದರೆ ನೀರಾವರಿ ಬೇಕು. ರಾಸಾಯನಿಕ ಗೊಬ್ಬರದ ಸಹಕಯ ಬೇಕು. ರೈತರ ಉತ್ಸಾಹ ಹುಮ್ಮಸ್ಸು ಹೆಚ್ಚಬೇಕು. ಈ ದಿಸೆಯಲ್ಲಿ ಹೆಚ್ಚಿನ ಕಾರ್ಯವನ್ನು ಎಲ್ಲರೂ ಮಾಡಬೇಕಾಗಿದೆ. ಆದರೆ ಇದು ಒಂದು ಕೇವಲ ಜವಾಬ್ದಾರಿಯನ್ನು ಹೊತ್ತಿರತಕ್ಕ ಒಬ್ಬೊಬ್ಬರ ಕೆಲಸವಲ್ಲ. ಎಲ್ಲ ಸದಸ್ಯರ ಹೊಣೆಗಾರಿಕೆ ಮತ್ತು ಕರ್ತವ್ಯವಾಗಿದೆ. ಸರ್ಕಾರ ಸಣ್ಣ ನೀರಾವರಿಯಲ್ಲಿಯೂ ಹಾಗೂ ವಿದ್ಯುಚ್ಛಕ್ತಿಯಲ್ಲಿಯೂ ಮತ್ತು ಕಮ್ಯೂನಿಕೇಷನ್ಸ್‌ನಲ್ಲಿಯೂ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಆದರೆ ಆ ಪ್ರಗತಿ ಇಷ್ಟಕ್ಕೇ ಸಾಲದು. ಇನ್ನೂ ನಮ್ಮ ಗ್ರಾಮಾಂತರ ಜನತೆಯ ಆರ್ಥಿಕ ಪರಿಸ್ಥಿತಿ ಅಥವಾ ಉದ್ಯೋಗದ ಪರಿಸ್ಥಿತಿ ಸಾಕಷ್ಟು ಸುಧಾರಿಸಿಲ್ಲವೆನ್ನುವ ಮಾತನ್ನು ತಿಳಿದುಕೊಳ್ಳಬೇಕಾಗಿದೆ. ಆದರೆ ಈಗಾಗಲೇ ಕೈಗೊಂಡಿರತಕ್ಕ ಯೋಜನೆಗಳು ಇನ್ನೂ ಕಾರ್ಯರೂಪಕ್ಕೇ ಬಾರದೇ ಇರುವಾಗ ಅವುಗಳ ರಿಟರ್ನ್ಸ್ ಈಗಲೇ ಕೇಳುವುದು ತಪ್ಪಾದೀತು. ಯೋಜನೆಗಳು ಪೂರ್ತಿಯಾಗಿ ಮುಗಿದು ಕಾರ್ಯರೂಪಕ್ಕೆ ಬರಬೇಕಾದರೆ ಸಮಯ ಹಿಡಿಯುತ್ತದೆ. ಪ್ರತಿಫಲ ತೀವ್ರ ಅಪೇಕ್ಷಿಸಿದರೆ ಅದು ಸಾಧ್ಯವಿಲ್ಲ. ಇವತ್ತಿನ ದಿವಸ ನಾವು ದೊಡ್ಡ ದೊಡ್ಡ ಯೋಜನೆಗಳಿಗೆ ಹಾಕಿರತಕ್ಕ ಹಣ ಒಡ್ಡಿ ಎರಡು ಪರಸೆಂಟ್ ಬರುತ್ತಾ ಇಲ್ಲ. ದೊಡ್ಡ ದೊಡ್ಡ ಯೋಜನಗಳಿಗೆ ಹಾಕಿರತಕ್ಕ ಹಣ ಯಾವ ಕಾಲಕ್ಕೆ ಎಷ್ಟು ಪರ್ಸೆಂಟ್ ರಿಟರ್ನ್ಸ್ ಬರುತ್ತದೋ ಗೊತ್ತಿಲ್ಲ ಅಂದ ಮೇಲೆ ದೊಡ್ಡ ದೊಡ್ಡ ಯೋಜನೆಗಳನ್ನು ಕೈಬಿಡಲಿಕ್ಕೆ ಆಗುವದಿಲ್ಲ, ಮಾಡಲೇಬೇಕಾಗುತ್ತದೆ. ಉಳಿದ ಬಾಬಿನಲ್ಲಿ ಉಳಿತಾಯ ಮಾಡಿ ದೊಡ್ಡ ನೀರಾವರಿ ಯೋಜನೆಗಳನ್ನು ತಗೆದುಕೊಳ್ಳುವದು ದೇಶದ ದೃಷ್ಟಿಯಿಂದ ಮಹತ್ವವಾದದ್ದು. ಅದನ್ನು ಸರಕಾರ ಮಾಡುತ್ತದೆಂದು ನಂಬಿದ್ದೇನೆ.

ಇನ್ನು ಈಗ ಭೂ ಕಂದಾಯವನ್ನು ರದ್ದುಮಾಡಬೇಕೆಂಬ ವಿಚಾರ ಬಂದಿದೆ. ಕೆಲವರು ತಿಳಿದುಕೊಂಡರಂತೆ ಇದು ಪೊಲಿಟಿಕಲ್ ಸ್ಟಂಟ್ ಎಂದು ಹೇಳಿದರು. ಟ್ಯಾಕ್ಸೇಷನ್ ಇಲ್ಲದೆ ರಾಜ್ಯದ ಪ್ರಗತಿ ಸಾಧ್ಯವೇ ? ಲ್ಯಾಂಡ್ ರೆವಿನ್ಯೂನಿಂದ ಬರತಕ್ಕ ಹಣವೆಷ್ಟು, ರೈತನು ಇದನ್ನು ಕೊಡುವುದರಿಂದ, ಅವನಿಗೆ ಭಾರವಾಗುತ್ತದೆಯೇ ಹೇಗೆ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಭೂಕಂದಾಯವನ್ನು ರದ್ದುಮಾಡುವುದು ಪೊಲಿಟಿಕಲ್ ಸ್ಟಂಟ್ ಆಗಬಾರದು. ಪೊಲಿಟಿಕಲ್ ಸ್ಟಂಟ್ ಪ್ರಾರಂಭ ಮಾಡಿದವರು ಯಾರೆಂಬುದನ್ನು ಮಾನ್ಯ ಸದಸ್ಯರು ಹೇಳಲಿ. ಸಾರ್ವತ್ರಿಕ ಚುನಾವಣೆಗೆ ಮುಂಚೆ ಪೊಲಿಟಿಕಲ್ ಸ್ಟಂಟನ್ನು ಪ್ರಾರಂಭ ಮಾಡಿದವರು ಆ ಕಡೆಯವರು. ಅದರಲ್ಲಿಯೂ ಆರ್ಥಿಕ ಮಂತ್ರಿಗಳು ಎಂದು ಹೇಳಿದರು. ಈ ಪೊಲಿಟಿಕಲ್ ಸ್ಟಂಟ್ ಮಾಡಿದ್ದು. ಯಾವಾಗಲೂ ಅದು ಆ ಕಡೆಯಿಂದ ಪ್ರಾರಂಭವಾಗುತ್ತದೆಯೇ ಹೊರತು ಈ ಕಡೆಯಿಂದ ಶುರುವಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಇದೆಲ್ಲಾ ಪೊಲಿಟಿಕಲ್ ಸ್ಟಂಟ್ ತಮ್ಮಿಂದ ಬಂದದ್ದು.

ಶ್ರೀ ಡಿ. ದೇವರಾಜ ಅರಸ್ (ಮೀನುಗಾರಿಗೆ, ಪಶುಪಾಲನೆ, ರೇಷ್ಮೆ ಮತ್ತು ವಾರ್ತಾ ಶಾಖೆಗಳ ಮಂತ್ರಿಗಳು).—ಅವರು ಹೇಳುವುದು ಯಾವ ರೀತಿಯಲ್ಲೂ ಕಂದಾಯ ಇಲ್ಲದೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳಿದರೇ ಹೊರತು ಬೇರೇನೂ ಅಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಬಹುಶಃ ದೇವರಾಜ್ ಅರಸರ ಗಮನ ಎಲ್ಲಿಯೋ ಇತ್ತೆಂದು ಕಾಣುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಇವರು ಭೂಕಂದಾಯ ರದ್ದುಮಾಡಿ, ರೈತನಿಗೆ ಟ್ಯಾಕ್ಸ್ ಬೀಳುವುದರಿಂದ ಅವನಿಗೆ ತ್ರಾಸವಾಗುತ್ತದೆ ಎಂದು ಹೇಳುತ್ತಿದ್ದಾರೆ. ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್ ಅಡ್ಡಿ ಇಲ್ಲ ಎನ್ನುವ ಮಾತನ್ನು ಮಾತನಾಡಿದ್ದಾರೆ. ಈಗ ರೈತ ಆಫೀಸರರ ಹತ್ತಿರ ಹೋಗಿ, ತಾನು ಎಷ್ಟು ಬೆಳೆದಿದ್ದಾನೆ ಎಂದು ಲೆಕ್ಕ ಒಪ್ಪಿಸಬೇಕು. ಇದು ರೈತನಿಗೆ ಮಾಡುವುದಕ್ಕಾಗುವುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಈಗಿರುವ ಕಂದಾಯವೇನೂ ಜನರಿಗೆ ಭಾರವಾಗಿಲ್ಲ. ಇದನ್ನು ತಾವುಗಳು ಹೆಚ್ಚಾಗಿ ವಿಚಾರಿಸಿ ನಿರ್ಧಾರಕ್ಕೆ ಬರಬೇಕು. ನಮಗೆ ಅಭಿವೃದ್ಧಿ ಕಾರ್ಯಗಳಿಗೆ ಹಣಬೇಕು. ಈ ಸಮಯದಲ್ಲಿ ಎಲ್ಲಿಂದ ಹಣ ಬಂದರೂ ಸರಿಯೆ, ಅದು ಬಹಳ ಮಹತ್ವನಾದುದು. ಇಂದು ರಾಜ್ಯಕ್ಕೆ ದೊರಕುವ ವಿದ್ಯುಚ್ಛಕ್ತಿ ಮುಂಬರುವ ದಿನಗಳಲ್ಲಿ ಸಾಲುವುದಿಲ್ಲ. ಅದಕ್ಕಾಗಿ ಕಾಳಿ ಯೋಜನೆಯನ್ನು ಕೈಗೊಳ್ಳಬೇಕು. ಇದೇ ರೀತಿ ನಾನಾ ತರದ ಯೋಜನೆಗಳನ್ನು ಕೈಗೊಳ್ಳುವಾಗ, ಹಣದ ಅಭಾವ ಬರುವುದು ಸ್ವಾಭಾವಿಕ ಇದನ್ನು ಯಾವ ರೀತಿ ಪರಿಹರಿಸಬೇಕೆಂಬುದನ್ನು ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ತಿಳಿಸಲಿಲ್ಲ. ಇದು ಬಹಳ ವಿಷಾದಕರವಾದ ಸಂಗತಿ, ಮತ್ತು ವ್ಯಥೆಪಡುವಂಥ ಸಂಗತಿ. ಇವತ್ತಿನ ದಿವಸ ಮಾನ್ಯ ಸದಸ್ಯರಿಂದ ನಾವು ಕೇಳುತ್ತಿದ್ದೇವೆ, ಟ್ಯಾಕ್ಸೇಶನ್ ಹೆಚ್ಚಾಗಿದೆಯೆಂದು. ಯಾವದೇ ದೇಶವಾದರೂ, ಅಭಿವೃದ್ಧಿಯ ಅಥವಾ ಪ್ರಗತಿಪಥದಲ್ಲಿ ಸಾಗಬೇಕಾಗಿದ್ದರೆ, ಆ ದೇಶದಲ್ಲಿ ಟ್ಯಾಕ್ಸೇಶನ್ ಹೆಚ್ಚಾಗಲೇಬೇಕು, ಮತ್ತು ಹೆಚ್ಚು ಬೀಳುತ್ತದೆ; ಇದು ಅನಿವಾರ್ಯ, ಜನರು ಸಹಿಸಿಕೊಳ್ಳಬೇಕು. ಇವತ್ತಿನ ದಿವಸ ಬಡಬಗ್ಗರಿಗೆ, ಸಾಮರ್ಥ್ಯವಿಲ್ಲದವರಿಗೆ, ಇದನ್ನು ಹಾಕಿದರೆ, ಅದು ದ್ರೋಹವಾಗುತ್ತದೆ. ಅಂಥ ದ್ರೋಹ ಸರ್ಕಾರ ಇವತ್ತಿನ ದಿವಸ ಮಾಡುತ್ತಾ ಇಲ್ಲ. ನೀರಾವರಿ ಸೌಲಭ್ಯಪಡೆದ ರೈತನು ತೆರಿಗೆ ಕೊಡಲು ಹಿಂಜರಿಯಬಾರದು. ಅವನು ಕೊಡಲೇ ಬೇಕಾಗುತ್ತದೆ. ಅವನಿಗೆ ಪ್ರಚೋದನೆ ಮಾಡಿ ಕೊಡದ ಹಾಗೆ ಭಾವನೆ ಹುಟ್ಟಿಸುವುದು ಸರಿಯಲ್ಲ ಕಂದಾಯವಿಲ್ಲದೆ ಯಾವ ಸರ್ಕಾರವೇ ಆಗಲೀ, ನಡೆಯಲು ಸಾಧ್ಯವಿಲ್ಲ ಎಂಬುದನ್ನು ಮಾನ್ಯ ಸದಸ್ಯರು ತಿಳಿದಿದ್ದಾರೆ. ವಿಶೇಷ ಹೇಳುವ ಅವಶ್ಯವಿಲ್ಲ.

ಇನ್ನು ಕೈಗಾರಿಕೆಗಳ ವಿಚಾರ. ಇದರ ವಿಚಾರ ಈ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಕೈಗಾರಿಕೆಯಲ್ಲಿ ಮೈಸೂರು ರಾಜ್ಯ ಸಾಧಿಸಿದಂತಹ ಪ್ರಗತಿಯಿಂದ. ಎಲ್ಲರೂ ಹೆಮ್ಮೆ ಪಡಬೇಕಾಗಿದೆ. ಆದರೆ ಎಷ್ಟು ಸಾಧಿಸಬೇಕಾಗಿತ್ತೋ, ಅಷ್ಟು ಆಗಿಲ್ಲವೆಂದೂ ಹೇಳಬಹುದು. ಕಾರಣ ಹಣದ ಮುಗ್ಗಟ್ಟು. ಇದುವರೆಗೆ ಪ್ರಗತಿ ಸಾಧಿಸದೇಯಿರುವುದಕ್ಕೆ ಮುಖ್ಯವಾದ ಕಾರಣ ವಿದ್ಯುಚ್ಛಕ್ತಿ. ಇಂದು ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ, ಯಾರು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಾರೋ, ಅವರಿಗೆ ಹೆಚ್ಚಿಗೆ ಸಹಾಯ ಮಾಡುತ್ತೇವೆ, ಅವರಿಗೆ ಕಡಿಮೆ ಬೆಲೆಗೆ ವಿದ್ಯುಚ್ಛಕ್ತಿ ಕೊಡುತ್ತೇವೆ, ಜಮೀನು ಕೊಡುತ್ತೇವೆ ಇತ್ಯಾದಿ. ಆದರೆ ಯಾರೂ ಮುಂದೆ ಬರುತ್ತಾ ಇಲ್ಲ. ಮತ್ತು ಅವರಿಗೆ ಪ್ರಚೋದನೆ ಯಾರೂ ಮಾಡುತ್ತಿಲ್ಲ. ಹೀಗಾಗಿ, ಕೈಗಾರಿಕೆಗಳಲ್ಲಿ ನಾವು ಹಿಂದುಳಿದಿದ್ದೇವೆಂದು ಒಪ್ಪಿಕೊಳ್ಳಬೇಕಾಗಿದೆ. ಇನ್ನು ಮುಂದೆ ಉದ್ಯಮಗಳು ಬೆಳೆಯಲಿಕ್ಕೆ ಸಾಧ್ಯವಿದೆ, ಬೆಳೆಯುತ್ತವೆ.

ಇವತ್ತಿನ ದಿವಸ ಮಾನ್ಯ ಚನ್ನಬಸಪ್ಪನವರು ಕೃಷ್ಣಾ ನದಿಯಲ್ಲಿ ನಮಗೆ ನೀರಿನ ಸರಿಯಾದ ಪಾಲು ಸಿಗುವುದಿಲ್ಲ ಮತ್ತು ನೀರೇ ಇಲ್ಲ ಎಂದು ಹೇಳಿದರು ಆದರೆ ನಾನಾದರೂ ಹೇಳುತ್ತೇನೆ— ಸಿ.ಡಬ್ಲ್ಯು.ಪಿ.ಸಿ.ಯವರು ನಮಗೆ ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಸರ್ಕಾರದವರು ಅಸ್ತಿಭಾರವನ್ನು ಹಾಕಿಸಿದ್ದಾರೆ. ಅಲ್ಲಿ ನೀರಿಲ್ಲದೆ ಹೋಗಿದ್ದರೆ ಸಿ.ಡಬ್ಲ್ಯು.ಪಿ.ಸಿ. ಯವರು ಮಂಜೂರಾತಿಯೇ ಕೊಡುತ್ತಿದ್ದರೇ, ಹೇಗೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಕೋಟ್ಯಾಂತರ ರೂಪಾಯಿ ಖರ್ಚಾಗುವ ಯೋಜನೆಯನ್ನು ಕೈಗೊಳ್ಳುತ್ತಿದ್ದಿಲ್ಲ, ನೀರಿಲ್ಲದೆ ಹೋಗಿದ್ದರೆ. ಎಂಬುದನ್ನು ತಾವು ಯೋಚನೆ ಮಾಡಬೇಕು. ಇವತ್ತಿನ ದಿವಸ ಒಂದು ದೊಡ್ಡ ಅಣೆಕಟ್ಟು ಕಟ್ಟತಕ್ಕಂತಹ ಯೋಗ್ಯತೆ ಶಕ್ತಿ ನಮಗೆ ಇಲ್ಲ. ನಮ್ಮ ಹತ್ತಿರ ರೊಕ್ಕ ಇಲ್ಲ. ಆದರೆ ಅದೇ ಆಂಧ್ರದವರು ಹಣ ಒದಗಿಸಿಕೊಂಡು ನಾಗಾರ್ಜುನಸಾಗರವನ್ನು ಮುಗಿಸುತ್ತಿದ್ದಾರೆ. ಮೈಸೂರಿಗೆ ಸಲ್ಲಬೇಕಾದ ನೀರಿನ ಯಾವ ಒಂದು ಪಾಲು ಇದೆ, ಆ ಪಾಲನ್ನು ದೊರಕಿಸಿಕೊಳ್ಳಲು ನಾವು ನೀವು ಕೂಡಿ ಒಟ್ಟಾಗಿ ಪ್ರಯತ್ನ ಮಾಡೋಣ. ಯಾವುದೂ ಅಸಾಧ್ಯವಲ್ಲ ಮೊದಲು ಈ ಯೋಜನೆಗೆ ಹಣ ದೊರಕಿಸಿ, ನಾವು ನೀವು ಕೇಂದ್ರ ಸರ್ಕಾರದೊಂದಿಗೆ ನೀರಿನ ಪಾಲನ್ನು ಪಡೆಯಲು ಪ್ರಯತ್ನ ಮಾಡೋಣ, ಮೊದಲು ಕೊಟ್ಟ ನೀರನ್ನು ಉಪಯೋಗಿಸಿಕೊಳ್ಳುವುದು ಅವಶ್ಯಕವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಕೋಟೆಯೆಲ್ಲಾ ಹೋದ ಮೇಲೆ ಊರಬಾಗಿಲು ಹಾಕಿದರು ಎಂಬಂತೆ ಆಯಿತು. ಆಂಧ್ರದವರು ಎಲ್ಲಾ ನೀರನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿಕೊಂಡ ಮೇಲೆ ಅವರಿಗೆ ಪ್ರಯರ್ ಅಪ್ರೋಪ್ರಿಯೇಶನ್ ರೈಟ್ ಸಿಕ್ಕಿದ ಮೇಲೆ ನೀವು ನೀರನ್ನು ಹಂಚಿ ಕೊಡದಿದ್ದರೆ ಹೇಗೆ ಸಾಧ್ಯ?

Sri M. Y. GHORPADE (Sandur).—It is precisely for that reason that the State Government wants to start the Upper Krishna project. If, according to the Hon'ble Member Sri Channabasappa, there is not enough water to the share of Mysore in that project, how can the C.P.W.C. give clearance? That is the question I put for clarification when he was speaking. But he did not answer.

Sri H. M. CHANNABASAPPA.—I am very thankful for just reminding me. I wanted to answer during the course of my speech but I somehow lost sight of it.

Mr. SPEAKER.—Perhaps I prevented it.

Sri H. M. CHANNABASAPPA.—It is a very relevant and pertinent question. The C.P.W.C. is purely a technical body to advise the Government of India on technical matters but on account of various pushes and pulls, it is also tending to become a political body rather than a technical body.

ಶ್ರೀ ಎಸ್. ಎಂ. ಗುರೆಡ್ಡಿ.—ನಾನು ಆ ವಿಚಾರವಾಗಿ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ, ನಮ್ಮ ಸರ್ಕಾರವಾಗಲಿ ಕೇಂದ್ರಸರ್ಕಾರವಾಗಲೀ, ಅಥವಾ ಇತರರು ಯಾರೇ ಆಗಲಿ ಅನ್ಯಾಯ ಮಾಡಲಿಕ್ಕಿಲ್ಲ ಎಂದು ತಿಳಿಯುತ್ತೇನೆ. ನಮ್ಮ ರಾಜ್ಯದಲ್ಲಿ ಬರಗಾಲದಿಂದ ಬಳಲುವಂತಹ ಜಿಲ್ಲೆಗಳಾದ, ಬಿಜಾಪುರ, ರಾಯಚೂರು, ಗುಲ್ಬರ್ಗ ಮೊದಲಾದ ಜಿಲ್ಲೆಗಳಿಂದ ಕೂಡಿದೆ ಎಂದು ಕೇಂದ್ರ ಸರ್ಕಾರಕ್ಕೂ ತಿಳಿದಿದೆ. ಇದನ್ನು ಅಲಕ್ಷ್ಯ ಮಾಡಲಿಕ್ಕಿಲ್ಲ ಎನ್ನುವ ಭರವಸೆ ಇಟ್ಟುಕೊಂಡು ನಾವು ಅಪ್ಪರ್ ಕೃಷ್ಣ ಶುರು ಮಾಡಬೇಕಾಗಿದೆ.

11-30 A. M.

ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ನಾವು ಹೋದಸಲ ಈ ಮನೆಯಲ್ಲಿ ಯುನಾನಿಮಸ್ ಆಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇನೆ. ಕೃಷ್ಣಾ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ "Outside the Plan" ಹಣವನ್ನು ಒದಗಿಸಬೇಕೆಂದು ನಾವು ಕೇಳಿಕೊಂಡರೂ ಕೂಡ ಅದಕ್ಕೆ ಕೇಂದ್ರ ಸರ್ಕಾರದಿಂದ ಮರು ಉತ್ತರ ಬರಲಿಲ್ಲ. ಇವೊತ್ತಿನ ದಿವಸ ನಾನು ಅಧ್ಯಕ್ಷರ ಮುಖಾಂತರ ಈ ಸಭೆಯ ನಾಯಕರನ್ನು ಕೇಳಿಕೊಳ್ಳುವುದು ಏನೆಂದರೆ, ಈ ಕೃಷ್ಣಾ ಪ್ರಾಜೆಕ್ಟ್ ಬಹಳ ಮಹತ್ವವಾದ ಒಂದು ಪ್ರಾಜೆಕ್ಟ್. ಸಾವಿರಾರು ವರ್ಷಗಳಿಂದ ಬರಗಾಲಕ್ಕೆ ತುತ್ತಾಗುವ ಪ್ರದೇಶ ಈ ಒಂದು ಪ್ರಾಜೆಕ್ಟಿನಿಂದ ಉದ್ಧಾರವಾಗಬೇಕಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಹೋದ ವರ್ಷ ಮತ್ತು ಈ ವರ್ಷ ಕೂಡ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮಳೆಯಾಗದೆ ಆ ಪ್ರದೇಶ ಬರಗಾಲಕ್ಕೆ ತುತ್ತಾಗಿದೆ. ಹೀಗಿದ್ದರೂ ಸಹ ರಾಜ್ಯಪಾಲರ ಭಾಷಣದಲ್ಲಿ ಬಿಜಾಪುರ ಜಿಲ್ಲೆ ಬರಗಾಲಕ್ಕೆ ತುತ್ತಾಗಿದೆ ಎನ್ನುವ ಮಾತು ಬಂದಿಲ್ಲ. ಹೀಗೆ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುವ ಬಿಜಾಪುರ ಜಿಲ್ಲೆಗೆ ಶಾಶ್ವತ ಪರಿಹಾರವಾಗುವಂಥ ಸಂಬಂಧಪಟ್ಟ ಯೋಜನೆಗೆ ಹಣವನ್ನು ಒದಗಿಸಲು ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಅದಷ್ಟು ಒತ್ತಿ ಹೇಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವಿ. ಐತಾಳ್ (ಸುರತ ಕಲ್).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದಲ್ಲಿ ಕೃಷಿ ಭೂ ಮಾಲಿಕರು ಹಾಗೂ ರೈತರಿಗೆ ಸಹಾಯಕವಾಗುವಂತಹ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಆದರೆ ಕೃಷಿಕನ ಹಾಗೂ ರೈತನ ಭೂಮಿಗಳನ್ನು ಒಂದಲ್ಲ ಒಂದು ಪ್ರಾಜೆಕ್ಟಿಗೋಸ್ಕರ ನ್ಯಾಯವಾದ ಬೆಲೆ ಅಥವಾ ಪ್ರತಿಫಲವನ್ನು ಕೆಲವು ಕಡೆಗಳಲ್ಲಿ ಕೊಡದೆ ಸರ್ಕಾರದ ಉದ್ದೇಶಕ್ಕೋಸ್ಕರ ತೆಗೆದುಕೊಂಡು ಕೃಷಿ ಭೂಮಿಯನ್ನು ಹಾಳುಮಾಡುತ್ತಿರುವ ಒಂದು ಚಿತ್ರ ಇವೊತ್ತು ಆಹಾರದ ಕೊರತೆಯಿರುವ ಸಮಯದಲ್ಲಿ ಕೃಷಿಕನಿಗೆ ದುಃಖವನ್ನು ಉಂಟು ಮಾಡುವಂತಹ ವಿಷಯವಾಗಿದೆ. ನಾನು ಸುರತ್‌ಕಲ್ ಕ್ಷೇತ್ರದಿಂದ ಈ ಸಭೆಗೆ ಆರಿಸಿಬಂದಿದ್ದೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಇತರ ಎಲ್ಲಾ ಕಡೆಗಳಲ್ಲೂ, ಯಾವ ಕಡೆಯಲ್ಲೂ ನಡೆಯದೆ ಇರುವಂತಹ ಕೃಷಿ ಭೂಮಿಯನ್ನು ಇಲ್ಲಿ ಹಾಳುಗೆಡವುವಂತಹ ಒಂದು ಚಿತ್ರವನ್ನು ಸುರತ್‌ಕಲ್‌ನಲ್ಲಿ ನಾವು ಕಾಣುತ್ತಿದ್ದೇವೆ. ಮೈಸೂರು ಗೆಜೆಟ್ಟಿನಲ್ಲಿ ಈಗ ನಾವು ನೋಡುವ ವಿಷಯ ಎಂದರೆ ಸಾಧಾರಣವಾಗಿ

(ಶ್ರೀ ಪಿ. ವಿ. ಐತಾಳ್)

ಶೇಕಡಾ 50 ರಷ್ಟು ಪುಟಗಳಲ್ಲಿ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಳ್ಳುವುದಕ್ಕೋಸ್ಕರ ಅಕ್ವಿಜಿಷನ್ ನೋಟೀಸ್ ಇರುತ್ತದೆ. ಬೇರೆ ಯಾವುದೂ ಇಲ್ಲ ಒಂದಲ್ಲ ಒಂದು ಯೋಜನೆಗೋಸ್ಕರ ಕೃಷಿಕರ ಭೂಮಿಯನ್ನು ತೆಗೆದುಕೊಂಡು ಅದನ್ನು ಸದುಪಯೋಗ ಮಾಡದೆ ಅದನ್ನು ಬಂಜರಾಗಿ ಬಿಟ್ಟಿದ್ದಾರೆ. ಎರಡು ಬೆಳೆ ಮೂರು ಬೆಳೆಗಳನ್ನು ಬೆಳೆಯತಕ್ಕ ಗದ್ದೆಗಳನ್ನು ಖಾಲಿ ಬಿಟ್ಟಿರುವ ಚಿತ್ರವನ್ನು ಕಂಡು ಬಹಳ ದುಃಖವಾಗುತ್ತದೆ. ಕಳೆದ ವರ್ಷ ಒಂದು ಹೊಸ ಕಾನೂನನ್ನು ಮೈಸೂರು ಸರ್ಕಾರ ಮಾಡಿದೆ. ಅದು ಯಾವುದೆಂದರೆ "ಮೈಸೂರು ಇಂಡಸ್ಟ್ರಿಯಲ್ ಏರಿಯಾಸ್ ಡೆವಲಪ್‌ಮೆಂಟ್ ಆಕ್ಟ್" ಎಂದು. ರಾಜ್ಯಪಾಲರ ಭಾಷಣದಲ್ಲಿ 23 ನೇ ಪೇಜಿನಲ್ಲಿ "The Mysore Industrial areas Development Board, a statutory body established under the Act, has taken up several projects for acquisition of land, notably at Belgaum and Mangalore where Major industries are likely to come up in the near future ಎಂದು ಹೇಳಿದ್ದಾರೆ. ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಕಥಾದ್ದೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತದೆ. ಭೂಮಿಯನ್ನ ಅಕ್ವೈರ್ ಮಾಡುವುದಕ್ಕೇ ಒಂದು ಪ್ರಾಜೆಕ್ಟ್ ಮಾಡಲಾಗಿದೆ. ಆಹಾರದ ಕೊರತೆ ಇರುವ ಇಂಥಾ ಸಮಯದಲ್ಲಿ ಭೂಮಿಯನ್ನೂ ಹಾಳುಮಾಡಿ, ಬೇಕಾದಂತಹ ಪ್ರಾಜೆಕ್ಟನ್ನೂ ಮಾಡದೇ ಆಹಾರ ಧಾನ್ಯವನ್ನು ಬೆಳೆಯದಂತೆ ಮಾಡುವಂತಹ ಒಂದು ಪರಿಸ್ಥಿತಿಯನ್ನು ದೇಶದಲ್ಲಿ ಸರ್ಕಾರದವರು ಉಂಟುಮಾಡುತ್ತಿದ್ದಾರೆ. ಇಷ್ಟರವರೆಗೂ ಇದ್ದ ಚಾಲಗೇಣಿ ಒಕ್ಕಲುಗಳಿಗೆ ಒಂದು ಪರಿಹಾರವನ್ನು ಕೊಟ್ಟಿಲ್ಲ. ನಮ್ಮಲ್ಲಿ ಮಂಗಳೂರಿನಲ್ಲಿ ಒಂದು ದೊಡ್ಡ ಬಂದರಾಗುತ್ತವೆ ಎಂದು ಹೇಳುತ್ತಿದ್ದಾರೆ. ನಮ್ಮ ಮೈಸೂರಿನಲ್ಲಿ ಬೃಹತ್ ಬಂದರಿನ ಯೋಜನೆ ಯಶಸ್ವಿಯಾಗಿ ಆಗುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. 1967 ರಲ್ಲಿ ಬಂದರಿನ ಕಾರ್ಯ ಮುಕ್ತಾಯವಾಗುತ್ತದೆ ಎಂದು ಸರ್ಕಾರದವರು ಹೇಳಿದ್ದರು. ಆದರೆ ಆ ಕಾರ್ಯ ಇನ್ನೂ ಆಗಿಲ್ಲ. ಸಾವಿರಾರು ಎಕರೆ ಜಮೀನನ್ನು ಬಂಜರಾಗಿ ಇಟ್ಟು ಅದನ್ನು ಹಾಳುಗೆಡುವಂತಹ ಚಿತ್ರ ಮಾತ್ರ ನಮ್ಮ ಮುಂದೆ ಇದೆ. ಕೆಲವು ಕಡೆ ದೊಡ್ಡ ದೊಡ್ಡ ಆಫೀಸುಗಳ ಕಟ್ಟಡಗಳು ಆಗಿವೆ. ಸಾವಿರಾರು ಮುಡಿ ಭತ್ತವನ್ನು ಬೆಳೆಯುವ 700-800 ಎಕರೆ ಗದ್ದೆಗಳು ಈಗ ಎರಡು ವರ್ಷಗಳಿಂದ ಖಾಲಿಬಿದ್ದಿವೆ. ಸಾಧಾರಣವಾಗಿ ಒಂದು ವರ್ಷಕ್ಕೆ 40 ಸಾವಿರ ಮುಡಿ ಭತ್ತ ನಷ್ಟವಾಗುವಂತಹ ಒಂದು ಚಿತ್ರ ಮಾತ್ರ ಕಾಣುತ್ತದೆ. ಈ ಬಂದರನ್ನು ಕಟ್ಟಬೇಕೆಂದು ಮೊದಲು 1,200 ಎಕರೆ ಜಮೀನನ್ನ ಸರ್ಕಾರ ಸ್ವಾಧೀನಪಡಿಸಿಕೊಂಡರು. ಆದರೆ ಅಲ್ಲಿ ಬಂದರಿಗೆ ಸಂಬಂಧ ಪಟ್ಟ ಯಾವ ಕೆಲಸವೂ ಆಗಿಲ್ಲ. ಈಗ ಮತ್ತೆ 1,500 ಎಕರೆ ಬೇಕೆಂದು ನೋಟೀಸು ಕೊಟ್ಟಿದ್ದಾರೆ.

ಶ್ರೀ ಬಿ. ವಿಠಲ್‌ದಾಸ್‌ಶೆಟ್ಟಿ (ಪುತ್ತೂರು).—ಹಾಗಾದರೆ ಬಂದರು ಬೇಡವೆ ?

ಶ್ರೀ ಪಿ. ವಿ. ಐತಾಳ್.—ಅದಕ್ಕಾಗಿಯೇ 1,200 ಎಕರೆ ಭೂಮಿಯನ್ನು ಬಿಟ್ಟುಕೊಟ್ಟೆವು. ಪರದೇಶಗಳಲ್ಲಿ ಎಂದರೆ ಅಮೇರಿಕಾ ಮತ್ತು ಯೂರೋಪ್ ಮುಂತಾದ ದೇಶಗಳಲ್ಲಿ ಯೋಜನೆಗಳು 5 ವರ್ಷಗಳಲ್ಲಿ ಮುಕ್ತಾಯವಾಗುತ್ತವೆ. 3 ವರ್ಷಗಳನ್ನ ಪ್ಲಾನಿಂಗಿಗೆ ತೆಗೆದುಕೊಳ್ಳುತ್ತಾರೆ. 2 ವರ್ಷಗಳನ್ನ ಎಗ್ಸಿಕ್ಯೂಷನ್ನಿಗೆ ತೆಗೆದುಕೊಳ್ಳುತ್ತಾರೆ ಆದರೆ ನಮ್ಮ ಭಾರತದೇಶದಲ್ಲಿ ಪ್ಲಾನಿಂಗ್ ಮತ್ತು ಎಗ್ಸಿಕ್ಯೂಷನ್ ಎರಡನ್ನೂ ಒಟ್ಟಿಗೆ ತೆಗೆದುಕೊಂಡು ಯೋಜನೆಗಳ ಕೆಲಸಗಳು ಆಗದೆ ಇರುವಂತಹ ಚಿತ್ರವನ್ನ ನಾವು ಇಂದು ನೋಡುತ್ತಿದ್ದೇವೆ ಇದಕ್ಕೆ ಮುಖ್ಯ ಕಾರಣವೇನೆಂದರೆ, ಪರದೇಶಗಳಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನ ಮಾಡುವಂಥಾದ್ದು ಇಂಜಿನಿಯರುಗಳು ಮತ್ತು ತಜ್ಞರುಗಳು. ನಮ್ಮದೇಶದಲ್ಲಿ ದುರ್ದೈವದ ವಶಾತ್ ರಾಜಕೀಯ ಮುಖಂಡರು ಯೋಜನೆಯನ್ನು ಮಾಡುವಂತಹ ತಜ್ಞರಾಗಿದ್ದಾರೆ. ಇದು ನಮ್ಮ ದೇಶದ ದುರ್ದೈವ. ಇದಕ್ಕೆ ಒಂದು ದೊಡ್ಡ ನಿದರ್ಶನವೆಂದರೆ, ಮಂಗಳೂರಿನ ಬಂದರಿನ ವಿಷಯ. ಮೊದಲು ಮಲ್ಪೆಯಲ್ಲಿ ಬಂದರಾಗಬೇಕೆಂದು ತೀರ್ಮಾನಿಸಲಾಗಿತ್ತು. ಅಲ್ಲಿ ಬಂದರಿಗೆ ಬೇಕಾದ ಜಮೀನು ಇತ್ತು. ಕೃಷಿ ಭೂಮಿಯನ್ನ ಅಕ್ವೈರು ಮಾಡಿಕೊಳ್ಳಬೇಕಾದ ಅವಶ್ಯಕತೆಯೂ ಇರಲಿಲ್ಲ. ಆಗ ಮಂಗಳೂರಿನ ಆಳುವ ಪಕ್ಷದ ಧುರೀಣರು ಏನುಮಾಡಿದರು ಎಂದರೆ ಮಲ್ಪೆಯಲ್ಲಿ ಬಂದರಾಗಬೇಕೆಂದಿದ್ದುದನ್ನ ತಪ್ಪಿಸಿ ಮಂಗಳೂರಿನಲ್ಲಿ ಬಂದರಾಗಬೇಕೆಂದು ಮಾಡಿದರು. ಆ ನಂತರ ಮಂಗಳೂರಿನಲ್ಲಿ ಬಂದರು ನಿರ್ಮಾಣಕ್ಕೆ ಎಲ್ಲಾ ಯೋಜನೆಗಳೂ ಸಿದ್ಧವಾದುವು. ಆದರೆ ಇದರಿಂದ ಆಳುವ ಪಕ್ಷದವರ ದೊಡ್ಡದೊಡ್ಡ ಮನೆಗಳು, ಗೋಡೌನ್‌ಗಳು ಆಸ್ತಿಪಾಸ್ತಿಗಳು ಹೋಗುತ್ತವೆ ಎಂಬುದನ್ನ ಅರಿತು ಕೆಲವು ಕಾಂಗ್ರೆಸ್ಸಿನವರು ಮಂಗಳೂರು ಬಂದರು ನಿವೇಶನವನ್ನು 7 ಮೈಲಿ

ದೂರದಲ್ಲಿರುವ ಪಣಂಬೂರಿಗೆ ವರ್ಗಾಯಿಸುವಂತೆ ಮಾಡಿದರು. ಅಲ್ಲಿನ "ವೆಂಕಟಗಳು" ಮನೆ ಮಠವನ್ನು ಕಳೆದುಕೊಂಡರೆ ಪರವಾಯಿಲ್ಲವಂತೆ. ಮಂಗಳೂರಿನಲ್ಲಿಯೇ ಬಂದರು ಮಾಡಿದ್ದರೆ ಇಷ್ಟುಹೊತ್ತಿಗೆ ಬಂದರು ಆಗುತ್ತಿತ್ತು. ಆದರೆ ಈಗ ಆ ಯೋಜನೆ ಇನ್ನೂ ಹಾಗೆಯೇ ನಿಂತಿದೆ. ಮೊದಲು ಮಂಗಳೂರು ಬಂದರನ್ನೇ ಅಭಿವೃದ್ಧಿ ಮಾಡಬೇಕೆಂದು ತೀರ್ಮಾನಮಾಡಿ ಅದರ ಬಗ್ಗೆ ಒಂದು ಗೆಜಿಟ್ ನೋಟಿಫಿಕೇಸನ್ ಸಹ ಹೊರಡಿಸಿದ್ದರು. ನಂತರ ಅಲ್ಲಿರುವ ಜಾಗವನ್ನು 20 ಅಡಿ ಅಗೆದರೆ ಕಲ್ಲುಬಂಡೆ ಸಿಗುತ್ತದೆಂದು ನೆಪ ಹೇಳಿ 7 ಮೈಲಿ ದೂರದಲ್ಲಿರುವ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದರು 10-20 ಅಡಿ ಬಂಡೆಕಲ್ಲನ್ನು ಒಡೆಯುವುದು ಇವರಿಗೆ ಕಷ್ಟವಾಯಿತು, ಆದರೆ ಸಾವಿರಾರು ಜನರ ಆಸ್ತಿಪಾಸ್ತಿಗಳನ್ನು ಒಡೆಯುವುದು ಇವರಿಗೆ ಕಷ್ಟವಾಗಲಿಲ್ಲ. ಆ 7 ಮೈಲಿ ದೂರದಲ್ಲಿ ವಾಸಮಾಡುತ್ತಿದ್ದ ಜನರಿಗೆ ಕೇವಲ 15 ದಿವಸದ ನೋಟೀಸ್ ಕೊಟ್ಟು ಕೂಡಲೆ ಮನೆ ಖಾಲಿ ಮಾಡಬೇಕೆಂದರು. ಕೆಲವರು ಮತ್ತೆ ಕೆಲವು ದಿನಗಳ ಕಾಲಾವಕಾಶವನ್ನು ಕೇಳಿದ್ದಕ್ಕೆ ಪೋಲಿಸರನ್ನು ಕರೆಸಿ ಅವರನ್ನು ಎಳೆಸಿಹಾಕಿದರು. ಅಲ್ಲಿ ಗೌಡ ಸರಸ್ವತರ ಒಂದು ಸಂಸಾರವನ್ನು ಹೊರಕ್ಕೆ ಹಾಕಿಸಿದರು. ಆ ಮನೆಯ ಹೆಂಗಸು ಕಾಯಿಲೆ ಇದುದ್ದರಿಂದ ಮೂರು ದಿನ ಕಾಲಾವಕಾಶ ಕೇಳಿದರು. ಸರ್ಕಾರದವರು ಅವರ ಮಾತನ್ನು ಕೇಳದೆ ಹೊರಕ್ಕೆ ಹಾಕಿಸಿದರು. ಆ ಹೆಂಗಸು ಮೂರನೇ ದಿನವೇ ಸತ್ತುಹೋದಳು. ಜನರ ಕಣ್ಣೀರನ್ನು ಸಹ ಲೆಕ್ಕಿಸದೆ ಬಂದರನ್ನು ಕಟ್ಟಬೇಕೆಂದು ಸಾವಿರಾರು ಮನೆಗಳನ್ನು ಕೆಡವಿದರು. ಆ ಮನೆಗಳನ್ನು ಕೆಡವಿ ಎರಡು ವರ್ಷವಾದರೂ ಸಹ ಅಲ್ಲಿ ಬಂದರನ್ನು ಕಟ್ಟದೆ ಆ ಜಾಗವನ್ನು ಬಂಜರನ್ನಾಗಿ ಮಾಡಿದ್ದಾರೆ. ನಮ್ಮ ಈಗಿನ ಸರ್ಕಾರದವರಿಗೆ ದೇವಸ್ಥಾನ, ಮಸೀದಿ ಎಂದರೆ ಲಕ್ಷ್ಯವೇ ಇಲ್ಲ. ಹಿಂದೆ ಬ್ರಿಟಿಷರು ಸಹ ಈ ರೀತಿ ದೇವಸ್ಥಾನ ಮಸೀದಿಗಳನ್ನು ಕೆಡವುತ್ತಿರಲಿಲ್ಲವೆಂದು ಕಾಣುತ್ತದೆ. ಅಲ್ಲಿರುವ ವೀರಭದ್ರ ದೇವಸ್ಥಾನವನ್ನು ಮತ್ತು ಎರಡು ಮಸೀದಿಗಳನ್ನು ಕೆಡವಿಸಿದ್ದಾರೆ. ಮತ್ತೆ ಒಂದು ಚರ್ಚನ್ನು ಕೆಡವಲು ನೋಟೀಸನ್ನು ಕೊಟ್ಟಿದ್ದಾರೆ.

ಶ್ರೀ ವಿಠಲದಾಸ್ ಶೆಟ್ಟಿ.—10 ಸಾವಿರ ರೂಪಾಯಿ ಬೆಲೆ ಬಾಳುವ ಮಸೀದಿಯನ್ನು ಕೆಡವಿದರೂ ಸಹ ಮತ್ತೆ 25 ಸಾವಿರ ರೂಪಾಯಿನ ಹೊಸ ಮಸೀದಿಯನ್ನು ಕಟ್ಟಿಸಿಕೊಟ್ಟಿದ್ದಾರೆ.

ಶ್ರೀ ಪಿ. ಪಿ. ಐತಾಳ.—ಹಳೇಯ ಮಸೀದಿ, ಹಳೇಯ ದೇವಸ್ಥಾನದಮೇಲೆ ಜನರಿಗೆ ಇರುವ ಪ್ರೀತಿ, ನೀವು ಮತ್ತೆ ಒಂದು ಲಕ್ಷ ರೂಪಾಯಿ ಕೊಟ್ಟು ಖರ್ಚುಮಾಡಿ ಹೊಸದನ್ನು ಕಟ್ಟಿಸಿ ಕೊಟ್ಟರೂ ಸಹ ಬರುವುದಿಲ್ಲ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ಸಂಬಂಧಪಟ್ಟವರ ಒಪ್ಪಿಗೆ ಪಡೆದೇ ಹಳೇಯದನ್ನು ಕೆಡವಿಸಿ ಹೊಸದನ್ನು ಕಟ್ಟಿಸಿರುವುದು.

ಶ್ರೀ ಪಿ. ವಿ. ಐತಾಳ್.—ಬ್ರಿಟಿಷರ ಕಾಲದಲ್ಲಿ ಅನೇಕ ಯೋಜನೆಗಳು ಆದುವು. ಆದರೆ ಅವರು ಯಾವ ಮಸೀದಿಯನ್ನೂ ಕೆಡವಲಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಆ ಒಂದು ಶಾಪದಿಂದಲೇ ಚುನಾವಣೆಯಲ್ಲಿ ಕಾಂಗ್ರೆಸ್ ಸೋತುಹೋಯಿತು.

ಶ್ರೀ ಸಿ. ಎಂ. ಚುರ್ಚಿಹಾಳ ಮಠ.—ಭೂಮಿ ಮುಳುಗಡೆಯಾಗದೆ ಬಂದರು ಕಟ್ಟಲು ಸಾಧ್ಯವೇ?

ಶ್ರೀ ಪಿ. ವಿ. ಐತಾಳ.—ಈ ರೀತಿಯ ಬಂದರನ್ನು ಬೇಕಾದರೆ ಬೆಂಗಳೂರಿನಲ್ಲೂ ಸಹ ಮಾಡಬಹುದಾಗಿತ್ತು.

ಶ್ರೀ ಎಚ್. ಸಿದ್ದವೀರಪ್ಪ.—ದೊಡ್ಡ ದೊಡ್ಡ ರೋಡುಗಳನ್ನು ಮಾಡುವಾಗ, ಇವರ ಪಾರ್ಟಿಯವರು ಏನಾದರು ಒಂದು ಕಡೆ ಪೆಟ್ರೋಲ್ ಬಂಕ್ ಇಟ್ಟಿದ್ದರೆ ಅಲ್ಲಿಯವರೆಗೂ ಆ ರೋಡನ್ನು ವಿಸ್ತರಿಸುತ್ತಾರೆ.

ಅಧ್ಯಕ್ಷರು.—ಕುದುರೆಮುಖದ ಹತ್ತಿರ ಬೇಕಾದರೂ ಒಂದು ಬಂದರನ್ನು ನಿರ್ಮಾಣ ಮಾಡಬಹುದು.

ಶ್ರೀ ಪಿ. ವಿ. ಐತಾಳ್—ಮೊದಲು ಮಲ್ಪೆಯಲ್ಲಿ ಬಂದರನ್ನು ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡವರು, ಆ ನಂತರ ಅಲ್ಲಿ ಕಟ್ಟಿದರೆ ತೊಂದರೆಯಾಗುತ್ತದೆಂದು, ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ ಎಂದು ತಿಳಿಸಿದರು. ಅದು ಏನು ತಜ್ಞರ ಅಭಿಪ್ರಾಯವೋ ಅಥವಾ ರಾಜಕೀಯ ಧುರೀಣರ ಸಲಹೆಯೋ ಗೊತ್ತಾಗಲಿಲ್ಲ.

ಶ್ರೀ ಆರ್. ಎಂ. ಪಾಟೀಲ್ (ನಗರಾಡಳಿತ ಶಾಖೆಯ ಮಂತ್ರಿಗಳು).—ತಾವು ಸಹ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಮಾತನಾಡುತ್ತಿರುವಂತೆ ಕಾಣುತ್ತದೆ.

ಶ್ರೀ ಪಿ. ವಿ. ಐತಾಳ್.—ಮೊದಲು ಬಂದರನ್ನು ಕಟ್ಟುವುದಕ್ಕೆ 1,200 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡರು. ಈಗ ಮತ್ತೆ 1,500 ಎಕರೆ ಬೇಕೆಂದು ಕೇಳುತ್ತಿದ್ದಾರೆ. ಕಲ್ಕತ್ತಾ ಬಂದರು ಕೇವಲ 800 ಎಕರೆ ಜಮೀನನ್ನು ಒಳಗೊಂಡಿದೆ. ಇಡೀ ಇಂಡಿಯಾ ದೇಶದಲ್ಲೇ ಹೆಸರುವಾಸಿಯಾದ ಬೊಂಬಾಯಿ ಬಂದರು ಕೇವಲ 400 ಎಕರೆ ಸುತ್ತಳತೆಯಲ್ಲಿದೆ. ಆದರೆ ಈ ಮಂಗಳೂರು ಬಂದರಿನ ಉದ್ಧಾರಕ್ಕಾಗಿ ಈಗಾಗಲೇ 1'200 ಎಕರೆ ಜಮೀನನ್ನು ಬಿಟ್ಟುಕೊಟ್ಟಿದ್ದರೂ ಸಹ ಮತ್ತೆ 1,500 ಎಕರೆ ಜಮೀನನ್ನು ಕೇಳುತ್ತಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-೨).—ನಾವು ಹಣ ಕೊಟ್ಟು ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆ.

ಶ್ರೀ ಪಿ. ವಿ. ಐತಾಳ್.—ನೀವು ಎಷ್ಟು ಹಣ ಕೊಡುತ್ತಿದ್ದೀರಿ ಎಂಬುದು ಗೊತ್ತಿದೆ. ಅಧ್ಯಕ್ಷರು ಹೇಳಿದ ರೀತಿ ತಾವು ಪಣಂಬೂರಿನ ಜನರನ್ನು ವೆಂಕುಬಗಳೆಂದು ತಿಳಿದಿರುವಂತೆ ಕಾಣುತ್ತಿದೆ.

ಅಧ್ಯಕ್ಷರು.—ನಾನು ಆ ಗಾದೆಯನ್ನು ಹೇಳಲಿಲ್ಲ.

ಶ್ರೀ ಪಿ. ವಿ. ಐತಾಳ್.—ಹೌದು ನಾನೇ ಹೇಳಿದ್ದು, ಈಗ ಮತ್ತೆ 1,500 ಎಕರೆ ಜಮೀನನ್ನು ಕೇಳುತ್ತಿರುವುದು ನೋಡಿದರೆ, ಮುಂದೆ ಬೇಕಾದಾಗ ತಮ್ಮವರಿಗೆ ಕಾರ್ಖಾನೆಗಳನ್ನು ಕಟ್ಟಲು ಆ ಜಮೀನನ್ನು ಕೊಡಬಹುದೆಂದು ಕಾಣುತ್ತದೆ. ಜಮೀನನ್ನು ಕಳೆದುಕೊಂಡ ಸಾವಿರಾರು ಜನರು ಮಂಗಳೂರಿಗೆ ಬಂದು ಉಪವಾಸ ಸತ್ಯಾಗ್ರಹ ಮಾಡಿದರು. 5-5 ಜನರಂತೆ ಗುಂಪು ಮಾಡಿಕೊಂಡು 91 ದಿವಸ ಪಣಂಬೂರಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು. ಈ ವಿಚಾರವಾಗಿ ಕೆಲವರು ದೆಹಲಿಗೆ ಹೋಗಿ ಬಂದರು. ಎಲ್ಲಿಗೆ ಹೋಗಿ ಕೇಳಿಕೊಂಡರೂ ಸಹ ತಜ್ಞರು ಹೇಳಿದ ರೀತಿ ಮಾಡುತ್ತಿದ್ದೇವೆಂದು ಹೇಳಿದರು.

ಅಧ್ಯಕ್ಷರು.—ಜಾಗ್ರತೆ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅವರ ಜಿಲ್ಲೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಪಿ. ವಿ. ಐತಾಳ್.—ಈ ರೀತಿ ಸತತವಾಗಿ 96 ದಿವಸ ಹೋರಾಟ ನಡೆಸಿದಮೇಲೆ 700 ಎಕರೆ ಜಮೀನನ್ನು ಬಿಟ್ಟುಕೊಟ್ಟರು. ಹಾಗಾದರೆ ಉದ್ದೇಶ ಒಳ್ಳೆಯದು ಇರಲಿಲ್ಲ ಎಂದು ಇದರಲ್ಲಿ ಅರ್ಥವಾಗುತ್ತದೆ. ಈಗ 1,200 ಎಕರೆ ಅಲ್ಲದೆ 700 ಎಕರೆಯಿಂದಲೂ ಜನರನ್ನು ಓಡಿಸಬೇಕೆಂದು ಎಲೆಕ್ಷನ್ ಆದನಂತರ ಕಳೆದ 2—3 ದಿವಸಗಳಿಂದ ನೋಟೀಸು ಬರುತ್ತಾ ಇದೆ. ಎಲ್ಲಿ ಡಾಕ್ ಆಗಬೇಕೋ ಬರ್ಥ್ ಆಗಬೇಕೋ ಅಲ್ಲಿ ಒಂದು ಬೋರ್ಡ್ ಇದೆ. ಸರ್ವೆ ನಂ. 30 ರಲ್ಲಿ ಶೆಟ್ಟೀಸ್ ಐಸ್‌ಕ್ರೀಂ ಬಳಿ ಡಾಕ್ ಆಗಬೇಕು ಎಂದು ಬೋರ್ಡ್ ಇದೆ.

Mr. SPEAKER.—The Hon'ble Member should not bring in names because they are not here to defend themselves.

ಶ್ರೀ ಪಿ. ವಿ. ಐತಾಳ್.—ಸರ್ವೆ ನಂ. 30 ರಲ್ಲಿ ಡಾಕ್ ಆಗಬೇಕು ಎಂಬ ಬೋರ್ಡ್ ಇದೆ. ಫೈನಲ್ ಡಿಕ್ಲರೇಷನ್‌ನಲ್ಲಿ ಈ ಜಾಗವನ್ನು ಸಂಪೂರ್ಣವಾಗಿ ಬಿಟ್ಟಿದ್ದೀರಿ. ನಾನು ಆರೋಪಣೆ ಮಾಡುತ್ತಾ ಇಲ್ಲ. ಈ ಐಸ್‌ಕ್ರೀಂ ಫ್ಯಾಕ್ಟರಿ ಓಪನ್ ಮಾಡಿದ್ದು ಮಾನ್ಯ ಮುಖ್ಯ ಮಂತ್ರಿಗಳು. ಅದು ಆಕ್ಸಿಡೆಂಟಲ್ ಆಗಿ ಇರಬಹುದು. ಫೈನಲ್ ಡಿಕ್ಲರೇಷನ್‌ನಲ್ಲಿ ಈ 8 ಎಕರೆ ಬಿಟ್ಟುಬಿಟ್ಟಿದೆ. ಆದರೆ ಬಾಕಿ ಪಾಪದ ರೈತರನ್ನು ಓಡಿಸುತ್ತಿದ್ದೀರಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಕಾಂಗ್ರೆಸ್ ಫಂಡ್‌ಗೆ ದುಡ್ಡು ಕೊಟ್ಟಿದ್ದಾರೆ. ಅದು ನೀಡ್‌ಲೆಸ್ ಇನ್‌ಸಿನಿಯೇಷನ್.

ಶ್ರೀ ಪಿ. ವಿ. ಐತಾಳ.—ನಾನು ತಮ್ಮಲ್ಲಿ ಕೇಳುವುದೇನೆಂದರೆ ಮಾನ್ಯ ಅಧ್ಯಕ್ಷರು ಅಸೆಂಬ್ಲಿಯ ಕೆಲವು ಸದಸ್ಯರನ್ನು ಕಳುಹಿಸಿ ಈ 700 ಎಕರೆಯಿಂದ ಪುನಃ ರೈತರನ್ನು ಓಡಿಸುವಂತೆ ಮಾಡುವುದು ಬೇಡ. ರೈತರ ಗುಡಿಸಲುಗಳನ್ನು ಪುಡಿ ಮಾಡುವುದು, ದೇವಸ್ಥಾನ, ಮಸೀದಿ ಏನು ಇದೆ ಅದನ್ನು ಕಿತ್ತು ಹಾಕುವುದು ಬೇಡ. ಈ ಮಾನ್ಯ ಸಭೆಯು ಕೆಲವು ಸದಸ್ಯರನ್ನು ಅಲ್ಲಿಗೆ ಕಳುಹಿಸಿ ಅವರು ರಿಪೋರ್ಟ್ ಮಾಡುವ ತನಕ ರೈತರನ್ನು ಎಬ್ಬಿಸಿ ಓಡಿಸಬಾರದು ಎಂದು ಕೇಳುತ್ತೇನೆ.

Mr. SPEAKER.—The member is having the court in his mind. I have no jurisdiction to call for a report. I have no jurisdiction to stop acquisition.

ಶ್ರೀ ಬಿ. ವಿಠಲದಾಸಶೆಟ್ಟಿ.—ರೈತರನ್ನು ಎಬ್ಬಿಸುವುದಿಲ್ಲ ಎಂದು ಎಲೆಕ್ಷನ್‌ನಲ್ಲಿ ಪ್ರಾಮಿಸ್ ಮಾಡಿದ್ದೀರಾ ?

ಶ್ರೀ ಪಿ. ವಿ. ಐತಾಳ.—ಕಾಂಗ್ರೆಸ್ ಅಭ್ಯರ್ಥಿಯನ್ನು ಎಲೆಕ್ಷನ್ ಮಾಡಿದರೆ ಎಬ್ಬಿಸದ ಹಾಗೆ ನೀವು ಪ್ರಾಮಿಸ್ ಮಾಡಿದ್ದೀರಾ ? ಬೇರೆ ಕಡೆ ದೊಡ್ಡ ಪ್ರಾಜೆಕ್ಟ್ ಆಗುವ ಸಂದರ್ಭದಲ್ಲಿ ಮೊದಲಾಗಿ ಹೊರಗೆ ಹೋಗಿರುವ ಜನರಿಗೆ ಬೇಕಾದ ಆಲ್ಟರ್ನೇಟಿವ್ ಸೈಟನ್ನು ಸೆಲೆಕ್ಟ್ ಮಾಡಿ, ಅಲ್ಲಿಗೆ ಬೇಕಾದ ನೀರಿನ ಅನುಕೂಲತೆ, ಲೈಟು ಮುಂತಾದವುಗಳನ್ನು ಒದಗಿಸಿ ಕಟ್ಟಡ ಕಟ್ಟುವುದಕ್ಕೆ ಕ್ಲೈಮ್ ಕೊಟ್ಟು ಅಲ್ಲಿನ ಜನಗಳನ್ನು ಎಬ್ಬಿಸುವ ಪದ್ಧತಿ ಇದೆ. ಇಲ್ಲಿ ಮೊದಲು ಕುತ್ತಿಗೆಗೆ ಕೈಹಾಕಿ ಹೊರಗೆ ಕಳುಹಿಸುತ್ತೀರಿ. ಅವರು ಕೂತುಕೊಳ್ಳುವುದು ಎಲ್ಲಿ, ಹೋಗುವುದು ಎಲ್ಲಿ? 15 ದಿವಸದೊಳಗೆ ಮನೆ ಬಿಟ್ಟು ಹೋಗಿ ಇಲ್ಲದಿದ್ದರೆ ಪೋಲೀಸ್ ತರುತ್ತೇವೆ ಎಂದು ಹೇಳುತ್ತಾರೆ ಸರ್ಕಾರ ಈ ರೀತಿ ಅನ್ಯಾಯ ಮಾಡುವುದು ಸರಿಯೇ ಎಂದು ನಾನು ಕೇಳುತ್ತೇನೆ. ಈಗ ಇದೂ ಅಲ್ಲದೆ ಬಂದರಿನ ಸುತ್ತ 2,500 ಎಕರೆ ಕೃಷಿ ಭೂಮಿಯನ್ನು ಕೈಗಾರಿಕೆಗೋಸ್ಕರ ಬೇಕು ಎಂದು ನೋಟಿಫಿಕೇಷನ್ ಮಾಡಿದ್ದೀರಿ. ಸೂರತ್‌ಕಲ್ ಕ್ಷೇತ್ರದಲ್ಲಿ 10–12 ಗ್ರಾಮಗಳನ್ನು ಪುಡಿ ಮಾಡಿ ದೊಡ್ಡ ಕೈಗಾರಿಕೆ ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಅನ್ಯಾಯವಾಗಿದೆ. ಆದರೆ ಯಾವ ಕೈಗಾರಿಕೆ ಎಂದು ತೀರ್ಮಾನವಾಗಿಲ್ಲ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಏರಿಯಾ ಆಕ್ಟ್ ಇದೆ. ಅದರಂತೆ ಒಂದು ಬೋರ್ಡ್ ತಯಾರು ಮಾಡುತ್ತಿದ್ದೀರಿ, ಆದರೆ ಕೈಗಾರಿಕೆ ಯಾವುದು ಎಂದು ನಿರ್ಧಾರ ಮಾಡಿಲ್ಲ. ಈ ರೀತಿ ಅನ್ಯಾಯ ಮಾಡುವುದು ಸರಿಯಲ್ಲ.

ಎರಡನೆಯದಾಗಿ ಮಾರಾಟ ಕರವನ್ನು ಶ್ರೀಮಾನ್ ರಾಜಗೋಪಾಲಚಾರ್ಯರವರು ಮಾಡಿದಾಗ ಕಾಮಧೇನು ಎಂದು ಹೇಳಿದ್ದಾರೆ. ಅದು ಸರ್ಕಾರಕ್ಕೆ ಬೇಕಾದ ಎಲ್ಲಾ ಹಣವನ್ನು ವಸೂಲ್ಮಾಡಿ ಕೊಡುತ್ತದೆ. ನಮ್ಮ ಮೈಸೂರು ಸೇಲ್ಸ್‌ಟ್ಯಾಕ್ಸ್ ಏನು ಆಗಿದೆ ಎಂದರೆ, ಆ ಆಕ್ಟ್ ಮೂಲಕ ಕಾಮಧೇನುವಿನ ಹಾಲನ್ನೆಲ್ಲಾ ಕರೆದು ಆಯಿತು ಈಗ ರಕ್ತವನ್ನು ಕರೆಯುತ್ತಾ ಇದ್ದೀರಿ. ಈ ರಾಜ್ಯದಲ್ಲಿ ಉಣ್ಣುವ ಅನ್ನದ ಮೇಲೆ ಬೇರೆ ರಾಜ್ಯದಲ್ಲಿ ಇಲ್ಲದಿರುವ ಟ್ಯಾಕ್ಸನ್ನು ಹಾಕಿದ್ದೀರಿ. ಮೊದಲು ಸಾವಿರಕ್ಕೆ 5 ರೂಪಾಯಿನಂತೆ ಲೈಸನ್ಸ್ ಫೀಸ್ ಹಾಕಿದ್ದೀರಿ. ಉಣ್ಣುವ ಅಕ್ಕಿಗೆ 1 ಪರ್ಸೆಂಟಿನಿಂದ $1\frac{1}{2}$ ಪರ್ಸೆಂಟು ಮಾಡಿರುವುದು ಅಲ್ಲದೆ ಮಾರಾಟಕ್ಕೆ ಬಹುಮುಖವಾದ ತೆರಿಗೆಯನ್ನು ಹಾಕಿದ್ದೀರಿ. ಬಡವನ ಬಾಯಿಗೆ ಅನ್ನ ಬರುವಾಗ ಅದು 6 ಪರ್ಸೆಂಟು ಆಗುತ್ತದೆ. ಆಹಾರದ ಸಾಮಗ್ರಿ ಬೆಲೆ ಏರುತ್ತಾ ಇದ್ದು ಬಡ ನೌಕರರು ಒಂದು ಮುಡಿ ಅಕ್ಕಿ ತರಬೇಕಾದರೆ 40–50 ರೂಪಾಯಿ ಕೊಡಬೇಕಾಗುತ್ತದೆ. ಅದಕ್ಕೆ ಮಾರಾಟ ತೆರಿಗೆ 5—6 ರೂಪಾಯಿ ಕೊಡಬೇಕು ಎಂದು ಹೇಳಿದರೆ ಹೇಗೆ ?

Sri RAMAKRISHNA HEGDE (Minister for Finance).—I wou'd like to remind him that the Mysore Sales Tax Act has not been passed after the Elections and the exsiting Act has been appoved by this Legislature and therefore there is no point in bringing in that Act for criticism. He was not a Member at that time and that does not help.

Sri P. V. AITHALA.—I was just pointing out to the Hon'ble Minister that the rate of tax on foodgrains was increased from 1 per cent to $1\frac{1}{2}$ per cent in 1966. If the Hon'ble Minister would look to Act 7 of 1966 and 3 of 1966 he will find that the rate of tax on foodgrains including rice, wheat and other things was enhanced from 1 per cent to $1\frac{1}{2}$ per cent.

Sri RAMAKRISANA HEGDE.—What I mean to say is that the Government has not taken any action in addition to what has been approved by the Legislature. Therefore it dose not provide a fresh point for criticism. The whole Act and the rules have been approved by this House.

ಶ್ರೀ ಪಿ. ವಿ. ಐತಾಳ.—ತಮಗೆ ಮೆಜಾರಿಟಿ ಇದ್ದ ಕಾರಣ ಮಾಡಿದ್ದೀರಿ. ಅದು ಮಾಡುವುದು ಸರಿಯಲ್ಲ.

Sri H. SIDDAVEERAPPA.—The Hon'ble Member is appealing to reconsider it.

Mr. SPEAKER.—My difficulty is to understand what is in the mind of the Member what he has expressed and what is going to be said hereafter.

ಶ್ರೀ ಪಿ. ವಿ. ಐತಾಳ್.—ಎಲ್ಲಾ ಸಾಮಾನುಗಳಿಗೂ ಒಂದಕ್ಕೆ ನಾಲ್ಕು ಪಾಲು ಟ್ಯಾಕ್ಸ್ ಜಾಸ್ತಿ ಮಾಡುತ್ತಾ ಬಂದಿದ್ದೀರಿ. ಒಂದು ಕುಟುಂಬಕ್ಕೆ ಏನೇನು ಬೇಕೋ ಅವಕ್ಕೆಲ್ಲಾ 6 ತಿಂಗಳಿಗೆ ಒಂದು ಸಲ ವರ್ಷಕ್ಕೆ ಒಂದು ಸಲ ರೇಟ್ ಆಫ್ ಟ್ಯಾಕ್ಸ್ ಜಾಸ್ತಿ ಮಾಡುತ್ತಾ ಹೋಗಿದ್ದೀರಿ. ಇದು ಈಗ ಕಾಮಧೇನು ಹಾಲು ಕರೆಯುತ್ತಾ ಇಲ್ಲ. ರಕ್ತ ಕರೆಯುವ ಸ್ಥಿತಿಯಲ್ಲಿದೆ ಇದರ ಜೊತೆಗೆ ಪೆನಾಲ್ಟಿ ಬೇರೆ. ಬಡ ವ್ಯಾಪಾರಿ ಒಂದು ತಿಂಗಳಿಗೆ ಟ್ಯಾಕ್ಸ್ ಕೊಡುವುದಕ್ಕೆ ತಗಪಿದ್ದರೆ ಎಷ್ಟು ಬಡ್ಡಿಯನ್ನು ತೆಗೆದುಕೊಳ್ಳುವುದು ? ಅಂಗಡಿಯ ಬಾಗಿಲು ತೆರೆದರೆ ಮಾರ್ವಾಡಿ ಬಡ್ಡಿಯಂತೆ 30 ಪರ್ಸೆಂಟು ಬಡ್ಡಿಯನ್ನು ವಸೂಲ್ಮಾಡುತ್ತಿದ್ದೀರಿ. ಖಾಸಗಿಯವರು 10—12 ಪರ್ಸೆಂಟು ಬಡ್ಡಿ ಜಾಸ್ತಿ ತೆಗೆದರೆ ಅದು ಅನ್‌ಕಾಂಶನೇಬಲ್ ರೇಟು. ಇದಕ್ಕೆ ಕೋರ್ಟ್‌ನಲ್ಲಿ ಡಿಕ್ರಿ ಕೊಡುವುದಿಲ್ಲ ಬಡವರ ಸಹಾಯಕ್ಕೆ ಇರುವಂಥ ಸರ್ಕಾರ 30 ಪರ್ಸೆಂಟು ಬಡ್ಡಿಯನ್ನು ತೆಗೆದುಕೊಂಡು ಬಡ ವ್ಯಾಪಾರಸ್ಥರ ಮನೆಯನ್ನು ಜಪ್ತಿ ಮಾಡಿ ವಸೂಲು ಮಾಡುತ್ತಾ ಇದ್ದೀರಿ. ಇದು ಸರಿಯೇ? ಮೊದಲು 5 ರೂಪಾಯಿ ಕೊಟ್ಟರೆ ಸಾಕಾಗಿತ್ತು. ಈಗ 1966ನೇ ಇಸವಿಯಲ್ಲಿ ಅಂಗಡಿ ಬಾಗಿಲು ತೆಗೆದರೆ ತಿಂಗಳಿಗೆ 15 ರೂಪಾಯಿ ಕೊಡಬೇಕು. ಇನ್ನು ಸೆಕ್ಷನ್ 18A ಇಂಟ್ರಡ್ಯೂಸ್ ಮಾಡಿದ್ದೀರಿ. ಅದರ ಪ್ರಕಾರ ಹಿಂದಿನಿಂದಲೂ ದಂಡ ಕೊಡಬೇಕಾಗಿದೆ.

Mr. SPEAKER.—Is the member finding fault now with the Legislature? Statute has been passed.

ಶ್ರೀ. ಪಿ. ವಿ. ಐತಾಳ್.—ಇದರ ಬಗ್ಗೆ ತಿದ್ದುಪಡಿ ಮಾಡಬೇಕು. ಬಹಳ ಅನ್ಯಾಯವಾಗಿದೆ.

ಅಧ್ಯಕ್ಷರು.—ಅಲ್ಟ್ರಾವಾಯರ್ಸ್ (ultra vires) ಎಂದು ಹೇಳುತ್ತೀರಾ ಅಥವಾ ಸರಿಯಿಲ್ಲ ಎಂದು ಹೇಳುತ್ತೀರಾ ?

ಶ್ರೀ ಪಿ. ವಿ. ಐತಾಳ್.—ಅದು ಸರಿಯಿಲ್ಲ, ಅಕ್ರಮವಾಗಿದೆ. ಅದನ್ನು ತಿದ್ದುಪಡಿ ಮಾಡುವುದು ಅಗತ್ಯ ಎಂದು ಹೇಳುತ್ತೇನೆ. ಈ ಹೊತ್ತಿನಿಂದ ಒಂದು ಕೆಲಸ ಮಾಡಿದರೆ ಪೆನಾಲ್ಟಿ ಕೊಡಿ ಎಂದು ಹೇಳಬಹುದು. 5 ವರ್ಷದ ಹಿಂದಿನಿಂದಲೂ ಕೊಡಿ ಎಂದು ಹೇಳುವುದು ಸರಿಯಿಲ್ಲ, ತಾವು ಸಹ ದೊಡ್ಡ ಲಾಯರ್ ಆಗಿದ್ದವರು. ಆದ್ದರಿಂದ ಸೆಕ್ಷನ್ 13A ಯಿಂದ ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಇದನ್ನು ತಾವು ಆಲೋಚನೆ ಮಾಡಬೇಕಾಗಿದೆ.

ಸ್ವಾಮಿ, ಇಲ್ಲಿ ಒಂದು ಕಾನೂನನ್ನು ತಾವು ಮಾಡಿದ್ದೀರಿ. ಇವೊತ್ತು ನಾನು ಒಬ್ಬ ಎಂ. ಎಲ್. ಎ. ಆಗಿದ್ದೇನೆ, ಹಾಗೂ ಒಬ್ಬ ಲಾಯರಾಗಿಯೂ ಇದ್ದೇನೆ. ನನ್ನ ಮೇಲೆ ಒಬ್ಬರು ಸುಮಾರು 250 ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಆಫೀಸರು ಟ್ಯಾಕ್ಸನ್ನು ವಿಧಿಸಿದಾಗ ಒಂದು ಲಕ್ಷದಷ್ಟು ಕೊಡಬೇಕೆಂದು ಮಾಡಿದರೆ ಅದು ನ್ಯಾಯವಾಗಿರುವುದೇ? ಅದನ್ನೂ ಇದರ ಮೇಲೆ ನಾವು ಅಪೀಲು ಮಾಡಲು ಮೊದಲಿಗೆ ಅವಕಾಶವಿರುವುದಿಲ್ಲ. ಮೊದಲು ಒಂದು ಲಕ್ಷ ಟ್ಯಾಕ್ಸನ್ನು ಸರಕಾರಕ್ಕೆ ತುಂಬಿ ಆ ನಂತರ ನಾವು ಅಪೀಲನ್ನು ಹಾಕಬೇಕಾಗಿ ಬಂದಿದೆ. ಇಲ್ಲವೇ ಇದ್ದರೆ ಅಪೀಲು ಮಾಡುವುದಕ್ಕೆ ಅವಕಾಶವೇ ಇಲ್ಲ.

12-00 NOON.

ಇನ್ನು ನಾನು ಆರೇಳು ವರ್ಷಗಳ ಕಾಲ ಎನ್. ಜಿ. ಓ. ಆಗಿದ್ದುದರಿಂದ ನನಗೂ ಅವರ ಕಷ್ಟಗಳೇನು ಎನ್ನುವುದು ಗೊತ್ತಿದೆ. ಈಚೆಗೆ ನಮ್ಮ ಸರಕಾರದ ಎನ್. ಜಿ. ಓ.ಗಳು ಗೈರುಹಾಜರಿದ್ದರೆಂದು ಅವರಿಗೆ 5ನೇ ತಾರೀಖು, 24 ಹಾಗೂ 25ನೇ ತಾರೀಖು ಅವರುಗಳಿಗೆ ಸಂಬಳ ಕೊಡಕೂಡದು ಎಂದು ಕೆಲವು ಕಡೆಗಳಲ್ಲಿ ಅಧಿಕಾರಿಗಳು ಮಾಡುತ್ತಿದ್ದಾರೆ. ಇದು ಸರಿಯಿಲ್ಲ. ಇತರ ರಾಜ್ಯಗಳಲ್ಲಿ ಅಲ್ಲಿನ ನೌಕರರುಗಳಿಗೆ ಇದನ್ನು ರಜಾ ಎಂದು ಪರಿಗಣಿಸಿ ಅವರಿಗೇನೂ ತೊಂದರೆ ಕೊಡಲಿಲ್ಲ, ಇಲ್ಲೇಕೆ ಕೊಡುತ್ತಿದ್ದಾರೋ ತಿಳಿಯದಾಗಿದೆ. ಅದರಲ್ಲೂ ನೂರು ಇನ್ನೂರು ಸಂಬಳ ಪಡೆಯುತ್ತಿರುವ ಇಂತಹ ಸಣ್ಣ ನೌಕರರುಗಳಿಗೆ ಈ ರೀತಿಯಾಗಿ ತೊಂದರೆ ಕೊಡುವುದು ಸರಿಯಲ್ಲ ಎಂದು ನಾನು ಇಲ್ಲಿ ಇದನ್ನು ಸರಕಾರದ ಗಮನಕ್ಕೆ ತರುತ್ತೇನೆ ಮತ್ತು ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನು ಒಂದು ಮಾತು ಇಲ್ಲಿ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿರುವ ಸುಮಾರು ಹನ್ನೊಂದು ಲಕ್ಷ ಜನರಲ್ಲಿ ಸುಮಾರು ನಾಲ್ಕೂವರೆ ಲಕ್ಷ ಜನ ಬಿಲ್ಲವ ಜನಾಂಗಕ್ಕೆ ಸೇರಿದ ಬಡ ಜನರು. ಸರಕಾರದವರ ಈಗಿನ ಪಾನನಿರೋಧ ನೀತಿಯಿಂದಾಗಿ ಇವರ ಜೀವನೋಪಾಯ ಬಹಳ ಕಷ್ಟವಾಗಿದೆ. ಅದರಲ್ಲೂ ಈಗ ಏನಾಗಿದೆ ಎಂದರೆ, ದುಡ್ಡಿದ್ದರೆ ಅಂತಹವರು ಮಂಗಳೂರಿಗೆ ಹೋಗಿ ಎಲ್ಲಿ ಬೇಕೋ ಅಲ್ಲಿ ಹೋಗಿ ಕುಡಿಯಬಹುದು. ಆದರೆ ನಮ್ಮ ಕಳ್ಳು ಮಾಡುವ ಜನ ಕಳ್ಳು ಮಾರುವಂತಿಲ್ಲ. ಇದರಿಂದ ನಾನು ಸರಕಾರಕ್ಕೆ ಸೂಚನೆ ಮಾಡುವುದು ಏನೆಂದರೆ, ಸಂಪೂರ್ಣವಾಗಿ ಪಾನನಿರೋಧವನ್ನು ತೆಗೆದುಹಾಕಿಬಿಡಿ. ಇದರಿಂದ ನಮ್ಮ ಜಿಲ್ಲೆಯಲ್ಲಿರುವ ಸುಮಾರು ನಾಲ್ಕೂವರೆ ಲಕ್ಷ ಜನ ಇರುವ ಜನಾಂಗಕ್ಕೆ ಅವರ ಜೀವನೋಪಾಯ ಮಾಡಲು ಅನುಕೂಲವಾಗುತ್ತದೆ. ಆಹಾರ ಸಮಸ್ಯೆ ಪರಿಹಾರವಾಗುತ್ತದೆ. ಆದುದರಿಂದ ಸರಕಾರ ಈ ಪಾನ ನಿರೋಧದ ನೀತಿಯ ಬಗ್ಗೆ ಮತ್ತು ಈ ಸಮಸ್ಯೆಯ ಪರಿಹಾರದ ಬಗ್ಗೆ ಎಲ್ಲ ಜನರಿಗೂ ಸಂಶಯಬಾರದ ರೀತಿಯಲ್ಲಿ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಸೂಚಿಸುತ್ತೇನೆ.

†ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು.—1) ಸ್ವಾಮೀ, ಶ್ರೀಮಾನ್ ಘೋರ್ಪಡೆಯವರು ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುತ್ತಾ ಇರುವಾಗ ಕೆಲವು ಆಪಾದನೆಗಳನ್ನು ಮಾಡಿದರು. ಅವು ಹೇಗಿತ್ತು ಎಂದರೆ, ಹಿಂದೆ ಇದೇ ಸಭೆಯಲ್ಲಿ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ತಂದು ಅದರ ಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರ ಏನು ಆಪಾದನೆಗಳನ್ನು ಮಾಡಿದ್ದರೋ ಅದೇ ಆಪಾದನೆಗಳನ್ನೇ ಈಗಲೂ ಶ್ರೀಮಾನ್ ಚನ್ನಬಸಪ್ಪನವರು ಇಲ್ಲಿ ಪುನಃ ಹೇಳಿದ್ದಾರೆ. ಆಗ ಮಾತನಾಡಿದಂತೆ ಈಗಲೂ ಶರಾವತಿಯ ಪ್ರಕರಣಗಳು ಹಾಗೂ ಶರಾವತಿ ಯೋಜನೆಯ ಬಗ್ಗೆ ಹೇಳಿದರು. ಅವರು ಹಿಂದೆ ಈ ದೇಶದಲ್ಲಿ ಪಿ. ಡಬ್ಲ್ಯೂ. ಡಿ. ಮಂತ್ರಿಗಳಾಗಿದ್ದವರು. ಅಲ್ಲದೆ ಹಿಂದೆ ನಮ್ಮ ರಾಜ್ಯದಲ್ಲಿದ್ದ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಇಲ್ಲಿನ ಮಾನ್ಯ ಸಭೆಗೆ ಅವಿಶ್ವಾಸದ ನಿರ್ಣಯದ ಬಗ್ಗೆ ಉತ್ತರ ಕೊಡುವಾಗ ಸಾಕಷ್ಟು ಅಂಕೆಸಂಖ್ಯೆಗಳಿಂದ ಕೊಡಿದ ಉತ್ತರಗಳನ್ನು ಕೊಟ್ಟ ಮೇಲೆ ಆಗಿದ್ದ ಸದಸ್ಯರ ಮನಪರಿವರ್ತನೆಯಾದ ಮೇಲೆ ಈ ಅವಿಶ್ವಾಸದ ಪ್ರಕರಣ ಆಗ ಮುಕ್ತಾಯವಾಯಿತು. ನಮ್ಮ ಶ್ರೀಮಾನ್ ಚನ್ನಬಸಪ್ಪನವರೂ ಕೂಡ ಈಗ ಪುನಃ ಹೊಸದಾಗಿ ಇಲ್ಲಿ ಏನನ್ನೂ ಹೇಳಲಿಲ್ಲ. ಹಿಂದೆ ಮಾನ್ಯ ಶಿವಪ್ಪನವರು ಏನು ಹೇಳಿದ್ದರೋ ಅದನ್ನೇ ಪುನಃ ಇಲ್ಲಿ ಹೇಳಿರುವುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿಗೆ ಗಮನ ಕೊಡಬೇಕಾದ ಅವಶ್ಯಕತೆಯಿಲ್ಲ ಎಂದು ನಾನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ನಿನ್ನೆ ಒಬ್ಬ ಸನ್ಮಿತ್ರರು ಇಲ್ಲಿ ಮಾತನಾಡುವಾಗ ಈ ಸರಕಾರ ಬಹುಶಃ ಆರು ತಿಂಗಳವರೆಗೆ ಉಳಿಯುತ್ತೋ ಇಲ್ಲವೋ ಅಥವಾ ಒಂದು ವರ್ಷ ಕಾಲದ ಮೇಲೆ ಉಳಿಯುವುದೇ ಇಲ್ಲ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದು ಅವರಿಗೆ ಸರಿಯಾಗಿ ತಿಳಿದಿರಲಿಕ್ಕಿಲ್ಲ ಎಂದು ನನಗೆ ತೋರುತ್ತದೆ. ಮೊನ್ನೆ ಈ ಸಭೆಯ ಅಧ್ಯಕ್ಷರ ಚುನಾವಣೆ ನಡೆದಾಗ ಅವರ ಪಕ್ಷದಲ್ಲಿ 9 ಜನರು ಒಮ್ಮತದಿಂದ ಇದ್ದಾರೆ ಎಂದು ಹೇಳಿದರೂ ಅಂದು ಸಭೆಯಲ್ಲಿ ಮೂರು ಜನರು ವೋಟು ಮಾಡಲಿಲ್ಲ ಎನ್ನುವುದು ಪ್ರಾಯಶಃ ಅವರಿಗೆ ತಿಳಿಯಲಿಲ್ಲ ಎಂದು ಕಾಣುತ್ತದೆ. ಅದೂ ಅಲ್ಲದೆ ಈಗಾಗಲೇ ನಮ್ಮ ಪಕ್ಷ ಎಷ್ಟು ಪ್ರಬಲ ಪಕ್ಷ ಎನ್ನುವುದನ್ನು ಅಂದಿನ ದಿವಸವೇ ಈ ಸಭೆಗೆ ತೋರಿಸಿಕೊಟ್ಟಿದ್ದಾರೆ. ಆದುದರಿಂದ ಇಷ್ಟು ಒಮ್ಮತದಿಂದ ಇರುವ ನಮ್ಮ ಪಕ್ಷವನ್ನು ಯಾವ ಕಾಲಕ್ಕೂ ಹೊರದೂಡುವ ಸಾಧ್ಯತೆ ಇಲ್ಲ ಎನ್ನುವುದನ್ನು ಇಲ್ಲಿ ಹೇಳಲು ನಾನು ಬಯಸುತ್ತೇನೆ.

ಸ್ವಾಮಿ, ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ವಿಷಯದ ಬಗ್ಗೆ ತುಂಬಾ ಹೇಳಿದ್ದಾರೆ. ಇಲ್ಲಿ ಮಾನ್ಯ ಮುನಿಸಿಪಲ್ ಖಾತೆಯ ಮಂತ್ರಿಗಳೂ ಇರುವುದರಿಂದ ಇಲ್ಲಿ ಒಂದು ಮಾತು ಹೇಳಬೇಕಾಗಿದೆ. ಅದೇನೆಂದರೆ, ನಮ್ಮ ದೇಶದಲ್ಲಿ ಹುಬ್ಬಳ್ಳಿ, ಧಾರವಾಡ ಹಾಗೂ ಬೆಂಗಳೂರು ಇಲ್ಲಿ ಕಾರ್ಪೊರೇಷನ್ನುಗಳು ಇವೆ. ಬೇರೆ ಕಡೆಗಳಲ್ಲಿ ಇಲ್ಲ. ಅಂತಹ ಬೇರೆ ಕಡೆಗಳಲ್ಲಿ ಕಾರ್ಪೊರೇಷನ್ನು ಸ್ಥಾಪನೆ ಮಾಡಬೇಕೆಂದು ಇಷ್ಟಪಟ್ಟರೂ ಅದಕ್ಕೆ ಸರಿಯಾದ ಕಾನೂನು ನಮ್ಮಲ್ಲಿಲ್ಲ. ಇದರಿಂದಾಗಿ ಹೊಸ ಕಾರ್ಪೊರೇಷನ್ನುಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ. ಅದರಿಂದಾಗಿ ನಮ್ಮಲ್ಲಿರುವ ಕಾರ್ಪೊರೇಷನ್ ಆಕ್ಟನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಎಲ್ಲ ರಾಜ್ಯಕ್ಕೂ ಒಂದೇ ರೀತಿಯಾಗಿ ಅನ್ವಯವಾಗುವಂತೆ ಮತ್ತು ಹೊಸ ಕಾರ್ಪೊರೇಷನ್ನುಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತಹ ಒಂದು ಕಾನೂನನ್ನು ಇಲ್ಲಿ ತರುವುದು ಬಹಳ ಅಗತ್ಯವಾಗಿದೆ. ಈಗ ಸ್ಥಳೀಯ ಸಂಸ್ಥೆಗಳಿಗಾಗಿ ಬೇಕಾದಷ್ಟು ಸವಲತ್ತುಗಳನ್ನು ಕೊಡಬೇಕೆಂದು ಕೇಂದ್ರ ಸರಕಾರದವರು ಸಹಾಯವನ್ನೂ ಕೊಡುತ್ತಿದ್ದಾರೆ. ಈಚೆಗೆ ಕೇಂದ್ರದವರು

(ಶ್ರೀ ಎಂ. ಶ್ರೀನಿವಾಸ ನಾಯಕ್)

ಐದು ಲಕ್ಷ ರೂಪಾಯಿಗಳಷ್ಟು ಹಣ ಸಹಾಯ ಮಾಡಿದ್ದಾರೆ. ಜನತೆಯ ಕೋರಿಕೆಗಳನ್ನು ಮತ್ತು ಅವರ ಕೆಲಸಕಾರ್ಯಗಳನ್ನು ಮಾಡಲು ಅನುಕೂಲವಾಗುವಂತೆ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ತಮ್ಮ ಮೂಲಕ ಸರಕಾರಕ್ಕೆ ತಿಳಿಸಬಯಸುತ್ತೇನೆ. ಈಗ ನಮ್ಮ ಮಂಗಳೂರು ಎಂಬಲ್ಲಿ ಒಂದು ಕಾರ್ಪೊರೇಷನನ್ನು ಮಾಡಬೇಕೆಂದು ಸರಕಾರದಲ್ಲಿ ಬೇಡಿಕೆ ಇದೆ. ಇದನ್ನು ಮಾಡಲು ಸರಕಾರದಲ್ಲಿ ಸರಿಯಾದ ಕಾನೂನು ಈಗ ಇಲ್ಲ. ಇದಕ್ಕಾಗಿ ಕಾಂಪ್ರಿಹೆನ್ಸಿವ್ ಆದ ಒಂದು ಕಾರ್ಪೊರೇಷನ್ ಆಕ್ಟನ್ನು ತಂದು ಅದನ್ನು ಕಾರ್ಯಗತವಾಗುವ ಹಾಗೆ ಮಾಡಬೇಕು. ಆಗ ಮಂಗಳೂರಿನಲ್ಲೂ ಒಂದು ಕಾರ್ಪೊರೇಷನ್ನನ್ನು ಸ್ಥಾಪಿಸಲಿಕ್ಕೆ ಅವಕಾಶ ಸಿಗುತ್ತದೆ. ಈ ಬೇಡಿಕೆ ಸರಕಾರದ ಮುಂದೆ ಬಹು ದಿನಗಳಿಂದಲೂ ಇದೆ. ಇದಕ್ಕೆ ನಿಧಾನವಾಗಲು ಕಾರಣ ಈಗ ಸರಿಯಾದ ಕಾನೂನು ಇಲ್ಲದಿರುವುದು ಆಗಿದೆ. ಆದಷ್ಟು ಬೇಗ ಇದನ್ನು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದು ಕೊಳಚೆ ಪ್ರದೇಶಗಳು ನಮ್ಮ ದೇಶದಲ್ಲಿ ಬಹಳ ಕಡೆ ಇವೆ. ಇದನ್ನು ನಿರ್ಮೂಲ ಮಾಡಲು ತಕ್ಕ ಕ್ರಮಗಳನ್ನು ಸರಕಾರ ಪ್ರಥಮತಃ ಕೈಗೊಳ್ಳಬೇಕು. ಕೊಳಚೆ ನಿರ್ಮೂಲನಾ ಕಾರ್ಯಕ್ಕಾಗಿ ಕೇಂದ್ರ ಸರಕಾರದವರೂ ಹಾಗೂ ರಾಜ್ಯ ಸರಕಾರಗಳವರೂ ಸಹಾಯ ಮಾಡುತ್ತಿದ್ದಾರೆ. ಕೇಂದ್ರದವರು ಶೇಕಡಾ 50 ರಷ್ಟು ಗ್ರಾಂಟು ರಾಜ್ಯ ಸರಕಾರದವರು ಶೇಕಡಾ 37½ ರಷ್ಟು ಸಾಲ ಎಂದು ಸಹಾಯ ಮಾಡುತ್ತಿದ್ದಾರೆ. ಇದರಿಂದ ಇನ್ನು ಮುಂದೆ ಹೆಚ್ಚು ಕೊಳಚೆ ನಿರ್ಮೂಲನಾ ಕಾರ್ಯ ಕ್ರಮಗಳನ್ನು ತೆಗೆದುಕೊಂಡು ಮಾಡಬೇಕಾಗಿದೆ. ಇದನ್ನು ಇಲ್ಲಿಯವರೆಗೂ ಮಾಡದೇ ಇರುವುದನ್ನು ನೋಡಿ ನನಗೆ ತುಂಬಾ ವಿಷಾದವುಂಟಾಗಿದೆ. ಈಗ ಬೆಂಗಳೂರಿನಲ್ಲಿರುವಂತೆ ಮಂಗಳೂರಿನಲ್ಲೂ ಕೊಳಚೆ ಪ್ರದೇಶಗಳು ಇವೆ, ಹಾಗೂ ಇನ್ನೂ ಮೈಸೂರು ದೇಶದ ಇತರ ಕಡೆಗಳಲ್ಲಿಯೂ ಇದೆ. ಆದುದರಿಂದ ಸರಕಾರ ಇದರ ಬಗ್ಗೆ ಇನ್ನು ಮುಂದಾದರೂ ಕೊಳಚೆ ನಿರ್ಮೂಲನಾ ಕಾರ್ಯಕ್ರಮವನ್ನು ಹೆಚ್ಚು ಹೆಚ್ಚಾಗಿ ಮಾಡಬೇಕೆಂದು ಸೂಚಿಸುತ್ತೇನೆ. ಇದಕ್ಕಾಗಿ ಕೇಂದ್ರದವರು ಹಣಸಹಾಯ ಬೇರೆ ಮಾಡಿದ್ದಾರೆ. ಇಂತಹ ಅವಕಾಶಗಳನ್ನು ಉಪಯೋಗಿಸಿಕೊಂಡು ಇದರ ಕೆಲಸಗಳನ್ನು ಇನ್ನೂ ಹೆಚ್ಚು ಮಾಡುವುದು ಅಗತ್ಯವಾಗಿದೆ. ಇದರ ಕಡೆಗೆ ಸರಕಾರ ಈಗಲಾದರೂ ಹೆಚ್ಚು ಗಮನ ಕೊಡುತ್ತಾರೆಂದು ಆಶಿಸುತ್ತೇನೆ.

ಮತ್ತೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕೆಲವು ಕಡೆಗಳಲ್ಲಿ ಪ್ಲಾನಿಂಗು ಏರಿಯಾಗಳು ಎಂದು ನಿಗದಿ ಮಾಡಿದ್ದಾರೆ. ನಮ್ಮ ದೇಶದಲ್ಲಿರುವ ಸುಮಾರು ಹತ್ತೊಂಬತ್ತು ಜಿಲ್ಲೆಗಳಲ್ಲಿ ಸರಕಾರ ಕೇವಲ ಎಂಟು ಕಡೆಗಳಲ್ಲಿ ಮಾತ್ರ ಪ್ಲಾನಿಂಗು ಏರಿಯಾಗಳು ಎಂದು ನಿಗದಿ ಮಾಡಿದ್ದಾರೆ ಮತ್ತು ಇದಕ್ಕಾಗಿ ಪ್ಲಾನಿಂಗು ಬೋರ್ಡನ್ನು ಕೂಡ ನೇಮಿಸಿದ್ದಾರೆ. ಅದೇ ರೀತಿ ಬೇರೆ ಇತರ ಕಡೆಗಳಲ್ಲೂ ಮಾಡುವುದು ಅವಶ್ಯವಾಗಿದೆ. ಅದಕ್ಕೆ ತಕ್ಕ ಕ್ರಮವನ್ನು ಸರಕಾರ ಮಾಡಬೇಕೆಂದು ಇಲ್ಲಿ ಸೂಚಿಸಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರಾದ ಶ್ರೀ ಐತಾಳರವರು ಮಂಗಳೂರು ಬಂದರುಗಳ ನಿವೇಶನದ ಬಗ್ಗೆ ಹೇಳಿದರು. ಈಗಾಗಲೇ ಮಂಗಳೂರು ಬಂದರಿಗಾಗಿ ಪಣಂಬೂರು ಬಳಿ ಸುಮಾರು 800 ಎಕರೆಗಳಷ್ಟು ಪ್ರದೇಶಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಇದಕ್ಕಾಗಿ ಬೇರೆ ಕಡೆಯಲ್ಲೂ ಸುಮಾರು ನಾನೂರು ಎಕರೆಗಳಷ್ಟು ಜಾಗ ತೆಗೆದುಕೊಳ್ಳಬೇಕಾಗಿತ್ತು ಎಂದೂ ಇದೆ ಈಗ ಸರಕಾರದ ನೀತಿ ಏನಿವೆ ಎಂದರೆ ಹೊಸದಾಗಿ ಬಂದರುಗಳನ್ನು ಮಾಡುವಾಗ ಎಂದರೆ ಈಗ ಖಾಂಡ್ಲ ಬಂದರು ಹಾಗೂ ಟ್ಯುಟಿಕೋರೀನ್ ಬಂದರು ಮಾಡಬೇಕೆಂದು ಇದ್ದಾರೆ. ಇದಕ್ಕಾಗಿ ಇನ್ನು ಮುಂದೆ ಹತ್ತು ಸಾವಿರ ಎಕರೆಗಳಷ್ಟು ಜಾಗವನ್ನು ಕಾದಿರಿಸಬೇಕೆಂದು ಗೊತ್ತುಮಾಡಿದ್ದಾರೆ. ಏಕೆಂದರೆ ಖಾಂಡ್ಲ ಬಂದರನ್ನು ಮಾಡುವಾಗ ಬೊಂಬಾಯಿಯಲ್ಲಿ ಒಂದು ಎಕರೆಯಷ್ಟು ಸ್ಥಳವನ್ನು ಪಡೆಯಬೇಕಾದಾಗ ಸುಮಾರು 30 ಲಕ್ಷದಷ್ಟು ಹೆಚ್ಚು ಹಣ ಕೊಡಬೇಕಾಗಿ ಬಂತು. ಆದುದರಿಂದ ಇನ್ನು ಮುಂದೆ ಹೊಸದಾಗಿ ಬಂದರುಗಳನ್ನು ಮಾಡುವಾಗ ಹತ್ತು ಸಾವಿರ ಎಕರೆಗಳಷ್ಟು ಜಾಗವನ್ನು ಮೊದಲೇ ಕಾದಿರಿಸಿಕೊಳ್ಳಬೇಕು ಎಂದು ಸರಕಾರದವರು ನಿಗದಿ ಮಾಡಿದ್ದಾರೆ. ಇದರಿಂದ ಮುಂದೆ ಹೆಚ್ಚು ಜಾಗಕ್ಕಾಗಿ ಜಮೀನನ್ನು ಪಡೆಯುವುದು ಅಸಾಧ್ಯವಾಗುತ್ತದೆ ಎಂದು ಈಗಿನಿಂದಲೇ ಈ ರೀತಿ ಮಾಡಬೇಕೆಂದು ಮಾಡುತ್ತಿದ್ದಾರೆ. ಹೊಸದಾಗಿ ಬಂದರುಗಳನ್ನು ಮಾಡುವ ಅಗತ್ಯದ ಬಗ್ಗೆ ಮತ್ತು ಅದನ್ನು ಕಾರ್ಯಗತವಾಗುವಂತಹ ಯೋಜನೆಗಳನ್ನು ಮಾಡುವುದಕ್ಕೆ ಮೊದಲು ಸಾಕಷ್ಟು ಭೂಮಿಯನ್ನು ಮೊದಲೇ ನಿಗದಿ ಮಾಡಬೇಕು. ಈಗ ಮಂಗಳೂರು ಬಂದರಿಗಾಗಿ ಪಣಂಬೂರು ಬಳಿ ಸುಮಾರು 800 ಎಕರೆಗಳಷ್ಟು, ಫರ್ಟಿಲೈಸರು ಕಾರ್ಖಾನೆಗಳಿಗಾಗಿ ಸುಮಾರು 400 ಎಕರೆಗಳಷ್ಟು ಪ್ರದೇಶಗಳನ್ನು ಸರಕಾರ ಸ್ವಾಧೀನಕ್ಕೆ ಪಡೆಯಬೇಕೆಂದು ಪ್ರಯತ್ನ ಮಾಡಿದೆ. ಇದರಿಂದ ಇನ್ನು ಮುಂದೆ ಇಲ್ಲಿ ಹೆಚ್ಚು ಭೂಮಿಯನ್ನು ಪಡೆಯಲಿಕ್ಕೆ ಆಗಲಿಕ್ಕಿಲ್ಲ. ಮೈಸೂರು ಸಂಸ್ಥಾನದಲ್ಲಿ ಗೊಬ್ಬರವನ್ನು

ತಯಾರು ಮಾಡುವುದಕ್ಕಾಗಿ ಮಂಗಳೂರು ಬಂದರು ಪ್ರದೇಶದ ಹತ್ತಿರವೇ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರ್ಕಾರ ಕಾರ್ಯಕ್ರಮ ಕೈಕೊಂಡಿದೆ. ಅದಕ್ಕೆ ಬೇಕಾದ ಸ್ಥಳವನ್ನು ನಾವು ಈಗಾಗಲೇ ಒದಗಿಸಿಕೊಳ್ಳದೆ ಇದ್ದರೆ ಬಂದರು ಸ್ಥಾಪನೆಯಾದ ನಂತರ ಅಲ್ಲಿ ಕೂಡ ಒಂದು ಎಕರೆಗೆ 10 ಲಕ್ಷ ರೂಪಾಯಿ ಕ್ರಯ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಬೃಹತ್ ಪ್ರಮಾಣದ ಯೋಜನೆಗಾಗಿ ಸ್ಥಳ ಅಗತ್ಯವಿದೆ. ಅದನ್ನು ಪಡೆದುಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಇದೂ ಕೂಡ ಜನತೆಯ ಹಿತದೃಷ್ಟಿಯಿಂದಲೇ ಆಗಿದೆ ಎಂದು ಹೇಳಬಹುದಾಗಿದೆ. ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ ನಂತರ ಅದಕ್ಕೆ ಬೇಕಾಗುವ ಬೈಪ್ರಾಡಕ್ಟ್ಸ್ ನೆಫ್ತಲೀನ್ ತೈಲ ಶುದ್ಧೀಕರಣ ಕಾರ್ಖಾನೆಯಿಂದ ದೊರೆಯುತ್ತದೆ. ಇದಕ್ಕೂ ಸಹ ಸ್ಥಳಾವಕಾಶ ಬೇಕಾಗುತ್ತದೆ. ಈ ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಬೇಕಾಗುವ ಭೂಮಿಯನ್ನು ಸಹ ಈಗಲೇ ಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಇಂಥ ದೊಡ್ಡ ಯೋಜನೆಗಳನ್ನು ಮೈಸೂರು ಸಂಸ್ಥಾನದಲ್ಲಾಗಲೀ, ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲೀ ಸ್ಥಾಪಿಸುವುದಕ್ಕೆ ಅಸಾಧ್ಯವಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಮರೆಯಬಾರದು. ಇನ್ನೂ ಪಣಂಬೂರಿನಲ್ಲಿಯೇ ಬಂದರನ್ನು ನಿರ್ಮಾಣ ಮಾಡುವ ಕೆಲಸವನ್ನು ಏಕೆ ತೆಗೆದುಕೊಂಡರು ಎಂಬುದಾಗಿ ಮಾನ್ಯ ಸದಸ್ಯರಾದ ಐತಾಳ್ ಅವರು ಕೇಳಿದರು. ಸುಲ್ತಾನ್ ಬತ್ತೇರಿ ಮತ್ತು ಕೆಲವು ಕಡೆಗಳಲ್ಲಿ 20 ಅಡಿ ಆಳದಲ್ಲಿ ಬಂಡೆ ಕಲ್ಲು ಸಿಕ್ಕಿದೆ. ಈ ಬಗ್ಗೆ ತಜ್ಞರ ಅಭಿಪ್ರಾಯವೇನು ಎನ್ನುವುದನ್ನೂ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಬಂಡೆ ಕಲ್ಲು ಮೇಲ್ಭಾಗದಲ್ಲಿದ್ದಾಗ ಅದನ್ನು ಒಡೆಯುವುದಕ್ಕೆ ಸುಲಭವಾಗಿರುತ್ತದೆ. ಅದೇ ನೀರಿನ ಅಡಿಯಲ್ಲಿರುವಾಗ ಅದನ್ನು ಒಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ತಜ್ಞರ ಅಭಿಪ್ರಾಯವನ್ನು ತಿಳಿದುಕೊಂಡು ಪಣಂಬೂರಿನಲ್ಲಿ ಬಂದರು ಕೆಲಸವನ್ನು ತೆಗೆದುಕೊಳ್ಳಬೇಕಾಯಿತು. ಒಂದು ನಿರ್ಧಾರಕ್ಕೆ ಬರಬೇಕಾದರೆ ಅದರ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಈಗ ಆರಿಸಿರುವ ಸ್ಥಳದಲ್ಲಿ ಬಂಡೆಯು 40 ಅಡಿಗಳಿಗಿಂತಲೂ ಕೆಳಗೆ ಇರುವುದಾಗಿ ಕಂಡುಬಂದುದರಿಂದ, ಇಡೀ ಹಿಂದೂಸ್ಥಾನಕ್ಕೆ ಅತಿ ಆಳವಾದ ಬಂದರು ಪಣಂಬೂರಿನಲ್ಲಿ ಸ್ಥಾಪಿಸಬೇಕು ಎನ್ನುವ ತಜ್ಞರ ಅಭಿಪ್ರಾಯಕ್ಕೆ ಅನುಗುಣವಾಗಿ ಆ ಸ್ಥಳದಲ್ಲಿ ಬಂದರನ್ನು ರೂಪಿಸುವ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಕಲ್ಕತ್ತ ಬಂದರು 28 ಅಡಿ ಆಳವಿದೆ ಬೊಂಬಾಯಿ ಬಂದರು 28 ಅಡಿಗಳ ಆಳವಿದೆ, ಮದ್ರಾಸು ಬಂದರೂ 28 ಅಡಿಗಳ ಆಳವಿದೆ. ಇದರಿಂದಾಗಿ ಈ ಬಂದರುಗಳಲ್ಲಿ ಸುಮಾರು 40 – 60 ಸಾವಿರ ಟನ್‌ಗಳ ಸ್ಟೀಮರುಗಳು ಬಂದರಿನ ಸಮೀಪಕ್ಕೆ ಬಂದು ಖಾಲಿ ಮಾಡುತ್ತವೆ. ಮಂಗಳೂರು ಬಂದರು ಮುಖಾಂತರವಾಗಿ ಈಗಾಗಲೇ ಸ್ವಲ್ಪಮಟ್ಟಿಗೆ ಅದನ್ನು ಸಾಗಿಸಲಾಗುತ್ತಿದೆ. ಕುದುರೇಮುಖದಲ್ಲಿ ಎಷ್ಟೋ ಸಾವಿರ ಮಿಲಿಯನ್ ಟನ್ ಅದಿರು ಸಿಕ್ಕಿದೆ, ಅದು ಹೋಗಬೇಕಾದರೆ ಒಂದು ಲಕ್ಷ ಟನ್ ತೂಕದ ಸ್ಟೀಮರುಗಳು ಬಂದರಿಗೆ ಬರಬೇಕಾಗುವುದು ಆದ್ದರಿಂದ ಇಂಥ ಒಂದು ಬಂದರು ಪಣಂಬೂರಿನಲ್ಲಿ ಮಾತ್ರ ಸಾಧ್ಯ ಎನ್ನುವ ವಿಷಯವನ್ನು ಜಪಾನ್ ತಜ್ಞರು ಹೇಳಿದ್ದಾರೆ. ಮಲ್ಪೆಯಲ್ಲಿ ಕೂಡ 24 ಅಡಿ ಆಳದಲ್ಲಿ ಬಂಡೆಕಲ್ಲುಗಳಿವೆ ಎನ್ನುವುದನ್ನು ತಜ್ಞರು ಹೇಳಿದ್ದಾರೆ. ಅಲ್ಲಿ ಕೂಡ ದೊಡ್ಡ ಸ್ಟೀಮರುಗಳನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದೂ ಹೇಳಿದ್ದಾರೆ ವೆಸ್ಟ್ ಕೋಸ್ಟ್ ಕಮಿಟಿಯವರು ಕೊಟ್ಟಿರುವ ಅಭಿಪ್ರಾಯವನ್ನು ಸಹ ಗಣನೆಗೆ ತೆಗೆದುಕೊಂಡು ಪಣಂಬೂರಿನಲ್ಲಿ ದೊಡ್ಡ ಸ್ಟೀಮರುಗಳು ಬಂದು ನಿಲ್ಲುವುದಕ್ಕೆ ಅವಕಾಶವಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಬಂದರನ್ನು ರೂಪಿಸುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಸರ್ಕಾರ ಪಣಂಬೂರು ಬಂದರಿಗಾಗಿ ಈಗಾಗಲೇ 20 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಇನ್ನೂ ಕೂಡ ಹಣವನ್ನು ಮಂಜೂರು ಮಾಡುವ ಭರವಸೆ ಇದೆ. ಪಣಂಬೂರು ರೈಲ್ವೆ ಯೋಜನೆ ಬರೀ 9 ತಿಂಗಳಲ್ಲಿ ಪರಿಪೂರ್ಣವಾಗಲಿದೆ. ಬಂದರಿಗೆ ಬೇಕಾಗುವ ಸಾಮಾನುಗಳನ್ನು ಕೊಂಡುಹೋಗುವ ಬಗ್ಗೆ ಇದನ್ನು ಜರೂರಾಗಿ ಕಾರ್ಯಗತ ಮಾಡುತ್ತಿದ್ದಾರೆ ಎನ್ನುವ ವಿಚಾರ ಸಹ ಮೊನ್ನೆಯ ದಿನ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಮಾನ್ಯ ಮಿತ್ರರಾದ ಐತಾಳರವರು ಓದಿರಬಹುದು. ಪಣಂಬೂರು ಬಂದರು ಆಗುವುದಿಲ್ಲವೆಂದರೆ ಅಲ್ಲಿಗೆ ರೈಲು ಮಾರ್ಗವನ್ನು ಹಾಕುವ ಅವಶ್ಯಕತೆ ಇಲ್ಲ. ಪಣಂಬೂರು ಪ್ರದೇಶದಲ್ಲಿರುವ ಗೌಡ ಸಾರಸ್ವತ ಜನರಿಗೆ ಬಹಳ ಅನಾನುಕೂಲವಾಗಿದೆ, ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದರು. ಈ ವಿಚಾರವನ್ನು ಅವರಿಗೆ ಯಾರು ಹೇಳಿದರು ಎನ್ನುವುದು ನನಗೆ ತಿಳಿಯದು. ನಾನೂ ಗೌಡ ಸಾರಸ್ವತನಾಗಿದ್ದು ನಾನು ಆ ವಿಚಾರವನ್ನು ಕೇಳಿಲ್ಲ. ಈ ಸರ್ಕಾರದಿಂದ ಅವರಿಗೆ ಏನಾದರೂ ಅನಾಹುತವಾಗಿದ್ದರೆ ಅವರ ಜಾತಿಯವನಾದ ನನಗೆ ಆ ಜಾತಿ ಬಾಂಧವನಾದ ನನಗೆ, ಬಂದು ಹೇಳುತ್ತಿದ್ದರು. ಆ ಭರವಸೆ ನನಗಿದೆ. ನಾನೂ ಕೂಡ ಅಲ್ಲಿಗೆ ಹೋಗಿ ನೋಡಿದ್ದೇನೆ. ಸರ್ಕಾರ 1,200 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಕಾಟಿಪೊಳ್ಳ ಎನ್ನುವ ಸ್ಥಳದಲ್ಲಿ 200ಕ್ಕಿಂತ ಮಿಕ್ಕಿದ ಸಂಸಾರಗಳಿಗೆ ಅಲ್ಲಿ ಅನುಕೂಲಗಳನ್ನು ಮಾಡಿಕೊಟ್ಟಿದೆ. ಸರ್ಕಾರ

(ಶ್ರೀ ಎಂ. ಶ್ರೀನಿವಾಸ ನಾಯಕ್)

ವಶಪಡಿಸಿಕೊಂಡ ಸ್ಥಳದಲ್ಲಿದ್ದ ಮನೆಗಳನ್ನು ಕೂಡ ಬಿಟ್ಟುಕೊಂಡು ಹೋಗುವುದಕ್ಕೆ ವ್ಯವಸ್ಥೆಯನ್ನು ಮಾಡಿ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡಿ ಅವರಿಗೆ ಮನೆಗಳನ್ನು ಕಟ್ಟಿ ಕೊಟ್ಟು, ಅವರಿಗೆ ಅಲ್ಲಿಗೆ ಹೋಗಲು ಬೇಕಾಗುವ ಸಮಯವನ್ನು ಕೊಟ್ಟು, ಸರ್ಕಾರ ತುಂಬ ರಿಯಾಯಿತಿಗಳನ್ನು ಕೊಟ್ಟು ಆ ಜನರಿಗೆ ಶಾಲೆಯ ಸೌಕರ್ಯ, ನೀರಿನ ಸೌಕರ್ಯವನ್ನು ಒದಗಿಸಿದ್ದಾರೆ. ನೀರಿನ ಸೌಕರ್ಯಕ್ಕಾಗಿ ಬಾವಿಗಳನ್ನು ತೋಡಿಸಿದ್ದಾರೆ. ಮಂಗಳೂರು ನಗರದಲ್ಲಿರುವ ಸುಂದರವಾದ ಎಕ್ಸ್‌ಟೆನ್‌ಷನ್‌ಗಳು ಎಂದರೆ ಕಾಟಿಪೊಳ್ಳ ಎಕ್ಸ್‌ಟೆನ್‌ಷನ್. ಇದನ್ನು ಯಾರಾದರೂ ಹೋಗಿ ನೋಡುವ ಸ್ಥಳವಾಗಿದೆ. ನಾನು ಬೇಕಾದರೆ ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ ಅವರನ್ನು ಸಮಾಧಾನಪಡಿಸುತ್ತೇನೆಂಬ ಭರವಸೆಯನ್ನು ಈ ಸಮಯದಲ್ಲಿ ಕೊಡಲಿಕ್ಕೆ ಆಸೆ ಪಡುತ್ತಿದ್ದೇನೆ.

ಶ್ರೀ ಪಿ. ವಿ. ಐತಾಳ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಅಲ್ಲಿ ಈಗ ಪೈಪ್ ಹಾಕುತ್ತಿದ್ದಾರೆ. ಅಲ್ಲಿಗೆ ಜನರು ಹೋಗಿ ಎರಡು ವರ್ಷವಾಯಿತು. ಅವರು ಇದುವರೆಗೂ ಬಹಳ ಕಷ್ಟಪಟ್ಟಿದ್ದಾರೆ.

MR. SPEAKER.—There is no point of order here. If there is a breach of any rule, the work of the House may be disturbed to say that the debate should not proceed. Simply by repeating the words "point of order," it does not amount to a point of order.

SRI P. V. AITHALA.—He said that drinking water facilities were provided.........

MR. SPEAKER.—Trying to correct rightly or wrongly is not a point of order. Unless the Hon'ble member studies and knows what the concept of a point of order is, it will be difficult for me to understand him correctly. Otherwise, I will not take what he says as point of order.

I would desire that local currents should not be brought in this debate over the Governor's Address. The scheme is so big that this distinction that is sought to be drawn with Ponambur and Mangalore—all will vanish when there is a greater Mangalore. That decisions have been taken at the instance of somebody against Malpe and so on are all factual statements which might require mighty debates. Decisions are taken, so far as I am aware, after elaborate discussions. Decisions were made about the reconstruction of Mangalore port, how the sand will be removed and all that. There are big reports of which perhaps my good friends are not aware of. The idea that prior arrangements should be made when land acquisition proceedings are taken, further saying that this might be the area that was wanted or not and comparing it with the Bombay port or even Calcutta port, we are rushing at a pace which was not thought of before. If all these ideas are brought into the Governor's Address, there would be no end. I cannot curb the debate. That is why I said at the outset that members will remember that they have plenty of opportunities and there are many ways such as questions, resolutions, budget and all that.

ಶ್ರೀ ಎಂ. ಶ್ರೀನಿವಾಸ ನಾಯಕ್.—ಪಣಂಬೂರು ಬಂದರ ರಚನೆಯ ಮೂಲಕ ವಸತಿ ಸೌಕರ್ಯ ಒದಗಿಸಬೇಕಾದ ಜನರಿಗೆ ಸರಕಾರದವರು ಯೋಗ್ಯವಾದ ರೀತಿಯಲ್ಲಿ ಒಂದು ಒಳ್ಳೇ ಕಾಲನಿ ಮಾಡಿ ಕೊಟ್ಟಿದ್ದಾರೆ. ಇಂಥ ಸುಂದರವಾದ ಕಾಲನಿ ದಕ್ಷಿಣ ಹಿಂದುಸ್ಥಾನದಲ್ಲಿಯೇ ಬೇರೆ ಕಡೆ ಇರಲಾರದು

ಎಂದು ಅನಿಸುತ್ತದೆ. ಯಾರಾದರೂ ಸದಸ್ಯರು ಅದನ್ನು ನೋಡುವುದಕ್ಕಾಗಿ ಅಲ್ಲಿಗೆ ಬರಲ್ಲಿಕ್ಕೆ ಅಪೇಕ್ಷಿಸಿದರೆ ಅವರನ್ನು ನಾನು ಕರೆದುಕೊಂಡು ಹೋಗುತ್ತೇನೆ, ಅವರು ನನ್ನ ಗೆಸ್ಟ್ ಆಗಿ ಬರಬಹುದು.

ಇನ್ನು ಮಂಗಳೂರು ಹಾಸನ ಮಾರ್ಗ ವಿಚಾರ ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಆದರೆ ಹಿಂದಿನ ಸಲ ಅವರ ಭಾಷಣದಲ್ಲಿ ಅದು ನಮೂದಾಗಿತ್ತು. ಯಾವ ಕಾರಣದ ದೆಸೆಯಿಂದ ಈ ವಿಚಾರ ಬಿಟ್ಟುಹೋಗಿದೆ ಎಂಬುದು ಗೊತ್ತಾಗಿಲ್ಲ. ಈ ಮಾರ್ಗ ರಚನೆಯ ಕೆಲಸ ಬೇಗನೆ ಆಗಬೇಕಾಗಿದೆ. ಇದಕ್ಕೆ ಸರಕಾರದ ಗಮನ ಸೆಳೆಯ ಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಒಟ್ಟು ಐದು ಮೆಡಿಕಲ್ ಕಾಲೇಜುಗಳಿವೆ. ಇದರಲ್ಲಿ ನಾಲ್ಕು ಗವರ್ನ್ಮೆಂಟ್ ಕಾಲೇಜುಗಳಾಗಿವೆ. ಪ್ರೈವೇಟ್ ಕಾಲೇಜುಗಳು ಇರಬಾರದು, ಪ್ರೈವೇಟ್ ಕಾಲೇಜುಗಳನ್ನು ಸರಕಾರ ತೆಗೆದುಕೊಳ್ಳುವುದಕ್ಕೆ ಬೇಗನೆ ಕ್ರಮ ತೆಗೆದುಕೊಳ್ಳಬೇಕು ಎಂದು ಪ್ಲಾನಿಂಗ್ ಕಮಿಷನ್ ಅವರು ಕೂಡ ಸಲಹೆ ಮಾಡಿದ್ದಾರೆ. ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ವಿಷಯ ರಾಜ್ಯಪಾಲರ ಭಾಷಣದಲ್ಲಿ ಕೇಳಿ ಬರುವುದಿಲ್ಲ. ಆದುದರಿಂದ ಖಾಸಗಿ ಕಾಲೇಜುಗಳನ್ನು ಸರಕಾರ ತನ್ನ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಸರಕಾರದ ಗಮನ ಸೆಳೆಯಬಯಸುತ್ತೇನೆ.

ಇನ್ನು ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ವಿಚಾರ ಹೇಳುವುದಾದರೆ ಮಂಗಳೂರಿನಲ್ಲಿ ಇದಕ್ಕೆ ಬೇಕಾದ ಎಲ್ಲ ಸೌಕರ್ಯ ಇದೆ. ಈಗಾಗಲೇ ಸರಕಾರದ ಗಮನವನ್ನು ಅನೇಕ ಸಲ ಈ ವಿಚಾರದ ಕಡೆ ಸೆಳೆದಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ವಿಚಾರ ನಿರ್ದೇಶನ ಮಾಡದೇ ಇರುವುದರಿಂದ, ಯಾವ ಯಾವ ಕಾಲೇಜುಗಳಲ್ಲಿ ಇದಕ್ಕೆ ಸೌಕರ್ಯ ಇದೆಯೊ ಅಲ್ಲಿ ಎಂ.ಎಸ್.ಸಿ. ಹಾಗೂ ಪೋಸ್ಟ್ ಗ್ರಾಜ್ಯುಯೇಟ್ ಟ್ರೈನಿಂಗ್ ಕೋರ್ಸಸ್ ಪ್ರಾರಂಭಿಸಬೇಕು ಎಂದು ಸರಕಾರದಲ್ಲಿ ಕೇಳಿಕೊಳ್ಳುವುದಕ್ಕೆ ಆಶಿಸುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಯಾವ ಮಾಹಿತಿಯನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿಲ್ಲ. ಮೈಸೂರು ರಾಜ್ಯದಲ್ಲಿ 25,000 ಹಳ್ಳಿಗಳಿವೆ. ಆದರೆ ಇದುವರೆಗೆ 125 ರೂರಲ್ ವಾಟರ್ ಸಪ್ಲೈ ಸ್ಕೀಮ್ ಮಾತ್ರ ಆಗಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 600 ಹಳ್ಳಿಗಳಿವೆ, 300 ಹಳ್ಳಿಗಳಲ್ಲಿ ಗ್ರಾಮ ಪಂಚಾಯತಿಗಳಿದ್ದರೂ ಕೂಡ ನೀರು ಸರಬರಾಜಿನ ಯೋಜನೆಯಾಗಿಲ್ಲ. ಈ ಯೋಜನೆ ಬೇಗನೆ ಕಾರ್ಯಗತವಾಗಬೇಕು, ಸರಕಾರ ಇದನ್ನು ಕೈಕೊಳ್ಳಬೇಕಾದುದು ಅತ್ಯಗತ್ಯ. ಅರ್ಬನ್ ವಾಟರ್ ಸಪ್ಲೈ ಒಡಾವಣೆಯಾಗಿದೆ. ಆದರೂ ಕೂಡ ಸೌಕರ್ಯ ಒದಗಿಸಿ ಕೊಡುವುದಕ್ಕೆ ಒಂದ ನಿರ್ದೇಶನ ಕೊಟ್ಟಿರುವುದು ರಾಜ್ಯಪಾಲರ ಭಾಷಣದಲ್ಲಿ ಕಂಡುಬರುವುದಿಲ್ಲ. ಮಂಗಳೂರಿನಲ್ಲಿ ವಾಟರ್ ಸಪ್ಲೈ ಹೆಚ್ಚು ಮಾಡಬೇಕೆಂದು ನಾನು ಸರಕಾರದ ಗಮನ ಸೆಳೆದಿದ್ದೇನೆ. ಇದನ್ನು ಬೇಗನೆ ಕೈಕೊಳ್ಳಬೇಕಾದುದು ಅಗತ್ಯ. ಇತ್ತ ಕಡೆ ಸರಕಾರದ ಗಮನ ಸೆಳೆಯಲು ಆಶೆಪಡುತ್ತೇನೆ.

ಮೈಸೂರು ರಾಜ್ಯದಲ್ಲಿ ಬರುವ ಐದು ವರ್ಷ ಅಭಿವೃದ್ಧಿ ಕಾರ್ಯಕ್ರಮ ಕೈಕೊಳ್ಳಲು ಒಂದು ಸುಭದ್ರ ಸರಕಾರ ಸ್ಥಾಪನೆಯಾಗಲು ನಮ್ಮ ಪಕ್ಷದವರು ಮಹಾ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಆರಿಸಿ ಬಂದು ಪುನಃ ಸರಕಾರ ಸ್ಥಾಪನೆ ಮಾಡಿದ್ದಾರೆ. ಜನತೆಯ ಏಳಿಗೆಗಾಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಈ ಸರಕಾರ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿದೆ. ಬಹು ದೊಡ್ಡ ಪ್ರಮಾಣದಲ್ಲಿ ನಮ್ಮ ಪಕ್ಷವು ಚುನಾವಣೆಯಲ್ಲಿ ಆರಿಸಿ ಬಂದಿರುವುದರಿಂದ ಸರಕಾರಕ್ಕೆ ಇದು ಸಾಧ್ಯವಾಗಿದೆ. ಬರುವ ಐದು ವರ್ಷಗಳಲ್ಲಿ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಳಿರುವ ಹಾಗೆ ಜನತೆಯ ಅಭಿವೃದ್ಧಿಗಾಗಿ ಅವರ ಬೇಡಿಕೆಗಳನ್ನು ಗಣನೆಗೆ ತೆಗೆದುಕೊಂಡು ಪೂರೈಸುವುದಕ್ಕೆ ಪ್ರಯತ್ನ ಮಾಡಲಾಗುವುದು. ಜನತೆಯ ಆರೋಗ್ಯ, ಹಾಗೂ ಆಹಾರಧಾನ್ಯ ಸಾಕಷ್ಟು ಪೂರೈಸುವುದಕ್ಕೆ ಬೇಕಾದ ಸೂಕ್ತ ಕ್ರಮ ನಮ್ಮ ಸರಕಾರ ಕೈಕೊಳ್ಳುತ್ತದೆ ಎಂಬುವುದರಲ್ಲಿ ಯಾವ ಸಂಶಯವಿಲ್ಲ. ಕೊನೆಯದಾಗಿ ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಸರಕಾರದೊಡನೆ ಸಹಕರಿಬೇಕಾಗಿ ಕೇಳಿಕೊಂಡು ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

12-30 P.M.

† **Sri V. N. PATIL** (Humnabad).— Mr. Speaker, I wish to draw the attention of the hon'ble Members of the House to the fact that the

(SRI V. N. PATIL)

Governor's Adress did not mention anything about policy statement of the Government which it wants to carry out during its period. More or less the Adress looks as if it is a review of several departments of the Government. The council of Ministers have miserably failed in formulating any policy which they want to carry out during the ensuing five years. Of course, it is not their fault also because if at all they had any policy, they would have mentioned it. The hon'ble members from the other side were generous in criticising the opposition that we are divided and cannot stand united. They said that all the ninety membeirs of the opposition belong to several parties. The Central Government is something which is......

Mr. SPEAKER.—The hon'ble member is not right in referring to the Central Government which is not here. We must respect another sovereign legislature and not criticise it at all.

Sri V. N. PATIL.—Thank you for the suggestion. The opposition here is not a divided house; it is one well-knit party to give constructive suggestions to the Government when the government is doing wrong. As regards the cheap popularity attributed to the opposition by the Congress members, I only wish to say that the facts speak for themselves and not the speeches. As for the policies, I have already submitted that the Congress Government are lacking in formulating any policy and if at all there are any, they are only just to see that they survive and keep themselves in power. The Congress party wishes to keep themselves in power at any cost, may be with cheap popularity. It is mainly due to that, they are able to keep themselves in power.

About socialism they wish to implement their programme inside the State in their own way. Here, actually what is happening is, it is a house divided amongst themselves. The Congress represents its own class, not agriculturist class, not middle class nor any class. They have converted themselves to a ruling class. To keep themselves in power they are formulating their own formula which cannot be stated as policy. In order to do away with any criticism, the easiest way is to give facts and figures and say that we have done so much. Take for exmple wells. The Government have dug wells. But is there water? I can show how much in each village there are wells dug but without water. In my own constituency more than 1?0 wells are there where not even a drop of water can be seen. Up to 2? feet there was no water. So there was no need to proceed further with the work and build upper portion of the well. But, they have seen its being cement plastered and to find some individual to inaugurate it. When it is a question of spending public funds, it is your honest duty to see that you are able to give full satisfaction for the money spent. But when not even a single drop of water was there, they should have found out a better place. For instance I can give the exmple of Niduvancha. There is not a drop of water and yet somebody went there to inaugurate it. So, what I wish to stress

is, please do'nt use public funds like this. Of course you are boasting that you are loyal to the country. But, having heard your several speeches. Just a month before, we have not forgotten what all you said about us. You have called us by several names. Apart from all this, there must be some limit to hypocracy. So, when you find there is no water, there is no need to spend money. Just because it has to be inaugurated by a certain minister or individual, let us not waste public money. Ours is a country consisting of poor people. Let us not spend public money in such a way. There are instances where people are without any shelter. Nearly 90 per cent of the people are living in huts. Just if they light a matchstick for lighting a lamp and a spark goes to the roof the entire huts go. Have you at least one village where people have tin-huts? You are spending so much money for zinc sheets. The number of zinc sheets that are used far arranging a Congress exhibition, if they are supplied to one district each year, they can use it for ten villages each year. So, please give them facilities. If a poor man goes to a Taluk head quarter and asks a Tahsildar for some zinc sheets, he does not get even two sheets. But if there is a requisition from a sugar factory or big people, the request is immediately complied with. In Bidar district there are five factories. I am not opposing your giving them the facilities. But I am only speaking how poor people are harassed. Take the rural housing scheme. The benefit is taken away by the well placed income class. So, it has become a Government which wants to create a privileged class, (a moneyed class). Take the case of rural agriculturists. Hardly two years back the late Sri Lal Bahadur Sastry gave a slogan "Jai Kisan Jai Jawan." He wanted to emphasise that the Kisan was the backbone of the country. When out solidiers went to fight with Pakistan and Chinese, he gave this slogan. If you do not give all that he requires, what is the use? When hundred huts of theirs are burnt, there is no protection? What is the use of this slogan which cannot be implemented? The opposition wants to give practical suggestions for the rural upliftment. Please treat the opposition as your younger brother which is entitled to give constructive suggestion for the betterment of the family. Treat it as members of one family and not as opposition. A rural agricultural labourer gets about 3 kgs. of jowar per day and after earning if he were to lose all that, what is the use? Should you not give enough protection? When a person applies for supply of zinc sheets, the Tahsildar says no money; the Deputy Commissioner says no funds. This should not happen. That is why the rural folk has not taken the plans seriously. If at all plans are to be made successful, it is the duty of the Government to see that the benefits of the plans are derived by the rural folks and they are given minimum human rights and comforts. What they want is minimum necessities; they are not asking for luxuries and comforts. Your inauguration need not be at their cost. I was unfortunate to be in a village during the election time when one Minister came and did five inaugurations. About twenty jeeps were there and six or eight of them were Government vehicles. He happens to be one from the people's Ministry; it was not Nizam's

(SRI V. N. PATIL)

raj or Maharaja's raj. He was a Minister elected by the people. Why should he be so much afraid? After all, he is a son of the soil and as such he need not have so much protection. The people are not going to fight against the Minister; they only want to put forward their grievances before him. He comes to open a small power house: he presses a button and light flows. Some Ministers come to open some schools here and there otherwise, those schools will not be blessed. Because the Minister came and opened a school, education started flowing from it. This is hypocracy and cheap popularity which the members on the other side are after. It is for members on the other side to be a model for us and do something constructively so that we can emulate their example. The Congress Party in power was responsible for removing one or so tents, mosques and things like that and that too hardly a fortnight or a month ago. Why I am saying all this is because the members on the otherside hurled charges of cheap popularity against the members of the Opposition. We are not fond of cheap popularity.

Coming to procurement and levy, the levy collections are there. Is there any proper arrangement to store the levy collected? In one village in my district hundreds of quintals of jowar are rotting for want of proper storage; it has become powder. When you are not able to store it, you ought not to have collected it from the agriculturists. You never bother to preserve the foodgrains you collect from the agriculturists as levy and after a few months you give back the same foodgrains to the agriculturists at a higher price. Is it not legalised blackmarket that you are doing? Is it not encouragement to blackmarket which you are giving. You are doing it now because you are in power but remember they are cursing you and in another 5 years they will teach you a lesson. We the opposition members do not make much capital out of it.

About the houses burnt at Banneri and Mudba, please see whether you can instruct your machinery to give them at least some token help even at this late stage. If at all you are kind enough and if you feel you have a duty to them, please do something at least now. There are more than 100 people with children of ages varying from three months to 9 months. Distribute zinc sheets to the rural peasantry. You have coined the solgan 'Jai Kisan' but this solgan will reach him after the kisan is dead. If the kisan is deed you cannot survive. Feed him and let us survive thereby.

As regards industrialisation, no industry worth the name has come up. About steel we are still. About the Aluminium Factory, it is under consideration. Several mineral industries and several factories could be started but licences are given only for the starting of khandasari and sugar factories.

About the agitation against capitation fee, it is a disgrace. You proclaim socialism from the house tops but you are continuing this disgraceful capitation fee; it should be abolished throughout

the State. The private colleges shold not be allowed to fatten themselves by levving capitation fees of Rs. 5,000, Rs. 10,000 and Rs. 15,000 ; the poor students cannot afford it and only rich students get admission by paying capitation fee, Private colleges should be allowed to function provided they are coming with a missionary spirit; they should not start these colleges with a profit motive. Especially in the Hyderabad Karnatak Education Society we find only 5 per cent Kannada-speaking people and the others are those who give capitation fees of Rs. 10,000 and Rs. 15,000. This should not be their motive. Those students come from Delhi, Punjab and other places paying fabulous capitation fees. If this capitation fee is not abolished, if the education policy is not brought in tune with the spirit of the times, how can you expect the younger generation that is coming up to have satisfaction ? There is hunger for education but it is not satisfied. So, there is mass unrest. Educated unemployment is soaring like anything. Fifteen hundred poeple are being retrenched from the Settlement Department alone without providing any alternative employment for them. The next 30th of April is 'D' day for them; after that they will be on the streets. For two years they have served the country to the best of their ability. What is the future for them? This shows that you only proclaim socialism and pay lip sympathy to it but when it comes to translating it into practice, you do precious little. It is necessary to give them their due rights. With these remarks, I thank the Hon'ble Speaker who was kind enough to allot me some time.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಸನ್ಮಾನ್ಯ ಸಭಾಪತಿಗಳೇ, ಹೊಸದಾಗಿ ದೇಶದಲ್ಲಿ ಚುನಾವಣೆಗಳು ನಡೆದಮೇಲೆ ನಮ್ಮ ರಾಜ್ಯದಲ್ಲಿ ಜನತೆಯನ್ನು ಪ್ರತಿನಿಧಿಸತಕ್ಕ ಪ್ರತಿಯೊಂದು ಸ್ಥಾನೀಕ ಚುನಾವಣೆಗಳ ಬಗ್ಗೆ ನಮ್ಮ ಸರ್ಕಾರದವರ ದೃಷ್ಟಿಯೇನಿದೆ, ಇವರ ಧೋರಣೆಯೇನಿದೆ ಅನ್ನುವುದರ ಬಗ್ಗೆ ನಾನು ನಮ್ಮ ರಾಜ್ಯಪಾಲರು ಅಪ್ಪಣೆಕೊಡಿಸಿರತಕ್ಕ ಭಾಷಣದ ಪ್ರತಿಯಲ್ಲಿ ಹುಡುಕಿನೋಡಿದೆ, ಅದರಲ್ಲಿ ಏನೂ ಇಲ್ಲ. ರಾಜ್ಯಪಾಲರು ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಬಗ್ಗೆ ಏನಾದರೊಂದು ಸಂದೇಶವನ್ನು ನೀಡಬಹುದು ಎಂಬುದಾಗಿ ನಾನು ಭಾವಿಸಿದ್ದೆ, ಆದರೆ ಅವರೇನನ್ನೂ ಹೇಳದಿರುವುದು ನನಗೆ ಬಹಳ ನಿರಾಶೆಯನ್ನುಂಟುಮಾಡಿದೆ. ಅದಕ್ಕಾಗಿ ನಾನು ವಂದನಾರ್ಪಣೆಯ ನಿರ್ಣಯದ ಬಗ್ಗೆ ಒಂದು ತಿದ್ದುಪಡಿಯನ್ನೂ ಸಹಾ ಸೂಚಿಸಬೇಕಾಗಿ ಬಂತು, ಅದನ್ನು ಮಾಡಿದ್ದೇನೆ. ಈ ಹಿಂದೆ ಮಾತನಾಡಿದ ಒಬ್ಬ ಮಾನ್ಯ ಸದಸ್ಯರು ಹುಬ್ಬಳ್ಳಿ ಹಾಗೂ ಧಾರ್ವಾಡ ಮುನಿಸಿಪಾಲಿಟಿಗಳನ್ನು ಏತಕ್ಕಾಗಿ ಸೂಪರ್‌ಸೀಡ್ ಮಾಡಲಾಯಿತು ಅನ್ನುವುದರ ಬಗ್ಗೆ ಕೆಲವು ಕಾರಣಗಳನ್ನು ಕೊಟ್ಟರು. ಹಾಗೆ ಅವರು ಕಾರಣಗಳನ್ನು ಕೊಡುತ್ತ—ಪಾಕಿಸ್ತಾನದ ಯುದ್ಧ ಸಂಭವಿಸಿದ್ದುದರಿಂದ ಇಲ್ಲಿ ನಡೆಯಬೇಕಾಗಿದ್ದ ಚುನಾವಣೆಗೆ ಆತಂಕ ಉಂಟಾಯಿತು, ಆದುದರಿಂದ ಅದನ್ನು ತಾ॥ 10-10-1965ರಲ್ಲಿ ಚುನಾವಣೆಗಳನ್ನು ನಡೆಸಲಿಕ್ಕಾಗಲಿಲ್ಲ ಎಂಬುದಾಗಿ ಹೇಳಿದರು. ಆದರೆ ಇತ್ತೀಚೆಗೆ ದೇಶದಲ್ಲಿ ಹೊಸ ಚುನಾವಣೆಗಳು ನಡೆದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದಕ್ಕೆ ಇರತಕ್ಕ ಅಡೆತಡೆಗಳಾದರೂ ಏನು ? ಹಿಂದೆ ಆ ಚುನಾವಣೆಗಳನ್ನು ಮುಂದೂಡತಕ್ಕ ಕಾಲದಲ್ಲಿ ದೇಶದಲ್ಲಿ ಏನು ಒಂದು ಗಂಭೀರವಾದ ಪರಿಸ್ಥಿತಿ ಇತ್ತೋ ಅಂಥ ಗಂಭೀರ ಪರಿಸ್ಥಿತಿ ಈ ದಿವಸ ಇರುವುದಿಲ್ಲ. ಆದಾಗ್ಯೂ ಈ ಚುನಾವಣೆಗಳನ್ನು ಸರ್ಕಾರದವರು ಮುಂದೂಡುತ್ತಾ ಬರುತ್ತಿರುವುದನ್ನು ನೋಡಿದರೆ ಇವರ ಧ್ಯೇಯ ಧೋರಣೆಗಳು ಪ್ರಜಾಸತ್ತೆಯ ಮೂಲ ಧ್ಯೇಯಕ್ಕೆ ಕೊಡಲಿಯನ್ನು ಹಾಕಿದಂತೆ ಆಗಿಲ್ಲವೇ ಎಂಬುದು ಸಾಕಷ್ಟು ನಾವು ಪರಿಶೀಲನೆ ಮಾಡಬೇಕಾದಂಥ ವಿಷಯ. ಮೊನ್ನೆತಾನೆ ನಡೆದ ಕಾಂಗ್ರೆಸ್ ಚುನಾವಣೆಯ ಘೋಷಣೆಯ ಪತ್ರದಲ್ಲಿ ಕೇಂದ್ರೀಕೃತವಾಗಿರುವ ರಾಜಕೀಯ ಅಧಿಕಾರವನ್ನು ನಾವು ಕೂಡಲೇ ವಿಕೇಂದ್ರೀಕರಣ ಮಾಡುವುದಾಗಿ ಹೇಳಿದ್ದಾರೆ. ಅದನ್ನು ನಾನೀಗ ಅವರ ಗಮನಕ್ಕೆ ತರಬೇಕಾಗಿದೆ. ಸರ್ಕಾರದವರು ಸೂಪರ್‌ಸೀಡ್ ಮಾಡಿರತಕ್ಕ ಸ್ಥಳಗಳಾದರೂ ಅವು ಎಂಥವು, ಬೆಂಗಳೂರು ಮತ್ತು ಧಾರ್ವಾಡ—ಹುಬ್ಬಳ್ಳಿಯಂಥ ಬಹಳ ಮುಂದುವರಿಯುವ ನಗರಗಳಲ್ಲೀ ಪ್ರಜಾಸತ್ತಾತ್ಮಕ ಆಡಳಿತದ ಮೂಲ

(ಶ್ರೀ ಎಸ್. ಎಸ್. ಶೆಟ್ಟರ್)

ಸಂಸ್ಥೆಗಳಾದ ಸ್ಥಳೀಯ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಿರುವುದನ್ನು ನೋಡಿದರೆ ಸ್ಥಳೀಯ ಸಂಸ್ಥೆಗಳ ಆಡಳಿತವನ್ನೇ ಈ ರಾಜ್ಯದಲ್ಲಿ ಕೊನೆಮಾಡಿದಂತಾಗಿದೆ ಅನ್ನಬಹುದು. ಸಂದರ್ಭಗಳು ಹೀಗಿದ್ದಾಗ್ಯೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸಂಸ್ಥೆಗಳನ್ನು ಕುರಿತು ಒಂದು ಮಾತನ್ನಾದರೂ ಹೇಳದಿರುವುದು ಪ್ರಜಾತಂತ್ರಕ್ಕೇ ದೊಡ್ಡ ಕೊಡಲಿಯ ಪೆಟ್ಟು ಬಿದ್ದಂತಾಗಿದೆ. ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ವಂದನಾರ್ಪಣೆಯನ್ನು ಸೂಚಿಸಿದ ಮಾನ್ಯ ಸದಸ್ಯರು ನಮ್ಮ ರಾಜ್ಯದಲ್ಲಿ ಪ್ರಜಾತಂತ್ರಕ್ಕೆ ಪೆಟ್ಟು ಬಿದ್ದು ಅದರ ಮೂಗಿನಲ್ಲಿ ರಕ್ತ ಸೋರುತ್ತಿದೆ ಎಂದು ಹೇಳಿದರು; ನಾನಾದರೋ ಅದನ್ನು ಹಾಗೆ ಹೇಳುವುದಿಲ್ಲ; ನಮ್ಮ ರಾಜ್ಯದಲ್ಲಿ ಪ್ರಜಾತಂತ್ರದ ಕೊಲೆಯೇ ಆಗಿದೆ ಎಂದು ಹೇಳುತ್ತೇನೆ. ಈ ಹಿಂದೆ 19 9ರಲ್ಲಿ ಅದನ್ನು ಸೂಪರ್‌ಸೀಡ್ ಮಾಡುವ ಕಾಲಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಹುಬ್ಬಳ್ಳಿ ಧಾರವಾಡಕ್ಕೆ ಬಂದಿದ್ದರು. ಆ ವೇಳೆಗೆ ಅಲ್ಲಿಯ ಪರಿಸ್ಥಿತಿ ಬಹಳ ಕೆಟ್ಟಿತ್ತು. ಅದನ್ನು ನೋಡಿ ಅವರು ಸೂಪರ್‌ಸೀಡ್ ಮಾಡುವಂತೆ ಹೇಳಿದರು; ಹಾಗೆ ನೋಟೀಸನ್ನು ಕೊಟ್ಟು ಅದನ್ನು ಮುಗಿಸಿದರು. ಆದರೆ ಆ ದಿವಸ ಅಲ್ಲಿ ಏನು ಒಂದು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಅಲ್ಲಿ ಈಗಲೂ ಇದೆ. ಅಲ್ಲಿರತಕ್ಕ ಸ್ಲಂ ಏರಿಯಾಗಳ ವಿಚಾರದಲ್ಲಿ ನಾನು ಅನೇಕಾವರ್ತಿ ಶ್ರೀಮಾನ್ ನಿಜಲಿಂಗಪ್ಪನವರಿಗೂ ಮತ್ತು ಶ್ರೀಮಾನ್ ಜತ್ತಿಯವರಿಗೂ ತಿಳಿಸಿದ್ದೇನೆ. ಆದರೆ ಅದೇ ಸ್ಥಿತಿ ಈಗಲೂ ಇದೆ. ಈ ಹಿಂದೆ ಶ್ರೀಮಾನ್ ಜತ್ತಿಯವರು ಹುಬ್ಬಳ್ಳಿ ಮತ್ತು ಧಾರವಾಡ ಈ ಎರಡು ಪಟ್ಟಣಗಳನ್ನೂ ಒಂದುಗೂಡಿಸಿ ಅಲ್ಲಿ ಒಂದು ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿದಾಗ, ನಾವೆಲ್ಲರೂ ಬಹಳ ಸಂತೋಷಪಟ್ಟು, ನಮಗೆ ನಾಗರೀಕರಿಗೆ ದೊರೆಯುವಂಥ ಹೆಚ್ಚು ಸೌಲಭ್ಯಗಳು ದೊರೆಯುತ್ತವೆ, ನಮ್ಮ ಪಟ್ಟಣವೂ ಆ ಬೆಂಗಳೂರು ನಗರದ ಹಾಗೆ ಒಂದು ಸುಧಾರಣೆಯಾದ ನಗರವಾಗಬಹುದು ಅದಕ್ಕಾಗಿ ನಾವು ಸ್ವಲ್ಪ ಹೆಚ್ಚಿನ ತೆರಿಗೆಗಳನ್ನು ಕೊಟ್ಟರೂ ಚಿಂತೆಯಿಲ್ಲ ಎಂದು ಒಪ್ಪಿಕೊಂಡೆವು. ಆದರೆ ಆಗಿದ್ದ ಪರಿಸ್ಥಿತಿಗೂ ಈಗಿರತಕ್ಕ ಪರಿಸ್ಥಿತಿಗೂ ಹೋಲಿಕೆ ಮಾಡಿನೋಡಿದರೆ ಅಲ್ಲಿ ಯಾವ ಒಂದು ಬದಲಾವಣೆಯೂ ಕಂಡು ಬರುತ್ತಿಲ್ಲ, ಎಲ್ಲವೂ ಹಿಂದೆ ಇದ್ದಂತೆಯೇ ಈಗಲೂ ಇದೆ, ಆದರೆ ನಾವು ತೆರತಕ್ಕ ಕರಭಾರ ಒಂದು ಮಾತ್ರ ಅತಿಶಯವಾಗಿ ಹೆಚ್ಚಿಸಿರುವುದು ಕಂಡುಬರುತ್ತಿದೆ. ಅಲ್ಲಿ ಮನೆಯ ಕರಭಾರ ನೀರಿನ ಕರಭಾರ ಇವುಗಳೆಲ್ಲವನ್ನೂ ಅತಿಶಯವಾಗಿ ಹೆಚ್ಚಿಸಿದ್ದಾರೆ. ಆದರೆ ಈಗಾಗಲೇ ಹಿಂದೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ಹುಬ್ಬಳ್ಳಿ—ಧಾರವಾಡ ಮುನಿಸಿಪಾಲಿಟಿಯ ಸದಸ್ಯರ ನಾಮಕರಣ ವಿಚಾರದಲ್ಲಿ ಏನೊಂದು ಮಾತನ್ನು ಹೇಳಿದ್ದಾರೋ ಆ ಮಾತಿನಲ್ಲಿ ಒಂದು ಅರ್ಥ ಇದೆ. ಅಲ್ಲಿ ನಾಮಿನೇಟ್ ಮಾಡಿರತಕ್ಕ ಸದಸ್ಯರ ವಿಚಾರದಲ್ಲಿ ಒಂದು ಚಮತ್ಕಾರ ನಡೆದಿದೆ. ಅದುವರಿಂದರೇ ಅಲ್ಲಿ ಸರ್ಕಾರದವರು ಅವರಿಗೆ ಮೇಲಿಂದ ಮೇಲೆ ಜೀವದಾನ ಮಾಡುತ್ತಾ ಬಂದಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕವರು ಅವರ ಪಕ್ಷಕ್ಕೆ ಸೇರದೆ ಇದ್ದಲ್ಲಿ ಅವರು ಹೀಗೆ ಮಾಡುತ್ತಿರಲಿಲ್ಲ. ಅಲ್ಲಿ ಚುನಾವಣೆಗಳನ್ನು ತಡೆಹಿಡಿದಿರುವುದರ ಬಗ್ಗೆ ಬೆಂಗಳೂರು ಹೈಕೋರ್ಟಿನಲ್ಲಿ ಒಂದು ರಿಟ್‌ನ್ನು ಹಾಕಲಾಗಿದೆ. ಇಷ್ಟೆಲ್ಲಾ ಆಗಿದ್ದರೂ ದೇಶದಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಏನಾದರೊಂದು ಸೂಚನೆಯನ್ನು ಆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೊಡಬೇಕಾಗಿತ್ತು ಎಂದು ನನಗೆ ಅನಿಸುತ್ತಿದೆ. ನಾನು ಅದರ ಬಗ್ಗೆ ಬಹಳ ತವಕಪಟ್ಟುಕೊಂಡು ನೋಡುತ್ತಿದ್ದೆನು. ಆದರೆ ಅವರೇನೂ ಹೇಳಿಲ್ಲ. ಅದಕ್ಕಾಗಿ ನಾನು ಈ ವಿಚಾರದಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸತಕ್ಕ ಅಗತ್ಯ ಉಂಟಾಯಿತು, ಅದನ್ನು ಅಧ್ಯಕ್ಷರ ಕಛೇರಿಗೆ ಕಳುಹಿಸಿದ್ದೇನೆ, ಅದನ್ನು ಅವರು ಅಂಗೀಕಾರ ಮಾಡುತ್ತಾರೆಂಬ ಆಶೆ ನನಗಿದೆ.

ಇನ್ನು ಪೊಲೀಸ್ ನೌಕರರಿಗೆ ಒದಗಿಸರತಕ್ಕ ವಸತಿ ಸೌಲಭ್ಯದ ಬಗ್ಗೆ ರಾಜ್ಯಪಾಲರು ಬಹಳ ಹೇಳಿದ್ದಾರೆ. ಇದು ಒಂದು ಸಂತೋಷದ ವಿಚಾರವೇ ಸರಿ. ಆದರೆ ಇಲ್ಲಿ ಇವರಿಗೆ ಯಾವರೀತಿ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆಯೋ ಅದೇ ರೀತಿಯಲ್ಲಿ ಹುಬ್ಬಳ್ಳಿ, ಧಾರವಾಡ ಮತ್ತು ಇನ್ನಿತರೇ ಮುನಿಸಿಪಾಲಿಟಿಗಳು ಇರತಕ್ಕ ಸ್ಥಳಗಳಲ್ಲೂ ಬಡನೌಕರರಿಗೂ, ಕೂಲಿಗಾರರಿಗೂ ಮತ್ತು ಬಾಡಿಗೆದಾರರಿಗೂ ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕಾದ್ದು ಅತ್ಯಗತ್ಯ. ದೇಶದಲ್ಲಿದಲ್ಲಿರತಕ್ಕ ಅನೇಕ ನಿರ್ಗತಿಕರಿಗೆ ಸ್ವಂತ ವಾಸದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗದಿದ್ದಲ್ಲಿ ಅವರಿಗೆ ಸುಲಭವಾಗಿ ಬಾಡಿಗೆಗಾದರೂ ಮನೆಗಳು ಸಿಕ್ಕುವಂತೆ ಒಂದು ಏರ್ಪಾಡನ್ನು ಮಾಡಬೇಕಾದ್ದು ಅತ್ಯವಶ್ಯಕ. ಇಲ್ಲಿಯವರೆಗೂ ಈ ಜನರ ಬಗ್ಗೆ ಸರ್ಕಾರವು ನಿಗಾ ತೆಗೆದುಕೊಳ್ಳದೆ ಇದ್ದುದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಇನ್ನು ಆ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ನಾಲ್ಕನೆಯ ಮೂರು ಭಾಗದಷ್ಟು ಜನರು ಕೊಳಚೆಯ ಜಾಗದಲ್ಲಿ ವಾಸಿಸುತ್ತಾರೆ. ತಿರುಗಾಡಲು ಶಕ್ಯವಿಲ್ಲದಂಥ ಓಣಿಗಳಲ್ಲಿ, ಚರಂಡಿಗಳಿಲ್ಲದ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ವಿಚಾರವಾಗಿ ನಾನೇ ಅನೇಕಾವರ್ತಿ ಮುಖ್ಯ ಮಂತ್ರಿಗಳಿಗೂ ಮತ್ತು ಶ್ರೀಮಾನ್ ಜತ್ತಿಯವರಿಗೂ ತಿಳಿಸಿದ್ದೇನೆ......

ಶ್ರೀ ಎಸ್. ವಿ. ಅಗ್ನಿಹೋತ್ರಿ.— ಮೊದಲು ಅಲ್ಲಿ ಎಷ್ಟು ಕೊಳಚೆಯ ಪ್ರದೇಶವಿತ್ತು, ಈಗ ಅಲ್ಲಿ ಎಷ್ಟಿದೆ ಎಂಬುದನ್ನು ತಿಳಿಸುವಿರಾ ?

ಶ್ರೀ ಎಸ್. ಎಸ್. ಶೆಟ್ಟರ್.— ನಾನು ಹೇಳುತ್ತಿರುವುದರಲ್ಲಿ ಸತ್ಯಕ್ಕೆ ದೂರವಾದ್ದು ಯಾವುದೂ ಇಲ್ಲ ; ನಾನು ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ತೋರಿಸಿದಾಗ, ಆ ದಿವಸ ಅಲ್ಲಿ ಏನು ಒಂದು ಪರಿಸ್ಥಿತಿ ಇತ್ತೋ ಈ ದಿವಸವೂ ಅಲ್ಲಿ ಅದೇ ಪರಿಸ್ಥಿತಿಯಿದೆ, ಇದನ್ನು ಶ್ರೀಮಾನ್ ನಿಜಲಿಂಗಪ್ಪನವರನ್ನೇ ಕರೆದುಕೊಂಡು ಹೋಗಿ ತಾವು ಪರಿಶೀಲನೆ ಮಾಡಬಹುದು. ಆದರೆ ಶ್ರೀ ಅಗ್ನಿಹೋತ್ರಿಗಳೂ ಕೂಡ ನಮ್ಮ ಹಾಗೆ ಚುನಾವಣೆಯಲ್ಲಿ ನಿಂತು ಬಂದವರು, ಅವರಿಗೆ ಅಲ್ಲಿಯ ಪ್ರತಿಯೊಂದು ವಿಚಾರಗಳೂ ಚೆನ್ನಾಗಿ ಗೊತ್ತಿದೆ, ಹಾಗೆ ಗೊತ್ತಿದ್ದರೂ ಅವರು ಇಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿ ಬಂದು ಏನೋ ಒಂದು ಕಾಂಗ್ರೆಸ್ ಪಾರ್ಟಿಯಲ್ಲಿದ್ದೇನೆಂಬ ಮಾತ್ರಕ್ಕೆ ಇದ್ದುದನ್ನು ಇದ್ದಹಾಗೆ ಹೇಳದೆ ಅದನ್ನು ಒಂದು ವಿಪರ್ಯಾಸಮಾಡಿ ಹೇಳಿದ್ದನ್ನು ನೋಡಿ ಬಹಳ ವ್ಯಸನ ಉಂಟಾಯಿತು.

1.00 P.M.

ಈ ಕ್ವಾರ್ಟರುಗಳನ್ನು ಕಟ್ಟಿಸಿದಮೇಲೆ ಅದನ್ನು ಬಡವರಿಗೆ ಕೊಟ್ಟರೆ ತಿಂಗಳಿಗೆ ಸಾವಿರಾರು ರೂಪಾಯಿಗಳ ಪಗಾರ ಪಡೆಯಬಹುದೆಂದು ಅಂತಹವರಿಗೆ ಕೊಟ್ಟರು.

MR. SPEAKER.—Will the hon'ble member be able to conclude in another five minutes ?

SRI S. S. SHETTAR.—I may be permitted to continue my speech on Monday.

MR. SPEAKER.—Then I do not think I should keep the House waiting.

Before I adjourn the House, I wish to bring to the notice of the Members that 24th is Good Friday. Naturally a request has come from the Christian members saying that the House should not meet. The next day that is 25th is Saturday. I do not know if all the holidays could be observed. It does not mean every sectional holiday. But Good Friday has some peculiar significance. Therefore I believe request has come. I think that we might concede. I suppose the House agrees. On Saturday we are working in the morning. Again 26th instant is Sunday. I am mentioning this because some members were anxious to go. I am looking to the convenience of the members. Would that be all right ?......All members have to co-operate.

SRI S. NIJALINGAPPA (Chief Minister).—The members will have three holidays at a stretch from the 21th.

MR. SPEAKER.—So that is agreed. The House will now adjourn and re-assemble at 1 P.M. on Monday, the 20th.

The Assembly adjourned at five minutes past one of the Clock to meet again at One of the Clock on Monday, the 20th March 1967.

WD 8198—GPB—500—2-5-1967